QUESTION FOR ANSWER ON THE DAY

(but not taken up)

Completion of Pick-ups in Sathanur and Uyyamballi Hoblies.

*Q.—574. Sri K. S. SHIVALINGE GOWDA (Virupakshipura).—

Will the Government be pleased to state:—

(*a*) Whether it has come to their notice that the work pertaining to some pick-ups in Sathanur and Uyyamballi Hoblies which was started 5 to 6 years ago has not yet been completed;

(*b*) If so, the reasons therefor ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not arise in view of relpy to Clause (*a*).

PAPERS LAID ON THE TABLE

Sri K. MLLAPPA.—(Minister for Industries and Commerce).-Sir, I beg to lay on the Table of the House—

Notification No. CI 28 RKD 61, dated 24th July 1962 (Modification of the Schedule to the Mysore Khadi and Village Industries Act, 1956) as required under sub-section (2) of Section 33 of the Mysore Khadi and Village Industries Act, 1956.

Member's Representation

Sri C. J. MUCKANNAPPA (Sira).—The Chair was pleased to request the Chief Minister to place the relevant papers regarding excess payments made to contractors in regard to Sharavathi Project.

Mr. SPEAKER.—It will be done. Papers will be singled out, collected and placed on the Table of the House.

REPORT OF THE RESOURCES AND ECONOMY COMMITTEE

Motion to consider.

(Debate Continued)

(*Many Hon'ble Members stood up to take part in the discussion*).

Mr. SPEAKER.—What time will the Hon'ble Minister for Finance take to reply ?

Sri B. D. JATTI (Minister for Finance).—I will require 45 minutes, Sir.

Mr. SPEAKER.—We can go on till 5 p. m. definitely...

Sri S. SIVAPPA (Sravanabelgola).—Sir, more than fifty members are anxious to take part in the debate. They want to take part in the debate and made very good suggestions. The Hon'ble Finance Minister must give ample time for the Members. Because, he is quoting from this report for everything. I request the Hon'ble Minister through the Hon'ble Speaker to give one more day for discussion on this Report, so that many more members can participate.

Mr. SPEAKER.—Yesterday, somebody mentioned that because there was no other work for this House, this Report had been put for discussion for three days. If Members think thus, it becomes very embarassing.

Sri ANGADI CHANNABASAPPA.—(Hadagalli) Information in the Papers disclose that the Government is not ready to place the Bills...

Mr. SPEAKER.—Who said that ?

Sri ANGADI CHANNABASAPPA.—The Papers, and that also on account of the Select Committee...

Mr. SPEAKER.—Members may have very interesting ideas. I do not know whether the hon. Member has any authority to speak on behalf of the other side.

Sri ANGADI CHANNABASAPPA.—That is my information. And that is my honest impression, Sir. It was revealed by the Papers that the Congress organisation tried to put the Select Committee for a purpose and that means that they are not ready with...

Mr. SPEAKER.—The Hon'ble Member is not right. With regard to the business of this House, I have to decide what business has to be transacted.

Sri ANGADI CHANNABASAPPA.—Unless denied, I am relying on my information, Sir.

Mr. SPEAKER.—He may rely, but I won't permit.

Sri B. D. JATTI.—Government is ready with all the Bills. If the House is prepared to take them up even now, I am prepared to place the Bills.

Sri ANGADI CHANNABASAPPA.—You don't know our difficulty.

Mr. SPEAKER.—What business has to be done is for me to decide. The question is whether the members want a day for tomorrow or not for discussion on this Report.

HON'BLE MEMBERS.—We want this discussion continue tomorrow also Sir.

Sri B. D. JATTI.—May I request the Hon'ble Leader of the Opposition and other Hon'ble Members that they may close their discussion by today and if they want a reply, I will give after question hour tomorrow?

Mr. SPEAKER.—The Finance Minister suggests that debate can go on for the whole of today and that he will reply tomorrow. Even if he wishes to reply today I will not permit him to do so. There will be no reply today. We shall see for tomorrow.

Sri K. LAKKAPPA (Hebbur).—Tomorrow at least till lunch time.

Mr. SPEAKER.—I have already said; tomorrow we wil seel.

†**ಶ್ರೀ ಎ. ಕೃಷ್ಣಶೆಟ್ಟಿ** (ಮಂಗಳೂರು II).—ಅಧ್ಯಕ್ಷರೇ ಈ ವರದಿಯನ್ನು ನಾನು ಸ್ವಾಗತಿಸುತ್ತೇನೆ. ಇಲ್ಲಿ ಸೂಚಿಸಿರುವಂಥ ಕೆಲವು ವಿಷಯಗಳನ್ನು ನಾನು ಸಂಪೂರ್ಣವಾಗಿ ಒಪ್ಪಿ ಅವುಗಳ ಬಗ್ಗೆ ನನ್ನ ಅಭಿಪ್ರಾಯವನ್ನು ತಮ್ಮ ಮುಂದಿಡಲು ನಾನು ಇಚ್ಛೆಪಡುತ್ತೇನೆ. ಇಲ್ಲಿ ಸೂಚಿಸಿದಂತೆ ಈಗ ನಡೆಯುವ ಆಡಳಿತದಲ್ಲಿ ಮೇಲಿನಿಂದ ಕೆಳಗಿನವರೆಗೂ ಇರುವ ಲೋಪದೋಷಗಳೇನು, ಮತ್ತು ಎಷ್ಟರಮಟ್ಟಿಗೆ ಅನಾವಶ್ಯಕವಾದ ಖರ್ಚುವೆಚ್ಚಗಳಿವೆ ಎಂಬುದನ್ನು ತಿಳಿಸಿ ಅದಕ್ಕೆ ಬೇಕಾದ ಸಲಹೆಗಳನ್ನು ಕೊಡುವ ಮೂಲಕವೇ ಎಷ್ಟೋ ಮಟ್ಟಿಗೆ ನಮ್ಮ ಉತ್ಪತ್ತಿಯನ್ನು ಅಧಿಕ ಮಾಡಬಹುದೆಂದು ಹೇಳಿ ಕೆಲವು ಸೂಚನೆಗಳನ್ನು ಅವರು ಇಟ್ಟಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಈ ಕಮಿಟಿ ಬಹಳ ದೊಡ್ಡ ಕೆಲಸಮಾಡಿದೆ. ಅದೂ ಕೂಡ, ಈ ಕೆಲಸವನ್ನು ಯಾವ ಸಮಯದಲ್ಲಿ ನಮ್ಮ ಸರ್ಕಾರಕ್ಕೆ ಮತ್ತು ಆಡಳಿತಕ್ಕೆ ಅವಶ್ಯಕವಾಗಿ ಸಲಹೆಗಳು ಬೇಕೋ ಆ ಸಮಯಕ್ಕೆ ಸರಿಯಾಗಿ ಬಂದಿವೆ. ದೇಶದಾದ್ಯಂತ ನೋಡಿದರೆ ಕೇಂದ್ರದಿಂದ ಹಿಡಿದು ಪ್ರಾಂತ್ಯಗಳವರೆಗೂ ತೆರಿಗೆಗಳು ಏರುವ ಸಮಯದಲ್ಲಿ ಹಾಗೂ ತೆರಿಗೆಗಳನ್ನು ಹೇರುವುದಕ್ಕೆ ವಿರುದ್ಧವಾಗಿ ಹೋರಾಟ ಮಾಡುತ್ತಿರುವ ಸಮಯದಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆ ಎರಡನೆಯ ವರ್ಷ ನಡೆಯುವ ಹೊತ್ತಿಗೆ ತೆರಿಗೆಗಳ ಹೊರೆ ಜನರ ಮೇಲೆ ಬಂದಿರುವುದನ್ನು ಜನರು ಬಿದ್ದು ಬಿದ್ದು ವಿರೋಧಿಸುವಾಗ ಇಲ್ಲಿ ಬಂದಿರುವ ಅಭಿಪ್ರಾಯಗಳನ್ನು ಎಷ್ಟರಮಟ್ಟಿಗೆ ಸ್ವೀಕರಿಸಬೇಕು ಎಷ್ಟರಮಟ್ಟಿಗೆ ತಿದ್ದುಪಡಿ ಮಾಡಬೇಕೆಂಬುದನ್ನು ನಾವೀಗ ಪರಿಶೀಲಿಸಬೇಕಾಗಿದೆ.

ಮೊದಲಿನಿಂದ ಹೇಳಬೇಕಾದರೆ, ನಮ್ಮ ಮಂತ್ರಿಮಂಡಲ ಮತ್ತು ಈ ಎರಡು ಸಭೆಗಳು, ಮತ್ತು ಸೆಕ್ರೆಟೇರಿಯಟ್—ಈ ಎರಡು ವಿಷಯಗಳಿಗೂ ಚರ್ಚೆ ಮಾಡುತ್ತೇನೆ. ನಾನು ಒಂದೇ ಮಾತಿನಲ್ಲಿ ಹೇಳುವುದಿದ್ದರೆ, ನಮಗೆ ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಯಬೇಕು. ಸುಮ್ಮನೆ ಆಶೆಪಟ್ಟರೆ ಪ್ರಯೋಜನವಿಲ್ಲ. ಆಶೆಯನ್ನು ಕಾರ್ಯಗತ ಮಾಡುವುದಕ್ಕೆ ನಾವು ಕೈಕೊಳ್ಳುವ ಕಾರ್ಯಗಳೇನೆಂಬುದನ್ನು ನೋಡಬೇಕು. ಏಕೆಂದರೆ, ವರದಿಗಳು ನಮ್ಮ ಮುಂದೆ ಬಂದಿರುವುದು ಇದೇ ಮೊದಲನೆಯದಲ್ಲ. ಈ ಹಿಂದೆ ಮಾಧವ ರಾಯರ ವರದಿ; ಘೋರವಾಲರ ವರದಿಗಳೂ ಬಂದಿದ್ದುವು. ಇದು ಮೂರನೆಯದಾಗಿ ಬಂದಿದ್ದಾಗಿದೆ. ಆದ್ದರಿಂದ ನಾವು ನಿಷ್ಠೆಯಿಂದ ಹೊರತು ಈ ವರದಿಯಿಂದ ಕೆಲವು ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದಿದ್ದರೆ, ಈ ವರದಿಯಲ್ಲಿ ಹೇಳಿರುವಂತೆ ಮಂತ್ರಿಮಂಡಲದಿಂದ ಮೊದಲು ಷುರುಮಾಡಬೇಕು, "Doctor cure thyself first—"ಡಾಕ್ಟರೇ ನಿಮಗೆ ಮೊದಲು ಮದ್ದು ಮಾಡಿಕೊಳ್ಳಿ" ಎಂಬಂತೆ ನೀವು ಮೊದಲು ಷುರುಮಾಡಬೇಕು. . ಇದನ್ನೇಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ ಒಂದು ಸೂಚನೆ ಮಾಡಿದೆ; ಈ ಮಂತ್ರಿಮಂಡಲ ಇಂತಿಷ್ಟು ದೊಡ್ಡದಿದ್ದರೆ ಸಾಕು ಎಂದು. ನಾವು ಯಾವುದೊಂದಕ್ಕೂ ನೆರೆ ಪ್ರಾಂತ್ಯಗಳ ಉದಾಹರಣೆ ತೆಗೆದುಕೊಂಡು ಮಾತನಾಡುತ್ತೇವೆ. ಮದ್ರಾಸ್ ಉದಾಹರಣೆ ತೆಗೆದುಕೊಳ್ಳಿ, ಕೇರಳ ನೋಡ ಎನ್ನುತ್ತೇವೆ. ಆದರೆ ಮಂತ್ರಿಮಂಡಲದ ವಿಚಾರದಲ್ಲಿ ಅಂಥ ಉದಾಹರಣೆ ತೆಗೆದುಕೊಂಡಿದ್ದೀರಾ? ಅದಕ್ಕೂ ಹಾಗೆ ತೆಗೆದುಕೊಳ್ಳುವುದು ಅಗತ್ಯ. ಅದೂ ಅಲ್ಲದೆ, ಮಂತ್ರಿಮಂಡಲದ ವಿಸ್ತರಣೆಯನ್ನು ಕಾರ್ಯಭಾರದ ಮೇಲೆ, ಕರ್ತವ್ಯ ನೆರವೇರಿಸುವ ದೃಷ್ಟಿಯ ಮೇಲೆ ಮಾಡಿದ್ದಲ್ಲಿ ಅದು ಸರಿ; ಸ್ವಾಗತಾರ್ಹ. ಬದಲು, ಇದು ವಿಷವರ್ತುಳದ ಕೆಲಸ! ಮಂತ್ರಿಮಂಡಳದ ವಿಸ್ತರಣೆಯನ್ನು ಕೆಲವು ಜನರನ್ನು ತರುವುದಕ್ಕಾಗಿ ಮಾಡಿದ್ದೀರಿ. ಇದು ಒಂದು ಪ್ರಶ್ನೆಯನ್ನು ನಿವಾರಿಸುವ ಬದಲು ಹೊಸ ಪ್ರಶ್ನೆಯನ್ನು ಉಂಟುಮಾಡುತ್ತದೆ.

ಇನ್ನು ಸೆಕ್ರೆಟೇರಿಯಟ್ ವಿಷಯಕ್ಕೆ ಬಂದರೆ, ಇದು ಮದ್ರಾಸ್ ಸೆಕ್ರೆಟೇರಿಯಟ್ಟಿಗಿಂತ ದೊಡ್ಡದು. ಈ ವಿಷಯವನ್ನಾಗಲೇ ಕೆಲವರು ಹೇಳಿದ್ದಾರೆ. ನಾನು ಹೇಳಿದರೆ ಪುನರಾವರ್ತನೆಯಾಗುತ್ತದೆಂದು ಹೇಳಕೂಡದು. ಆದರೂ Reiterate ಮಾಡುವ ಸಲವಾಗಿ ಒಂದೆರಡು ಮಾತು ಹೇಳುತ್ತೇನೆ.

ಈ ಸೆಕ್ರೆಟೇರಿಯಟ್ಟಿನಲ್ಲಿ ಕೇವಲ ಕೆಲಸವನ್ನು ಪರಿಣಾಮಕಾರಿಯಾಗಿ ನಡೆಸುವ ದೃಷ್ಟಿಯಿಂದ ಎಷ್ಟು ಬೇಕೋ ಅಷ್ಟು ಮಾತ್ರ ಇಟ್ಟುಕೊಡು ಬಾಕಿಯಾದ್ದನ್ನು

ಸರಿಪಡಿಸಬೇಕಾದ್ದು ಅಗತ್ಯ. ಹಾಗೆಯೇ ಶಾಸನ ಸಭೆಗಳ ವಿಚಾರ ಹೇಳುವುದಾದರೆ ನಮ್ಮ ಪ್ರಾಂತ್ಯದಲ್ಲಿ] ಲೆಜಿಸ್ಲೇಟಿವ್ ಕೌನ್ಸಿಲ್ಲನ್ನು ಇಟ್ಟುಕೊಳ್ಳುವುದು ಅಗತ್ಯವಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಸೆಕ್ರೆಟೇರಿಯಟ್ಟನ್ನು ಅಷ್ಟಕ್ಕೇ ಬಿಟ್ಟರಲ್ಲಾ.

ಶ್ರೀ ಎ. ಕೃಷ್ಣ ಶೆಟ್ಟಿ.—ಮದ್ರಾಸಿನಲ್ಲಿ ಕಡಮೆ ಖರ್ಚಿನಲ್ಲಿ ಹೆಚ್ಚು ಕೆಲಸ ನಡೆಯುತ್ತಿದೆ. ಇಲ್ಲಿಯ ಸೆಕ್ರೆಟೇರಿಯಟ್ಟಿನಲ್ಲಿರುವ ಸಿಬ್ಬಂದಿ ಮದ್ರಾಸ್ ಸೆಕ್ರೆಟೇರಿಯಟ್ಟಿಗಿಂತ ಜಾಸ್ತಿ. ಆಡಳಿತವರ್ಗವೂ ದೊಡ್ಡದು.

Mr. SPEAKER.—Is he sure that it is greater in extent?

Sri A. KRISHNA SHETTY.—It is for the Minister to say that it is smaller in size.

Sri B. D. JATTI.—If he wants to criticise, let him criticise correctly. Let him say how many departments are there, how many Secretaries, Deputy Secretaries, Under Secretaries, Superintendents and Caseworkers are there in both the places and then compare.

ಶ್ರೀ ಎ. ಕೃಷ್ಣ ಶೆಟ್ಟಿ.—ಇನ್ನು ನಾನು ಕೌನ್ಸಿಲ್ ವಿಷಯ ಹೇಳುವಾಗ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಇದು ಖಂಡಿತವಾಗಿ ಅನಾವಶ್ಯಕ. ಇದು ಅಗತ್ಯವೇ ಇಲ್ಲವೆಂಬುದಾಗಿ ನಾನು ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬೇಕಾಗಿದೆ. ನನಗೆ ಮೊದಲು ಮಾತನಾಡಿದವರ ಪೈಕಿ ಕೆಲವರು ಇದೇ ಟೀಕೆಯನ್ನು ಮಾಡಿದ್ದಾರೆಂದು ನಾನು ತಿಳಿಯುತ್ತೇನೆ. ಅದರಲ್ಲಿ ನಿಜವಾಗಿ ಕೆಲವು ಜವಾಬ್ದಾರಿಯುತ ಮತ್ತು ಆಡಳಿತ ಅನುಭವಸ್ಥರು ಅದರಲ್ಲಿಯೂ ಇಂತಹ ಕಾರ್ಯದಲ್ಲಿ ನುರಿತಿರುವವರು ಇರುವುದೇನೋ ಸರಿ. ಆದರೆ ಇತ್ತೀಚಿನ ಆಡಳಿತಪಕ್ಷ ಒಂದು ಕೈಗೂಸಾಗಿಬಂದಿದೆ. ಇದಕ್ಕೆ ಮೇಲೆ ಬೇರೆ ನಿದರ್ಶನವೇನೂ ಹೇಳಬೇಕಾಗಿಲ್ಲವೆಂದೆನಿಸುತ್ತದೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಕ್ಷೇತ್ರದಿಂದ ಆರಿಸಿಬಂದಿರುವರು. ಅವರಿಗೆ ನೇರವಾಗಿ ಬಂದವರು ಈಗ ಕೌನ್ಸಿಲ್‌ನಲ್ಲಿದ್ದಾರೆ. ಆದರೆ ಈ ಕಮಿಟಿ ವರದಿಯಲ್ಲಿ ಈ ಮಂತ್ರಿಮಂಡಲದ ಮತ್ತು ಈ ಕೌನ್ಸಿಲ್ ವಿಷಯವನ್ನು ಅಷ್ಟು ಮುಂದುವರಿದು ಹೇಳಲಿಲ್ಲ. ಆದರೆ ಅವರು ಏಕೆ ಹೇಳಲಿಲ್ಲ ಎಂದು ನನಗೆ ಹೇಳುವುದಕ್ಕೆ ಬರುವುದಿಲ್ಲ. ಅದನ್ನೂ ಕೂಡ ಆಲೋಚಿಸುವ ಅವಶ್ಯಕತೆ ನಿಜವಾಗಿತ್ತು. ಆದರೆ ಒಟ್ಟಿನಲ್ಲಿ ಈಗಿರತಕ್ಕ ಕೌನ್ಸಿಲ್ ಅಗತ್ಯವಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಡಿವಿಜನಲ್ ಕಮಿಷನರುಗಳನ್ನು ನೇಮಕ ಮಾಡಿ ನಮ್ಮ ಪ್ರಾಂತಗಳನ್ನು ಕೆಲವು ಡಿವಿಜನ್‌ಗಳಾಗಿ ಮಾಡಿದ್ದಾರೆ. ನಾನು ಇದು ಅಗತ್ಯವಿಲ್ಲವೆಂದು ಹೇಳುತ್ತೇನೆ. ಈಗಿನ ಡಿವಿಜನಲ್ ಆಫೀಸು ಕೆಲಸಗಳು ಬರೀ ಪೋಸ್ಟ್ ಆಫೀಸು ಕೆಲಸಗಳು ನಡೆಯುವಂತಾಗಿದೆ. ಆಫೀಸರು ತೀರ್ಮಾನಗಳೇನೂ ಅಲ್ಲಿ ಆಗುವುದಂತೂ ಇಲ್ಲ, ಅಪೀಲು ಅಧಿಕಾರಿಗಳು ಇರುವುದು ಇಲ್ಲ. ಈಗಿರುವ ಸಂದರ್ಭದಲ್ಲಿ ಪ್ರತಿಯೊಂದಕ್ಕೂ ಬೆಂಗಳೂರಿಗೆ ಬರಬೇಕಾಗುತ್ತದೆಂದು ನಾವು ಕಾಣಬಹುದು. ಈಗಲೇ ಈ ರೀತಿಯಾಗಿ ಮುಂದುವರೆಸಿಕೊಂಡು ಹೋಗುವುದು ಸರಿಯಲ್ಲ. ಇದರಿಂದ ಅನೇಕ ಕೆಲಸಕಾರ್ಯಗಳು ಸೌಲಭ್ಯವಾಗಿ ಶೀಘ್ರವಾಗಿ ನಡೆಯುವುದಕ್ಕೆ ಬದಲಾಗಿ ಬಹಳ ಮೆಲ್ಲಗೆ, ನಿಧಾನವಾಗಿ ನಡೆಯುತ್ತವೆ. ಆದ್ದರಿಂದ ಇದನ್ನು ತೆಗೆದುಹಾಕಬೇಕು. ಇನ್ನು ತಾಲ್ಲೂಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ನೋಡುವುದಾದರೆ ಅಲ್ಲಿ ಮಲ್ಟಿ ಬ್ಲಾಕ್ ಕಮಿಟಿಗಳು ಉಂಟು. ಬ್ಲಾಕ್ ಡಿಪಾರ್ಟ್‌ಮೆಂಟುಗಳೂ ಸಹ ಉಂಟು. ತಾಲ್ಲೂಕ್ ಆಫೀಸಿನ ರೆವಿನ್ಯೂ ಖಾತೆಗಳೂ ಉಂಟು. ಆದರೆ ಗ್ರಾಮ ಮಟ್ಟದಲ್ಲಿಲ್ಲ; ಜಿಲ್ಲಾ ಮಟ್ಟದಲ್ಲಿಯೂ ಇಲ್ಲ. ಈ ಮಧ್ಯದಲ್ಲಿ ತಾಲ್ಲೂಕ್ ತಹಶೀಲ್‌ದಾರರಿಗೆ ಒಂದು ಪ್ರತ್ಯೇಕವಾದ ಬ್ಲಾಕ್ ಎಂದಿದೆ. ಕೇರಳದಲ್ಲಿಯೂ ಕೂಡ ಹೊಸ ಪಂಚಾಯಿತಿ ಆಕ್ಟ್ ಪ್ರಕಾರ ಆತ ಅವನಿಗೆ ಹೊಂದಿಕೆಯಾಗಿರುತ್ತಾನೆ. ಆದರೆ ಇಲ್ಲಿ ಮಾತ್ರ ಪ್ರತ್ಯೇಕತೆ ಉಳಿದಿದೆ. ಕೆಲಸಗಳು ಓವರ್ ಲ್ಯಾಪ್ ಆಗಬಾರದು. ಒಳ್ಳೆಯ ರೀತಿಯಲ್ಲಿ ಕೆಲಸಗಳು ನಡೆಯಬೇಕು ಎಂದು ಇರುವಾಗ ಇದನ್ನು ತಾಲ್ಲೂಕ್ ಮಟ್ಟದಲ್ಲಿ ಏಕೆ ಉಳಿಸಿಕೊಂಡು ಬಂದಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ, ಆದ್ದರಿಂದ ಜಿಲ್ಲಾ ಮಟ್ಟದ ಬ್ಲಾಕ್‌ಗಳನ್ನು ತೆಗೆದು ತಾಲ್ಲೂಕ್‌ಗಳಲ್ಲಿ ಬ್ಲಾಕ್ ಕೆಲಸಗಳು ನಡೆಯುವ ಹಾಗೆ ಮಾಡಬೇಕು. ಗ್ರಾಮಪಂಚಾಯಿತಿಯಲ್ಲಿ ಗ್ರಾಮ ನೌಕರರು ಎಂದು ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಅಸಿಸ್ಟೆಂಟ್ ಕಮಿಷನರ್ ಎಂದು ಇರುತ್ತಾರೆ. ತಾಲ್ಲೂಕ್ ಮಟ್ಟದಲ್ಲಿಯೂ ಇರುತ್ತಾರೆ. ಅದು ಸಾಧ್ಯವುಂಟೆಂದು ನನ್ನ ಅಭಿಪ್ರಾಯ.

ಇನ್ನೊಂದು ಜಿಲ್ಲಾ ಗಡಿಗಳ ವಿಷಯ. ಜಿಲ್ಲೆಗಳು ಹಾಗೆಯೇ ಉಳಿಯಬೇಕು. ಆದರೆ ಜಿಲ್ಲಾ ಗಡಿಗಳನ್ನು ಸ್ವಲ್ಪ ಹಿಂದೆ ಮುಂದೆ ಮಾಡಬಹುದು. ಕೊಡಗು ಸ್ವಲ್ಪ ದೊಡ್ಡದು ಮಾಡಬಹುದು. ಈ ಬಗ್ಗೆ ಶ್ರೀಮಾನ್ ಅಪ್ಪಣ್ಣನವರಿಗೆ ಮನಸ್ಸು ಇರಬಹುದು. ಈಗಿರುವ ಜಿಲ್ಲಾ ಗಡೀ ಮಟ್ಟವನ್ನು ಬದಲಾಯಿಸಿದರೆ ಜಿಲ್ಲೆಗಳನ್ನು ಉಳಿಸಬಹುದು.

ಶ್ರೀ ಬಿ. ಡಿ. ಜತ್ತಿ.—ಸದಸ್ಯರುಗಳು ಅಷ್ಟೇ ಉಳಿಯಬೇಕಲ್ಲವೆ?.

ಶ್ರೀ ಎ. ಕೃಷ್ಣ ಶೆಟ್ಟಿ.—ಹಾಗೆಯೇ ಉಳಿಯಬೇಕು. ಈಗ ಎರಡು ತಾಲ್ಲೂಕ್‌ಗಳನ್ನು ಹೆಚ್ಚು ಮಾಡಿದೆ. ಕೆಲಸಗಳು ಜಿಲ್ಲಾಮಟ್ಟಕ್ಕೆ ಅದೇ ರೀತಿ ಉಳಿಯಬೇಕು ಎಂಬುದಾಗಿ ನನ್ನ ಅಭಿಪ್ರಾಯ. ಮಂತ್ರಿಮಂಡಲ ಮೊದಲು ಸರಿಹೋದರೆ ಆಗ ಎಲ್ಲವೂ ಸರಿಹೋಗುತ್ತದೆ. ನಮ್ಮ ಕೆಲವು ಗುಣಗಳು ನಿಮಗೆ ಬಂದಿವೆ.

ಒಬ್ಬ ಮಾನ್ಯ ಸದಸ್ಯರು.—ಒಳ್ಳೆಯ ಗುಣಗಳೋ ? ಕೆಟ್ಟಗುಣಗಳೋ ?

ಶ್ರೀ ಎ. ಕೃಷ್ಣಶೆಟ್ಟಿ.—ಅವು ಯಾವುದೆಂದು ಹೇಳುವುದಕ್ಕಾಗುವುದಿಲ್ಲ. ನಾವು ತೆಗೆದುಕೊಳ್ಳುವ ಭತ್ಯ, ಸಂಬಳದ ಮೇಲೂ ಕೆಲವು ಅಭಿಪ್ರಾಯಗಳು ಬಂದಿವೆ. ಮಂತ್ರಿಗಳಾದ ನೀವು ಸರಿಯಾಗಿ ನಡೆದರೆ ಎಲ್ಲವೂ ಸರಿಹೋಗುತ್ತದೆ. ಈಗ ನಿಮ್ಮ ಕೆಲವು ಗುಣಗಳು ನಮಗೆ ಬಂದಿವೆ.

ಒಬ್ಬ ಮಾನ್ಯ ಸದಸ್ಯರು.—ಒಳ್ಳೆಯ ಗುಣಗಳೋ ? ಕೆಟ್ಟ ಗುಣಗಳೋ?

ಶ್ರೀ ಎ. ಕೃಷ್ಣಶೆಟ್ಟಿ.—ಅದನ್ನು ಹೇಳುವುದಕ್ಕಾಗುವುದಿಲ್ಲ. ನಿಮ್ಮ ಹಾಗೆ ನಮ್ಮ ಗುಣ ಎಂದಿಗೂ ಕೆಡುವಹಾಗಿಲ್ಲ ಅಷ್ಟು ಹೇಳಬಹುದು. ನಮ್ಮದು ಭತ್ಯ ಈಗ 250 ರೂಪಾಯಿಗಳು ಮತ್ತೆ 15 ರೂಪಾಯಿಗಳು. ನಮಗೆ ಒಳ್ಳೆಯ ಸೌಲಭ್ಯಗಳು ನಡೆದಿವೆ. ಇನ್ನೂ

(ಶ್ರೀ ಎ. ಕೃಷ್ಣಶೆಟ್ಟಿ)

ಜಾಸ್ತಿ ಮೇಲಕ್ಕೆ ಹೋಗಬೇಕೆಂದು ಕೆಲವರು ಇದ್ದಾರೆ. ನಮ್ಮಲ್ಲೂ ಕೂಡ ಕೆಲವರು ಈ ರೀತಿ ತೆಗೆದುಕೊಂಡು ಹೋಗುವುದರಲ್ಲಿ ಸ್ವಲ್ಪಮಟ್ಟಿಗೆ ಭಿನ್ನಾಭಿಪ್ರಾಯ ಗಳು ಬಂದಿವೆ. ನೀವು ಮಂತ್ರಿಗಳು. ನಿಮ್ಮ ಕೆಲಸ ಗಳನ್ನು ಸರಿಪಡಿಸಿಕೊಂಡು ಚೆನ್ನಾಗಿ ಅಳವಡಿಸಿ ಕೊಂಡು ಹೋದರೆ ಬಾಕಿ ಎಲ್ಲಾ ಕೆಲಸಗಳೂ ಸಮ ರ್ಪಕ ರೀತಿಯಲ್ಲಿನಡೆಯುವುದಕ್ಕೆ ಸಾಧ್ಯವುಂಟು ಅದನ್ನು ನಡೆಸುವುದಕ್ಕೆ ಒಂದೆರಡು ದೃಷ್ಟಾಂತಗಳನ್ನು ಹೇಳುತ್ತೇನೆ. ಈಗ ನಡೆಯುತ್ತಿರುವ ಕೆಲವು ಸೆರ ಮನಿಗಳು ಮತ್ತು ಕೆಲವು ಶಂಕುಸ್ಥಾಪನೆ ಮತ್ತೆ ಕೆಲವು ಉದ್ಘಾಟನೆಗಳು, ಇಂತಹುಗಳಿಗೆ ಮಂತ್ರಿ ಗಳು ಟೂರ್ ಹೋಗುವುದೂ ಉಂಟು. ಒಂದು ಸಾರಿ ನನ್ನ ಕ್ಷೇತ್ರವಾದ ಮಂಗಳೂರಿಗೆ ಟೂರ್ ಪ್ರೋಗ್ರಾಂ ನಲ್ಲಿ ಮಂತ್ರಿಗಳು ಬಂದಾಗ ಒಂದು ಪಬ್ಲಿಕ್‌ಮೀಟಿಂಗ್ ಏರ್ಪಡಿಸಿದ್ದರು. ಅಲ್ಲಿ ಅರ್ಧ ಘಂಟೆ ಮಂತ್ರಿಗಳು ಇರಲಿಲ್ಲ. 48 ಘಂಟೆಗಳ ಕಾರ್ಯಕ್ರಮ ಅವರಿಗೆ ಇದ್ದರೂ ಆ ಹೊತ್ತಿನಲ್ಲಿ ಮಂತ್ರಿಗಳು ಪಬ್ಲಿಕ್ ಮೀಟಿಂಗ್ ಎಂದು ನಿಗದಿ ಮಾಡಿದ್ದರೂ ಹಾಜರಾಗ ಲ್ಲಿಲ್ಲ. ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಆಗಿರುವ ನಾವು ಪಬ್ಲಿಕ್‌ಗೆ ಏನುಹೇಳಬೇಕು, ಅಂತಹ ಸಂದರ್ಭ ದಲ್ಲಿ ಎನ್ನುವ ಸಂಶಯ ಹುಟ್ಟುವ ಪ್ರಸಂಗ ಬಂತು.

Mr. SPEAKER.—Are not M.L.A.s part of the public ?

ಶ್ರೀ ಎ. ಕೃಷ್ಣಶೆಟ್ಟಿ.—ಹೀಗೂ ಉಂಟು. ಇದು ಒಂದು ಪ್ರಾಂತದ ಪ್ರಶ್ನೆಯಲ್ಲ. ಇವರು ಟೂರ್ ಬಂದರೆ ಜಿಲ್ಲಾಧಿಕಾರಿಗಳಿಗೆ, ತಾಲ್ಲೂಕ್ ತಹಸೀಲ್ ದಾರರಿಗೆ ಕೆಲಸ ಬಂದ್, ಪೋಲೀಸ್ ಸೂಪ ರಿಂಟೆಂಡೆಂಟರಿಗೆ ಪ್ರೊಹಿಬಿಷನ್ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಏನಾದರೂ ಒಂದು ಜಿಲ್ಲೆಗೆ ಮಂತ್ರಿ ಗಳು ಟೂರ್ ಹಾಕಿಕೊಂಡು ಬಂದು ಹೋಗುತ್ತಾ ರೆಂದರೆ ಇಡೀ ಜಿಲ್ಲೆ ಮತ್ತು ತಾಲ್ಲೂಕ್ ಮಟ್ಟದ ಕೆಲಸಗಳನ್ನು ಸಂಪೂರ್ಣವಾಗಿ ನಿಲ್ಲಿಸುವುದು ಎಂದು ಅರ್ಥ. ಇದರಲ್ಲಿ ನಾನು ಹೇಳುವುದು ಸರ್ಕಾರದ ವೆಚ್ಚದ ಪ್ರಶ್ನೆಯಲ್ಲ. ಎಷ್ಟರವರೆಗೆ ಅಲ್ಲಿನ ಕೆಲಸಗಳ ನ್ನೆಲ್ಲಾ ನಿಲ್ಲಿಸಬೇಕಾಗಿ ಬರುತ್ತದೆಂಬುದನ್ನು ಯೋಚನೆ ಮಾಡಬೇಕು. ಇದರಿಂದ ಎಷ್ಟರಮಟ್ಟಿಗೆ ಅಲ್ಲಿನ ಜನರಿಗೆ ತೊಂದರೆಯಾಗುತ್ತದೆಂಬುದು ಮುಖ್ಯ ಅದನ್ನು ಸರ್ಕಾರ ವಿಚಾರ ಮಾಡಬೇಕು ಎಂಬು ದಾಗಿ ನಾನು ಹೇಳುತ್ತೇನೆ. ಪಾಶ್ಚಿಮಾತ್ಯ ದೇಶ ಗಳ ಉದಾಹರಣೆಯನ್ನು ಬೇಕಾದರೆ ಇಲ್ಲಿ ಕೊಡು ತ್ತೇನೆ. ಇಂಗ್ಲೆಂಡಿನ ಮಂತ್ರಿಗಳಾಗಲೀ ಅಥವಾ ಅಮೇರಿಕಾದವರಾಗಲೀ ಯಾರೂ ಈ ರೀತಿಯಾಗಿ ಶಂಕುಸ್ಥಾಪನೆ ಸೆರಮನಿ, ಪ್ರಾರಂಭೋತ್ಸವ, ಮುಂತಾದ ಕಾರ್ಯಗಳಲ್ಲಿ ಭಾಗವಹಿಸುವುದೇ ಇಲ್ಲ. ವರ್ಷದ 365 ದಿವಸಗಳ ಪೈಕಿ ಕೇವಲ 5-6 ದಿವಸ ಗಳು ಮಾತ್ರ ಇವರುಗಳು ಆಫೀಸುಗಳಲ್ಲಿ ಕೆಲಸ ಮಾಡಿದರೆ, ಬಾಕಿ ಕೆಲಸಗಳನ್ನು ಮಾಡುವುದಕ್ಕೆ ಇವ ರಿಗೆ ಎಲ್ಲಿ ಸಮಯ ಉಂಟೆಂದು ನಾನು ಪ್ರಶ್ನೆ ಮಾಡ ಬೇಕಾಗಿದೆ. ಇಂತಹವುಗಳನ್ನು ನೀವು ಸರಿಪಡಿಸು ವುದು ಅಗತ್ಯವುಂಟೋ ಇಲ್ಲವೋ ಎಂಬುದಾಗಿ ನಾನು ವಿನಂತಿ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸ, ಪಬ್ಲಿಕ್ ಹೆಲ್ತ್ ಮತ್ತು ಪಿ. ಡಬ್ಲ್ಯು.ಡಿ. ಈ ಖಾತೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸದ ವಿಷಯ ನನಗೆ ಒಂದು ಆಭಾಸ ರೂಪದಲ್ಲಿ ಕಾಣುತ್ತಿದೆ. ಈಗ ಪ್ರಾಥಮಿಕ ವಿದ್ಯಾಭ್ಯಾಸ ಕಡ್ಡಾಯ ಶಿಕ್ಷಣವಾಗಿ ಬಂದಿದೆ. ಇದು ಮೂಲಭೂತವಾದ ಮುಖ್ಯಪ್ರಶ್ನೆ. ಇದನ್ನು ಯಾವ ರೀತಿಯಲ್ಲಿ ಮುಂದುವರಿಸ ಬೇಕೆಂಬುದೇ ಮುಖ್ಯವಾದುದು. ಈ ವಿದ್ಯಾಭ್ಯಾಸ ವನ್ನು ಸಂಪೂರ್ಣಗೊಳಿಸುವುದಕ್ಕೆ ಯಾವ ಕ್ರಮವನ್ನು ಹಾಕಿದ್ದಾರೆಂಬುದು ಇದರಲ್ಲಿ ಸ್ಪಷ್ಟವಾಗಿ ಕಾಣುವು ದಿಲ್ಲ. ಮತ್ತೆ ಅದೇ ಹೊತ್ತಿಗೆ ಹೈಸ್ಕೂಲ್ ವಿದ್ಯಾ ಭ್ಯಾಸವನ್ನು ಖಾಸಗೀ ಸಂಸ್ಥೆಗಳಿಗೆ ಕೊಡಬಹುದು ಎಂಬ ಸೂಚನೆಯೂ ಉಂಟು. ಒಂದು ಆಸ್ಪತ್ರೆಗೆ ಹಣ ಕೊಟ್ಟರೆ ಅದು ಸರ್ಕಾರದ ಸ್ವಾಧೀನಕ್ಕೆ ಬರೆ ಯುತ್ತಾರೆ. ಸಾರ್ವಜನಿಕರ ಹಣ ಸರ್ಕಾರಕ್ಕೆ ಬರುತ್ತದೆ. ಸರ್ಕಾರೀ ಶಾಲೆಗಳಿಗೆ ಸಾರ್ವಜನಿಕರು ಸಹಾಯ ಕೊಟ್ಟರೆ ಆಗ ಅದು ಉಳಿಯುತ್ತದೆ. ಅಂದ ಮೇಲೆ ಪ್ರಾಥಮಿಕ ವಿದ್ಯಾಭ್ಯಾಸವನ್ನು ಖಾಸಗೀ ಸಂಸ್ಥೆಗಳಿಗೆ ಬಿಟ್ಟು ಕೊಟ್ಟು ಆ ರೀತಿಯಾಗಿ ಕೆಲಸ ಮಾಡುವುದರಲ್ಲಿ ಏನು ಪ್ರಯೋಜನವುಂಟೆಂದು ನಾನು ಕೇಳುತ್ತೇನೆ. ಆಸ್ಪತ್ರೆಗಳಿಗೆ ದುಡ್ಡು ಕೊಡು ವುದು, ಗ್ರಾಂಟ್-ಇನ್ ಏಡ್ ಕೊಡುವುದು, ಖಾಸಗೀ ಸಂಸ್ಥೆಗಳಿಗೆ ಈ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಿಟ್ಟು ಕೊಡುವುದು ಇವೆಲ್ಲವೂ ಬರೀ ಸರ್ಕಾರದ ಪ್ರಶ್ನೆಯೇ ಅಲ್ಲ, ದೇಶದ ಪ್ರಶ್ನೆ ಮತ್ತು ಜನರ ಅಭಿ ಪ್ರಾಯ ಪ್ರಶ್ನೆ. ಇವನ್ನು ತುಂಬಾ ಗಮನದಲ್ಲಿಟ್ಟು ಕೊಳ್ಳಬೇಕು. ಸರ್ಕಾರ ಹೈಸ್ಕೂಲ್‌ಗಳನ್ನು ನಡೆಸಿ ಕೊಂಡು ಹೋಗಬೇಕೆಂಬ ಬಗ್ಗೆ ನಾನು ಒಂದು ತಿದ್ದು ಪಡಿಯನ್ನು ಸೂಚಿಸುತ್ತೇನೆ. ಖಾಸಗೀ ಸಂಸ್ಥೆಗಳಿಗೆ ಈ ವಿದ್ಯಾಭ್ಯಾಸವನ್ನು ಬಿಟ್ಟು ಕೊಡುವುದರಿಂದ ತುಂಬಾ ಅಪಾಯವುಂಟು. ಕ್ರಿಶ್ಚಿಯನ್ ಸಂಸ್ಥೆಗಳ ವರು ದೇವರನ್ನು ತುಂಬಾ ಚೆನ್ನಾಗಿ ಪ್ರಾರ್ಥನೆ ಮಾಡುತ್ತಾರೆ. ಅವರ ಮತದ ಕೆಲವು ಸ್ಕೂಲುಗಳು ಚೆನ್ನಾಗಿ ನಡೆಯುತ್ತಿವೆ. ಸೆಕ್ಯುಲರ್ ಸ್ಟೇಟಿನಲ್ಲಿ ನಮ್ಮ ಮಕ್ಕಳೂ ಕೂಡ ಆ ರೀತಿ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ.........

Sri SANJEEVANATH AIKALA (Suratkal).—Is it not a fact that Christian Children can participate in particular religious prayers and that they are not permitted to participate in other Hindu prayers ?

ಶ್ರೀ ಎ. ಕೃಷ್ಣ ಶೆಟ್ಟಿ.—ಆ ಮತದವರು ಅವರಿಗೆ ಒಳ್ಳೆಯ ರೀತಿಯಲ್ಲಿ ಓಟು ಕೊಟ್ಟಿರಬೇಕೆಂದು ನನಗೆ ಕಾಣುತ್ತದೆ.

Mr. SPEAKER.—That is not a fair remark because the member got votes from a particular Community.

ಶ್ರೀ ಎ. ಕೃಷ್ಣಶೆಟ್ಟಿ.—ಇಷ್ಟು ಮಾತ್ರವೇ ಅಲ್ಲ. ನಾನು ಮಂತ್ರಿಗಳು ಹೇಳಿದ್ದನ್ನೂ ಕೇಳಿದ್ದೇನೆ. ಅಧ್ಯಕ್ಷರು ಹೇಗೆ ಹೇಳಿದರೆ ಆ ರೀತಿ ಕೇಳುವುದಕ್ಕೆ ನಾನು ತಯಾರಿದ್ದೇನೆ. ಅಲ್ಲಿ ಯಾವ ರೀತಿ ನಡೆದಿದೆ ಎಂಬ ಬಗ್ಗೆ ಸರ್ಕಾರದ ಗಮನಕ್ಕೂ ಕೂಡ ಕೆಲವು ಅರ್ಜಿಗಳು ಬಂದಿವೆ. ಈ ರೀತಿಯಾದ ಜಾತ್ಯತೀತ ಸಮಸ್ಯೆಗಳಿರುವಾಗ ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿ ಸರ್ಕಾರಕ್ಕೆ ಹೆಚ್ಚಿಗೆ ಇರುವಾಗ ಯಾವುದೋ ಖಾಸಗೀ ಸಂಸ್ಥೆಗಳಿಗೆ ಈ ವಿದ್ಯಾಭ್ಯಾಸ ವನ್ನು ಬಿಟ್ಟುಕೊಡಬಾರದು ಎಂಬುದಾಗಿ ನಾನು

ಸಲಹೆ ಮಾಡುತ್ತೇನೆ. ಏಕೆಂದರೆ ಇದರಲ್ಲಿ ಹೆಚ್ಚು ಅಪಾಯವುಂಟು ಇದರಿಂದ ಭಾವೈಕ್ಯತೆಯನ್ನು ಉಂಟು ಮಾಡುವುದಕ್ಕೆ ಬದಲು ಜಾತ್ಯಾತೀತ ಪ್ರತ್ಯೇಕತೆಯ ಮನೋಭಾವವನ್ನು ಬೆಳೆಸುವುದು ಉಂಟಾಗುತ್ತದೆ. ನಾನು ಯಾರ ಮೇಲಿನ ದ್ವೇಷದಿಂದ ಈ ರೀತಿ ಆರೋಪಣೆ ಮಾಡುತ್ತಿದ್ದೇನೆಂದಲ್ಲ. ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕು.

ಇನ್ನೊಂದು ವಿಷಯ. ಈಗ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಮತ್ತು ಡೈರೆಕ್ಟರ್ ಆಫ್ ಮೆಡಿಸಿನ್ಸ್ ಎಂಬುದಾಗಿ ಇಬ್ಬರು ಇದ್ದಾರೆ. ಇದು ಏತಕ್ಕೆ ಬೇಕು ? ಇವೆರಡನ್ನೂ ಒಟ್ಟಿಗೆ ಸೇರಿಸಬೇಕು. ಇವು ಪ್ರತ್ಯೇಕ ಪ್ರತ್ಯೇಕವಾಗಿ ಇರುವ ಆವಶ್ಯಕತೆಯೇ ಇಲ್ಲ. ಮದ್ರಾಸಿನಲ್ಲಿಯೂ ಬೇರೆ ಬೇರೆಯಾಗಿಲ್ಲ. ಇಲ್ಲಿ ಮಾತ್ರ ಉಂಟು. ಅವೆರಡನ್ನೂ ಒಟ್ಟಿಗೆ ಸೇರಿಸುವುದು ಅಗತ್ಯವುಂಟೆಂದು ನಾನು ಹೇಳುತ್ತೇನೆ.

ಮತ್ತೊಂದು ವಿಷಯ. ಆಹಾರದ ವಿಷಯ ಈಗ ಬಹಳ ಹಾಳಾಗಿ ಹೋಗಿದೆ. ಅಡಲ್ಟರೇಷನ್ ಮತ್ತು ಪ್ರೊಡಕ್ಷನ್ ಆಫ್ ಫುಡ್ ಸ್ಟಫ್ಸ್ ಈ ಎರಡಕ್ಕೂ ಬಹಳ ಹೊಂದಾಣಿಕೆ ಇದೆ. ನಾವು ಆಹಾರ ಉತ್ಪತ್ತಿಯನ್ನು ಜಾಸ್ತಿ ಮಾಡುವ ಕಡೆಯೂ ಹೆಚ್ಚು ಗಮನ ಕೊಡಬೇಕು. ಅಡಲ್ಟರೇಷನ್ ಆಫ್ ಫುಡ್ ಸ್ಟಫ್ಸ್ ಬಗ್ಗೆ ಆರೋಗ್ಯ ಇಲಾಖೆಯವರದು ಬಹಳ ಜವಾಬ್ದಾರಿ ಕೆಲಸವಿದೆ. ಅವರು ಹೆಚ್ಚು ಕೆಲಸ ಮಾಡುವ ಅವಕಾಶ ಮತ್ತು ಅವಶ್ಯಕತೆವುಂಟು. ಅಂಥಾ ಉದ್ಯಮಗಳನ್ನು ಈಗ ಕೂಡಲೇ ಜಾರಿಗೆ ತರುವುದು ಅಗತ್ಯವೆಂದು ನಾನು ಹೇಳುತ್ತೇನೆ.

ಇನ್ನು ಫಿಷರೀಸ್ ಇಲಾಖೆಯ ಬಗ್ಗೆ ಹೇಳುವುದಾದರೆ ಆ ಇಲಾಖೆಗೆ ಪ್ರತ್ಯೇಕವಾಗಿ ಒಬ್ಬರು ಡೈರೆಕ್ಟರ್ ಅಗತ್ಯವಾಗಿಬೇಕು. ಈ ಡೈರೆಕ್ಟರ್ ಆಫೀಸ್ ಕಾರವಾರ ಮತ್ತು ಮಂಗಳೂರು ಮಧ್ಯೇ ಇರುವಂತೆ ವ್ಯವಸ್ಥೆ ಮಾಡಬೇಕು.

Sri B. D. JATTI.—In addition to the present Director ?

ಶ್ರೀ ಎ. ಕೃಷ್ಣ ಶೆಟ್ಟಿ.—ಯಾವ ರೀತಿ ವ್ಯವಸಾಯ ವೃದ್ಧಿ ಮಾಡಲಿಕ್ಕೆ, ಕೈಗಾರಿಕೆಗಳ ಬೆಳವಣಿಗೆಗೆ, ಒಂದೊಂದು ಖಾತೆಯು ಪ್ರತ್ಯೇಕವಾಗಿದೆಯೋ ಆ ರೀತಿ ಮೀನಿನ ಕೈಗಾರಿಕೆಯ ಅಭಿವೃದ್ಧಿಗೆ ಮತ್ತೊಂದು ಇಲಾಖೆಯನ್ನೋ ಅಥವಾ ಆಫೀಸನ್ನೋ ಸೃಷ್ಟಿಮಾಡುವುದು ಅಗತ್ಯವುಂಟು.

Mr. SPEAKER.—He has taken 20 to 25 minutes. He will be encroaching upon other's time.

Sri A. KRISHNA SHETTY.—I will take two minutes. I can do that to the extent possible. I have not got sufficient time to go into all details. I can only pass certain general remarks as other members have done. If sufficient time is given, I will attempt to make comparison. It is for the chair to give me that time.

Sri B. D. JATTI.—He can take up only one item and make detailed criticism.

Sri A. KRISHNA SHETTY.—I have to cover several important points as well and so here I can refer to it only in general.

ಇನ್ನು ಪಿ. ಡಬ್ಲ್ಯು. ಡಿ. ವಿಷಯದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಇದರಲ್ಲಿ ಬಹಳ ತೊಂದರೆವುಂಟು. ಇದನ್ನು ಸರ್ಕಾರದವರು ಸರಿಪಡಿಸಿದರೆ ನಮಗೆ ಬಹಳ ಹಣ ದುರುಪಯೋಗವಾಗುತ್ತಿರುವುದು ಉಳಿಯುತ್ತದೆ. ಸೇಲ್ಸ್ ಟ್ಯಾಕ್ಸ್ ಮತ್ತು ಪ್ರೊಹಿಬಿಷನ್ ಮತ್ತು ಸಿ. ಡಬ್ಲ್ಯು. ಡಿ. ಇಲಾಖೆಗಳಲ್ಲಿರತಕ್ಕ ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಮಾಡಿ ಸರ್ಕಾರದ ಪರವಾಗಿ ಆ ಕೆಲಸಗಳು ನಡೆಯುವಂತೆ ವ್ಯವಸ್ಥೆ ಮಾಡಬೇಕು. ತಾಲ್ಲೂಕ್ ಮಟ್ಟದಲ್ಲಿ ಗ್ರಾಮ ಮಟ್ಟದಲ್ಲಿರತಕ್ಕ ಎಲ್ಲಾ ಕೆಲಸಗಳನ್ನು ತಾಲ್ಲೂಕ್ ಬೋರ್ಡುಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ವಹಿಸಿ ಅವುಗಳ ಮೂಲಕ ಎಲ್ಲಾ ಕೆಲಸಗಳನ್ನು ನಡೆಸುವ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ಅದರಿಂದ ತುಂಬಾ ಪ್ರಯೋಜನವಾಗುತ್ತದೆಂದು ಹೇಳಿ ನನ್ನ ಪಕ್ಷದ ಪರವಾಗಿ ಈ ತಿದ್ದುಪಡಿಗಳನ್ನು ಸೂಚಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರುವ ಈ ಸಂಪನ್ಮೂಲ ಸಮಿತಿ ವರದಿಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಈ ವರದಿಯಲ್ಲಿ ಒಟ್ಟು 412 ಕಲಂಗಳಿವೆ. ಇವನ್ನೆಲ್ಲಾ ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇವುಗಳ ಪೈಕಿ ಕೆಲವು ಅಮೂಲ್ಯವಾದ ಸಲಹೆಗಳೂ ಕೂಡಾ ಇವೆ. ಅಂತಹವನ್ನು ಮಾತ್ರ ನಾವು ಒಪ್ಪಿಕೊಳ್ಳಬಹುದು. ಈ ವರದಿಯಲ್ಲಿ ನನಗೆ ಕಾಣುತ್ತಿರುವ ಒಂದು ಮುಖ್ಯ ಕೊರತೆ ಏನೆಂದರೆ ಸಂಸಾರದ ಆದಾಯ ತಿಳಿದು ಮಿತವ್ಯಯದಿಂದ ಸಂಸಾರ ತೂಗಿಸ ಬಲ್ಲ ಗೃಹಿಣಿಯಾದ ಒಬ್ಬ ಹೆಣ್ಣು ಮಗಳು ಈ ಕಮಿಟಿಯಲ್ಲಿ ಇಲ್ಲದಿರುವುದೇ ಆಗಿದೆ.

ಒಬ್ಬ ಮಾನ್ಯ ಸದಸ್ಯರು.—ಕಮಿಟಿ ವರದಿ ಮಾಡಿ ಮುಗಿದ ನಂತರ ಈ ಮಾತನ್ನು ಹೇಳುತ್ತಿದ್ದೀರಲ್ಲಾ!

ಶ್ರೀಮತಿ ರತ್ನಮ್ಮ ಮಾಧವರಾವ್.—ಕಮಿಟಿ ವರದಿ ಬಂದುದೇ ಈಗ. ಕಮಿಟಿ ವರದಿ ತಯಾರು ಮಾಡಿ ಬಂದ ನಂತರವೇ ಈ ವಿಷಯ ಕಂಡು ಬಂದು ಹೇಳುತ್ತಿದ್ದೇನೆ. ಈ ಕಮಿಟಿಯಲ್ಲಿ ಒಬ್ಬ ಹೆಣ್ಣು ಮಗಳು ಇಲ್ಲದಿರುವ ಪರಿಣಾಮವೇನಾಗಿದೆ ಎಂಬುದನ್ನು ನಾನು ಮುಂದೆ ಹೇಳುತ್ತೇನೆ. ನಮಗೆ ಸ್ವಾತಂತ್ರ ಬಂದ ಮೇಲೆ ಹೆಣ್ಣು ಮಕ್ಕಳ, ಸಣ್ಣ ಮಕ್ಕಳ, ಹರಿಜನರ ಮತ್ತು ಗಿರಿಜನರ ಉದ್ಧಾರಕ್ಕಾಗಿ ಸ್ಥಾಪನೆ ಮಾಡಿದ ಸಮಾಜ ಕಲ್ಯಾಣ ಇಲಾಖೆಯನ್ನೇ ಕಿತ್ತುಹಾಕಬೇಕೆಂದು ಮಾಡಿದ್ದಾರೆ. ಇದನ್ನು ನೋಡಿ ನನ್ನ ಮನಸ್ಸಿಗೆ ಬಹಳ ನೋವಾಯಿತು. ಒಬ್ಬ ಮಹಿಳೆ ಅಥವಾ ಗೃಹಿಣಿ ಈ ಕಮಿಟಿಯಲ್ಲಿದ್ದಿದ್ದರೆ ಸಮಾಜ ಕಲ್ಯಾಣ ಇಲಾಖೆಯನ್ನು ಕಿತ್ತುಹಾಕಬೇಕೆಂಬ ಸಲಹೆ ಮಾಡಿದಾಗ ಖಂಡಿತವಾಗಿ ಆಕೆ ಅಂತಹ ಒಂದು ಸಲಹೆಗೆ ಆಸ್ಪದ ಕೊಡುತ್ತಿರಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಈ ಸಭೆಗೆ ತಿಳಿಸಬೇಕಾಗಿದೆ. ಇದು ನ್ಯಾಯವೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಪ್ರತಿಯೊಂದು ಇಲಾಖೆಯಲ್ಲೂ ಲೋಪದೋಷಗಳು ಇದ್ದೇ ಇರುತ್ತವೆ. ಯಾವ ಇಲಾಖೆಯಲ್ಲೂ ಇಲ್ಲದೇ ಇರತಕ್ಕ ಲೋಪದೋಷಗಳು ಈ ಇಲಾಖೆಯಲ್ಲಿ ಏನು ಕಂಡು ಬಂತೋ ಈ ಕಮಿಟಿ

(ಶ್ರೀಮತಿ ರತ್ನಮ್ಮ ಮಾಧವರಾವ್)

ಸದಸ್ಯರಿಗೆ ನನಗಂತೂ ಗೊತ್ತಾಗಲಿಲ್ಲ. ಏನಾದರೂ ಆ ಇಲಾಖೆಗೆ ಹೋಗಿ ಅಲ್ಲಿನ ಲೋಪದೋಷಗಳೇನು ಎಂಬುದನ್ನು ನೋಡಿ ವಿಚಾರಿಸಿದ್ದಾರೆಯೇ ಎಂಬುದು ನನಗೆ ತಿಳಿಯಲಿಲ್ಲ. ಆ ಇಲಾಖೆಯಲ್ಲೂ ಕೆಲವಾರು ಲೋಪದೋಷಗಳು ಇರಬಹುದು. ಅಂತಹ ನ್ಯೂನತೆಗಳನ್ನು ಕಂಡು ಹಿಡಿದು ಅವನ್ನು ಸರಿಪಡಿಸುವುದಕ್ಕೆ ಬೇಕಾದಂತಹ ಸಲಹೆಗಳನ್ನು ಕೊಡಬಹುದಾಗಿತ್ತು. ಆದರೆ ಈ ಇಲಾಖೆಯೇ ಬೇಡವೆಂಬುದಾಗಿ ಈ ಕಮಿಟಿ ಸರಿಯಾಗಿ ಯೋಚಿಸದೆ ಸಲಹೆಮಾಡಿರುವುದನ್ನು ನಾನಂತೂ ಖಂಡಿತವಾಗಿ ಒಪ್ಪುವುದಿಲ್ಲ. ಸಮಾಜ ಕಲ್ಯಾಣ ಕೆಲಸಕಾರ್ಯಗಳಿಗಾಗಿ ಹೆಚ್ಚಾಗಿ ತಿಳಿದಂತಹ, ನುರಿತಂತಹ, ವಯಸ್ಸಾಗಿರತಕ್ಕ ಹೆಣ್ಣು ಮಕ್ಕಳನ್ನು ನೇಮಿಸಿ, ಅನಾಥರಾದ, ವಿಧವೆಯರಾದ, ಅಂಗ ವಿಕಲರ ಸೌಕರ್ಯಗಳಿಗಾಗಿ ಸ್ಥಾಪಿಸಿರತಕ್ಕ ಈ ಇಲಾಖೆಯನ್ನು ತೆಗೆಯಬೇಕೆಂದು ಮಹಿಳೆಯರೊಬ್ಬರೂ ಇಲ್ಲದ ಇಂತಹ ಕಮಿಟಿಯಲ್ಲಿ ಸದಸ್ಯರು ಮಾಡಿರುವ ಸಲಹೆಯನ್ನು ಖಂಡಿತವಾಗಿ ಸರ್ಕಾರ ಒಪ್ಪಕೂಡದು. ಮಹಿಳೆಯರನ್ನು ಇಂತಹ ಕಮಿಟಿಗಳಲ್ಲಿ ಹೆಚ್ಚಿಗೆ ಹಾಕಿ ಅವರಿಂದ ಈ ಕೆಲಸಗಳಾಗುವಂತೆ ಮಾಡಬೇಕು. ಆದ್ದರಿಂದಲೇ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹು ದೂರ ದೃಷ್ಟಿಯಿಂದ ಯೋಚಿಸಿ ಈ ಇಲಾಖೆಯಲ್ಲಿ ಏನೇನು ನ್ಯೂನತೆ ಇದೆಯೋ ಅವನ್ನೆಲ್ಲಾ ಸರಿಪಡಿಸಿ ಇಲಾಖೆ ಆಡಳಿತವನ್ನು ಸುವ್ಯವಸ್ಥಿತವಾಗಿ ನಡೆಸುವ ಉದ್ದೇಶದಿಂದ ಬಹಳ ಉದಾರ ಬುದ್ಧಿಯಿಂದ ಮಹಿಳೆಯೊಬ್ಬರನ್ನು ಸಮಾಜ ಕಲ್ಯಾಣ ಮಂತ್ರಿಯನ್ನಾಗಿ ಮಾಡಿದ್ದಾರೆ. ಇದನ್ನಾದರೂ ಯೋಚನೆ ಮಾಡಿದರೆ ಆ ಕಮಿಟಿ ಮಾನ್ಯ ಸದಸ್ಯರಿಗೆ ಅರ್ಥವಾಗುತ್ತದೋ ಏನೋ ಎಂದು ನನಗೆ ಭಾಸವಾಗುತ್ತದೆ.

ಇನ್ನು ಈ ವರದಿಯಲ್ಲಿ 412 ಕಾಲಂಗಳಿವೆ. ಇವೆಲ್ಲವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ನಾನು ಎಲ್ಲಾ ಅಂಶಗಳ ಮೇಲೆ ಮಾತನಾಡದೆ ಕೆಲವು ಮುಖ್ಯಾಂಶಗಳ ಮೇಲೆ ಮಾತನಾಡುತ್ತೇನೆ. ಏಕೆಂದರೆ ಹೆಚ್ಚಿಗೆ ಕಾಲಾವಕಾಶವಿಲ್ಲ.

ಇನ್ನು ನಿರುದ್ಯೋಗ ಸಮಸ್ಯೆ ಅಗಾಧವಾಗಿರುವ ಈ ಕಾಲದಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾಂ, ಹುಬ್ಬಳ್ಳಿ, ಗುಲ್ಬರ್ಗಾಗಳಲ್ಲಿದ್ದರೆ ಸಾಕು. ಬಾಕಿ ಕಡೆ ಕಿತ್ತುಹಾಕಿ ಎಂದು ಹೇಳಿದ್ದಾರೆ. ಈ ಸಲಹೆ ಸರಿಯಲ್ಲವೆಂದು ನನಗನ್ನಿಸುತ್ತದೆ. ನನ್ನ ಅಭಿಪ್ರಾಯದಲ್ಲಿ ಇದನ್ನು ತಾಲ್ಲೂಕ್‌ವಾರು ಎಲ್ಲಾ ಕಡೆಗಳಲ್ಲಿಯೂ ಮಾಡಬೇಕು. ಆದರೆ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಲ್ಲಿ ನಡೆಯುತ್ತಿರುವ ಕುಂಭಕೋಣವನ್ನು ನೋಡಿಕೊಳ್ಳಲು ಪ್ರಮಾಣಿಕರಾದ ಅಧಿಕಾರಿಗಳು ಇರಬೇಕು.

ಈಗ ಶಿವಮೊಗ್ಗಾದಲ್ಲಿ ಭದ್ರಾವತಿಯಲ್ಲಿ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಆಫೀಸು ಇದೆ. ಅದನ್ನು ಮುಚ್ಚಿದರೆ ಎಲ್ಲರೂ ಬೆಂಗಳೂರಿಗೇ ಬರಬೇಕು. ರೈಲು ಛಾರ್ಜು ಜಾಸ್ತಿ, ಇಲ್ಲಿ ಊಟ ತಿಂಡಿಗಳ ಖರ್ಚು ಹೆಚ್ಚು ಆದ್ದರಿಂದ ಈಗ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಆಫೀಸುಗಳು ಎಲ್ಲೆಲ್ಲಿವೆಯೋ ಅವೆಲ್ಲವೂ ಅಲ್ಲಲ್ಲಿಯೇ ಹಾಗೆಯೇ ಇರಬೇಕು ಎಂಬುದಾಗಿ ನನ್ನ ಅಭಿಪ್ರಾಯ. ಆದರೆ ಈ ಬಗ್ಗೆ ಈ ಕಮಿಟಿಯವರು ಮಾಡಿದಂತಹ ಸಲಹೆಯನ್ನೇನೋ ನಾನು ಒಪ್ಪುವುದಿಲ್ಲ.

ಎಜುಕೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಪಠ್ಯ ಪುಸ್ತಕಗಳು ಗವರ್ನ್‌ಮೆಂಟ್ ಪ್ರೆಸ್ಸಿನಲ್ಲಿ ಪ್ರಿಂಟ್ ಆಗಿ ಒಂದು ತಿಂಗಳ ಮುಂಚೆ ಬಿಡುಗಡೆ ಮಾಡುವ ಸಲಹೆ ತುಂಬಾ ಉಪಯುಕ್ತ ಸಲಹೆ. ಅದನ್ನು ಸರ್ಕಾರದವರು ಅವಶ್ಯವಾಗಿ ಮಾಡಬೇಕೆಂದು ನಾನು ಹೇಳಬಯಸುತ್ತೇನೆ

2-30 P.M.

ಗ್ರಾಮಾಂತರ ವಿಶ್ವ ವಿದ್ಯಾನಿಲಯ ಮಾಡುವ ವಿಷಯ ಉತ್ತರ ಪ್ರದೇಶದಲ್ಲಿ ಈಗಾಗಲೇ ಮಾಡಿರುವುದರ ಅಭಿವೃದ್ಧಿಯನ್ನು ನೋಡಿಕೊಂಡು ನಾವು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುವುದು ಒಳ್ಳೆಯದು ಎಂದು ಇದರಲ್ಲಿ ಹೇಳಿದ್ದಾರೆ. ಇದು ಬಹಳ ಒಳ್ಳೆಯ ಸಲಹೆ. ಎಜುಕೇಷನ್ ಲೋನ್ಸ್ ಕೊಡುವುದಕ್ಕೋಸ್ಕರ ಎಜುಕೇಷನ್ ಟ್ರಸ್ಟನ್ನು ಸ್ಥಾಪಿಸಬೇಕೆಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಸಲಹೆ. ಇದನ್ನು ಒಪ್ಪಿಕೊಳ್ಳಬಹುದು.

ಈ ವರದಿಯಲ್ಲಿ ಬಹು ಇಲಾಖೆಯಲ್ಲಿ ಬಹಳ ಜನಗಳನ್ನು ಕೆಲಸದಿಂದ ತೆಗೆಯಬೇಕೆಂದು ಹೆಸರುಗಳನ್ನು ಕೂಡ ಕೊಟ್ಟಿದ್ದಾರೆ. ಕೆಲವರನ್ನು ಕಡಿಮೆ ಮಾಡಬೇಕೆಂತಲೂ ಈ ವರದಿಯಲ್ಲಿ ಕೊಟ್ಟಿದ್ದಾರೆ. ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿರುವ ಈ ಕಾಲದಲ್ಲಿ ಕೆಲಸದಿಂದ ಕಿತ್ತುಹಾಕುವುದು ಎಂದರೆ, ಅದರಲ್ಲೂ ಸರ್ವೀಸ್ ಆಗಿರುವವರ ಗತಿಯೇನು? ಇನ್ನು ಮುಂದೆ ಯಾರನ್ನು ಕೆಲಸಕ್ಕೆ ತೆಗೆದು ಕೊಳ್ಳದೆ, ಈಗ ತೆಗೆಯ ಬೇಕಾದವರನ್ನು ಬೇರೆ ಕಡೆಗೆ ವರ್ಗ ಮಾಡಿದರೆ ಈ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

ಸಾಹಿತ್ಯ ಹಾಗೂ ಸಂಸ್ಕೃತಿ ಇಲಾಖೆಯ ಬಗ್ಗೆ ಈಗಿರುವಂತೆ ಪ್ರತ್ಯೇಕ ವಿಭಾಗವಾಗಿರಲಿ. ಆದರೆ ಈ ವರದಿಯಲ್ಲಿ ಅದು ಪ್ರತ್ಯೇಕವಾಗಿರುವುದು ಬೇಡ ಎಂದು ಹೇಳಿದ್ದಾರೆ. ಅದು ಸರಿಯಲ್ಲ.

ಗಂಧದ ಎಣ್ಣೆ ಕಾರ್ಖಾನೆಯ ಕೆಲಸದ ಬಗ್ಗೆ ತಜ್ಞರ ವಿಚಾರಣಾ ಸಮಿತಿಯನ್ನು ನೇಮಿಸುವಂತೆ ಈ ವರದಿಯಲ್ಲಿ ಹೇಳಿದ್ದಾರೆ. ಅದನ್ನು ಸರ್ಕಾರದವರು ಮಾಡಬೇಕು.

ವ್ಯವಸಾಯದ ಸೀನಿಯರ್ ಅಧಿಕಾರಿಯೊಬ್ಬರನ್ನು P.W.D. ಭಾಗಗಳಲ್ಲಿ ನಡೆಯುವ ಕೆಲಸಗಳ ಬಗ್ಗೆ ನೋಡಿಕೊಳ್ಳುವ ಸಲಹೆ ಸ್ವಾಗತಾರ್ಹವಾಗಿದೆ. ಸರ್ಕಾರದವರು ಇದನ್ನು ಮಾಡಬೇಕು.

ಕೊನೆಯದಾಗಿ ಈ ವರದಿಯಲ್ಲಿ ಇಷ್ಟೇ ಜನ ಮಂತ್ರಿಗಳನ್ನು ತೆಗೆದುಕೊಂಡು ಆಡಳಿತವನ್ನು ನಡೆಸಬೇಕೆಂದಿದೆ. ದೇಶದ ಆಡಳಿತದ ಹೊಣೆಯನ್ನು ಹೊತ್ತಿರುವವರು ದೇಶದ ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಲು ಅವಶ್ಯಕ ವಿರುವಷ್ಟು ಜನ ಮಂತ್ರಿಗಳನ್ನು ತೆಗೆದುಕೊಳ್ಳುವುದರಲ್ಲಿ ಏನೂ ತಪ್ಪು ಇಲ್ಲ ಎಂದು ನನ್ನ ಅಭಿಪ್ರಾಯ. ನಮ್ಮ ದೇಶ ದೊಡ್ಡದಾಗಿದೆ. ಕೆಲಸ ಕಾರ್ಯಗಳು ಅಗಾಧವಾಗಿವೆ. ಈಗ ನಮ್ಮ ದೇಶದಲ್ಲಿ 19 ಡಿಸ್ಟ್ರಿಕ್ಟುಗಳಿವೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ ಈಗಿರುವ 25 ಜನ ಮಂತ್ರಿಗಳಲ್ಲಿ ದೊಡ್ಡ ದೊಡ್ಡ ಡಿಸ್ಟ್ರಿಕ್ಟುಗಳಿಗೆ ಇಬ್ಬರು, ಮಿಕ್ಕಕಡೆ ಒಬ್ಬರು, ಅವರವರ ಕಾನ್ಸ್ಟಿಟ್ಯೂಯನ್ಸಿಯಂತೆ ವಹಿಸಿಕೊಂಡು ಅಲ್ಲಿನ ಎಲ್ಲಾ ಕೆಲಸ ಕಾರ್ಯಗಳನ್ನು ನೋಡಿಕೊಂಡು ಹೋಗಿ ಮಾಡುವುದಾದರೆ ನಮ್ಮ ರಾಜ್ಯದ ಕೆಲಸಗಳೆಲ್ಲಾ ಸುಸೂತ್ರವಾಗಿ ನಡೆದು ಅಭಿವೃದ್ಧಿಯಾಗುತ್ತದೆ. ಸಾಧ್ಯವಾದರೆ

ತಿಂಗಳಿಗೊಮ್ಮೆಯೋ 3 ತಿಂಗಳಿಗೊಮ್ಮೆಯೋ ಗಿರುವ ಕೆಲಸ ಆಗದೆ ಇರುವ ಕೆಲಸದ ಬಗ್ಗೆ ವರದಿ ಯೊಂದನ್ನು ಈ ಸಭೆಯ ಸದಸ್ಯರಿಗೆ ಕೊಟ್ಟರೆ ತುಂಬಾ ಳ್ಳೆಯದು.

ಮಂತ್ರಿಗಳು ಬಹಳ ಜನ ಇದ್ದಾರೆ ಎಂದು ವಿರೋಧ ಪಕ್ಷದವರು ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಮಂತ್ರಿಗಳು ಅವರೇ ಬರಲಿ ನಾವೇ ಬರಲಿ ನಾವು ಕೆಲಸ ಮಾಡುವ ರೀತಿ ವಿಧಾನದಲ್ಲಿದೆಯೇ ಹೊರತು ಮಂತ್ರಿಗಳ ಸಂಖ್ಯೆಯಲ್ಲಿ ಇಲ್ಲ.

ಕೊನೆಯದಾಗಿ ನನ್ನ ಸಲಹೆ ಇಷ್ಟೆ. ಇದು ಬರೀ ಪುರುಷ ಸದಸ್ಯರ ಸಮಿತಿಯ ಒಂದು ವರದಿಯಾಗಿದೆ. ಆದರೂ ಇನ್ನೂ ಕಾಲ ಮಿಂಚಿಲ್ಲ. ಬರೀ ಮಹಿಳೆಯ ರದ್ದೇ ಒಂದು ಕಮಿಟಿ ಮಾಡಿ ಪುನಃ ಪರಿಶೀಲನೆ ಮಾಡಿ ಒಂದು ವರದಿಯನ್ನು ತರಿಸಿಕೊಂಡು ಆ ವರ ದಿಗೂ ಈ ವರದಿಗೂ ಏನು ವ್ಯತ್ಯಾಸವಿದೆ ಎಂದು ಹೋಲಿಸಿ ನೋಡಿ ಯಾವುದರಲ್ಲಿ ಮಿತವ್ಯಯ ಸಲಹೆ ಗಳು ಹೆಚ್ಚಾಗಿವೆಯೋ ನೋಡಿ ಅದನ್ನು ಸರ್ಕಾರ ಒಪ್ಪಿಕೊಳ್ಳಲಿ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕಾಶೀನಾಥ್ ಸಿದ್ದಯ್ಯ ವೀರಯ್ಯ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಎಕಾ ನಮಿ ಬಗ್ಗೆ ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಿರ್ಮಿಸಿದ್ದ ಕಮಿಟಿಯವರು ನಮ್ಮ ರಾಜ್ಯದ ನಾನಾ ಭಾಗಗಳಿಗೆ ಹೋಗಿ ಸರ್ಕಾರದಲ್ಲಿರ ತಕ್ಕ ಲೋಪದೋಷಗಳನ್ನು ವಿಮರ್ಶೆ ಮಾಡಿ 412 ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಮೊಟ್ಟ ಮೊದಲು ನಾವು ಅವರಿಗೆ ತುಂಬಾ ಉಪಕೃತರಾಗಿ ದ್ದೇವೆ. ಅವರು ಮೊದಲನೆಯದಾಗಿ ನಮ್ಮ ವಿಧಾನ ಸೌಧದ ಕಾರ್ಯಕ್ರಮಗಳನ್ನು ವಿಸ್ತರಿಸಿದ್ದಾರೆ. ಅದರಲ್ಲಿ ಒಂದು ವಿಷಯವೆಂದರೆ ಒಂದು ಫೈಲು ಒಂದು ಆಫೀಸಿನಿಂದ ಹೋಗಬೇಕಾದರೆ 200 ದಿವಸದ ಮಟ್ಟಿಗೆ ಆಗುತ್ತದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ. ನಿಧಾನವಾಗುತ್ತಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಇನ್ನೊಂದು ವಿಷಯವೆಂದರೆ ಈಗಾಗಲೇ ಮಂತ್ರಿಗಳ ವಿಸ್ತರಣೆ ಆಗಿದೆ. ಇಷ್ಟೇ ಮಂತ್ರಿಗಳು ಇರ ಬೇಕೆಂದು ಹೇಳಿದ್ದಾರೆ. ನನ್ನ ಸಲಹೆ ಈ ರೀತಿ ಯಾಗಿದೆ— ಮಂತ್ರಿಗಳ ವಿಸ್ತರಣೆಯಾದರೂ ಸಹ ಈಗಲೂ ಫೈಲುಗಳ ಓಡಾಟವಾಗಿ ವಿಳಂಬವಾಗು ತ್ತಿದೆ. ಆ ವಿಳಂಬವಾಗದಂತೆ ಪ್ರತಿಯೊಬ್ಬ ಮಿನಿಸ್ಟರು ಸರಿಯಾಗಿ ನಡೆದುಕೊಂಡು ಹೋಗಿ ಸಕಾಲದಲ್ಲಿ ಸೂಕ್ತಕ್ರಮ ಕೈಗೊಂಡರೆ ಚಲೋ ಆಗುತ್ತದೆ ಎಂದು ಹೇಳುತ್ತೇನೆ.

ಇದಾದನಂತರ ಪ್ರಯಾರಿಟಿ ಸ್ಕೀಂ ಅಂತ ಇದೆ. ಇದರ ಬಗ್ಗೆ ನನ್ನ ಒಂದು ಉತ್ತಮವಾದ ಸಲಹೆ ಇದೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಸ್ಪೆಷಲ್ ಯುನಿಟ್ ಸ್ಥಾಪನೆ ಮಾಡಿ ಮಂಜೂರಾತಿ ಸಕಾಲದಲ್ಲಿ ಕೊಟ್ಟು ಕೆಲಸ ಕಾರ್ಯಗಳನ್ನು ನೆರವೇರಿಸಿದರೆ ಪ್ರಯಾರಿಟಿ ಸ್ಕೀಂಗಳಿಗೆ ನಿಜವಾಗಿಯೂ ಅನುಕೂಲವಾಗುತ್ತದೆ.

ಇದಾದನಂತರ ಸರ್ಕಾರದ ಆಡಳಿತ ನಡೆಸುವಾಗ ಕುಂದುಕೊರತೆ ಏನಿವೆ ಎಂಬುದನ್ನು ಕಂಡುಕೊಳ್ಳು ವುದು ಬಹಳ ಕಷ್ಟದಾಯಕವಾದ ಕೆಲಸ. ಇದರ ಸಲುವಾಗಿ ಪರ್ಮನೆಂಟ್ ಹೈಪವರ್ ಕಮಿಷನ್ ಅಂತ ಹೇಳಿ ಸರ್ಕಾರದವರು ಒಂದು ಆರ್ಗನೈಸೇಷನ್ ಮಾಡಿ ದರೆ ಸರ್ಕಾರದಲ್ಲಿರತಕ್ಕ ಆಗುಹೋಗುಗಳನ್ನು, ಅಡ ಚಣೆಗಳನ್ನು ದೂರಮಾಡಿದಂತಾಗುತ್ತದೆ. ಅಷ್ಟೇ ಅಲ್ಲದೆ ಮೂರನೇ ಪಂಚವಾರ್ಷಿಕ ಯೋಜನೆಗೆ ಬೇಕಾದ ದುಡ್ಡನ್ನು ಕೂಡ ಅದರಿಂದ ಬರಮಾಡಿಕೊಳ್ಳಬಹುದು ಎಂದು ಅನ್ನಿಸುತ್ತದೆ.

ಇನ್ನು ಈ ರಿಪೋರ್ಟ್‌ನಲ್ಲಿ ಆಯಾಯಾ ಡಿಪಾರ್ಟ್ ಮೆಂಟಿಗೆ ಸಂಬಂಧಿಸಿದಂತೆ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಮೆಡಿಕಲ್ ಡಿಪಾರ್ಟ್ ಮೆಂಟ್ ಬಗ್ಗೆ ಹೇಳುವುದಾದರೆ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್ ಎರಡಕ್ಕೂ ಒಂದೇ ಸ್ಥಾನ ಕೊಡ ಬೇಕೆಂದು ಹೇಳಿದ್ದಾರೆ. ಈಗ ನಡೆದುಕೊಂಡು ಬಂದಿರುವುದು ಸುಗಮವಾಗಿ ನಡೆದುಕೊಂಡು ಬಂದಿದೆ. ದಿನ ದಿನಕ್ಕೆ ಈ ಡಿಪಾರ್ಟ್‌ಮೆಂಟ್ ಹೆಚ್ಚುತ್ತಾ ಹೋಗುತ್ತಿದೆ. ಹಳ್ಳಿಗಳಿಗೆ ಹೆಚ್ಚಿನ ಸೌಲಭ್ಯ ಕೊಡಬೇಕೆಂದು ಸರ್ಕಾರದ ನಿಯಮ ಇದ್ದುದರಿಂದ, ಹೆಚ್ಚಿನ ಬಲವತ್ತರ ಬಂದುದರಿಂದ ಈಗಿರತಕ್ಕ ಸಿಬ್ಬಂದಿ ಕಡಿಮೆ ಇದೆ, ಹೆಚ್ಚು ಆಗಬೇಕು. ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್‌ಗೆ ಕೊಡತಕ್ಕ ದುಡ್ಡು ಪ್ರತಿ ವರ್ಷವೂ ಉಳಿತಾಯವಾಗುತ್ತಾ ಇದೆ. ಇದಕ್ಕೆ ಕಾರಣವೇನೆಂದರೆ ನೀವು ನೇಮಕ ಮಾಡಿರತಕ್ಕ ಡಾಕ್ಟರುಗಳು ಇವತ್ತು ಹಳ್ಳಿಗಳಿಗೆ ಹೋಗುತ್ತಿಲ್ಲ. ಆದ್ದರಿಂದ ಅವರಿಗೆ ಕೊಡತಕ್ಕ ಪಗಾರ ಉಳಿತಾಯ ವಾಗಿದೆ. ಈಗ ನಮ್ಮ ಸರ್ಕಾರದವರು ಈ ಹಳ್ಳಿ ಗಳಲ್ಲಿ ಎರಡು ಟೈಪ್ ಪ್ರೈಮರಿ ಹೆಲ್ತ್ ಯೂನಿಟ್ ಗಳನ್ನು ಮಾಡಿದ್ದಾರೆ. ಒಂದನೆಯದು ಗವರ್ನಮೆಂಟ್ ಆಫ್ ಇಂಡಿಯಾ ಪ್ಯಾಟರ್ನ್, ಇನ್ನೊಂದು ಮೈಸೂರು ಪ್ಯಾಟರ್ನ್. ಗವರ್ನ್‌ಮೆಂಟ್ ಆಫ್ ಇಂಡಿಯಾ ಪ್ಯಾಟರ್ನ್‌ಗೆ 16 ಸಾವಿರ ರೂಪಾಯಿ ಖರ್ಚು, ಮೈಸೂರು ಪ್ಯಾಟರ್ನ್‌ಗೆ 11 ಸಾವಿರ ರೂಪಾಯಿ ಖರ್ಚಾಗುತ್ತದೆ. ಈ ರೀತಿಯಾಗಿರುವುದರಿಂದ ಮೈಸೂರು ಪ್ಯಾಟರ್ನ್ ಜಾರಿಯಲ್ಲಿ ತಂದರೆ ಇನ್ನು ಹೆಚ್ಚು ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ಸ್ಥಾಪನೆ ಮಾಡಬಹುದು. ಅದರಿಂದ ಜನರಿಗೆ ಉಪಯುಕ್ತತೆ ಯನ್ನುಂಟು ಮಾಡಿದಂತಾಗುತ್ತದೆ. ಇನ್ನೊಂದು ವಿಷಯ ಆನರರಿ ಸರ್ಜನ್ಸ್ ಅಂತ ಹೇಳಿ ಟೌನ್‌ಗಳಲ್ಲಿ ಮಾತ್ರ ಇದ್ದಾರೆ. ರೂರಲ್ ಏರಿಯಾದಲ್ಲೂ ಕೂಡ ಅವರನ್ನು ನೇಮಕಮಾಡಿದರೆ ಸ್ವಲ್ಪ ಹಣದ ವೆಚ್ಚದಲ್ಲಿ ಹೆಚ್ಚು ಸೌಲತ್ತು ಪಡೆದುಕೊಂಡಂತಾಗುತ್ತದೆ. ಪ್ರೈಮರಿ ಹೆಲ್ತ್ ಯೂನಿಟ್ ಮತ್ತು ಡಿಸ್ಪೆನ್ಸರಿಗಳಲ್ಲಿ ನಿಯಮಿಸಿದ ಡಾಕ್ಟರುಗಳಿಗೆ ಸರ್ಕಾರದವರು ಕೊಟ್ಟಿರತಕ್ಕ ಸೌಲಭ್ಯಗಳು ಇವೆ. ಔಷಧೋಪಚಾರ ಮತ್ತು ಯು. ಎನ್. ಸಿ. ಐ. ಎಫ್‌ನಿಂದ ದೊರಕ ತಕ್ಕ ಸಹಾಯ ಜನರಿಗೆ ಸಿಕ್ಕಿ ಉಪಯುಕ್ತವಾಗ ಬೇಕಾದರೆ ಇವತ್ತಿನ ದಿವಸ ಮೆಡಿಕಲ್ ಆಫೀಸರುಗಳ ಪ್ರೈವೇಟ್ ಪ್ರಾಕ್ಟೀಸ್‌ಮೇಲೆ ನಿರ್ಬಂಧ ಹಾಕಬೇಕು. ಹಾಕಿದರೆ ಜನರಿಗೆ ಆ ಸೌಲತ್ತು ದೊರಕುತ್ತದೆ ಎಂದು ಹೇಳಿ ಸಲಹೆ ಮಾಡುತ್ತೇನೆ. ನಮ್ಮ ಭಾಗದಲ್ಲಿ ಎಂದರೆ ಬೆಳಗಾಂವ ಡಿವಿಜನ್‌ನಲ್ಲಿ ಎಸ್. ಎಂ. ಪಿ. ಸೆಂಟರ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇವುಗಳ ಮುಖಾಂತ ರವೇ ಜನರಿಗೆ ಹಳ್ಳಿಗಳಲ್ಲಿ ಬಹಳ ಸೌಲತ್ತು ಸಿಕ್ಕಿದೆ. ಒಂದು ಉದಾಹರಣೆ ಹೇಳಬೇಕೆಂದರೆ ನಮ್ಮ ತಾಲ್ಲೂಕಿನಲ್ಲಿ ಬೆಳಹಟ್ಟಿ ಅನ್ನುವ ಕಡೆ ಎಸ್.ಎಮ್.ಪಿ. ಸೆಂಟರ್ ಇದೆ. ಪ್ರೈಮರಿ ಹೆಲ್ತ್ ಯೂನಿಟ್‌ನಲ್ಲಿ ಯಾವ ಸೌಲಭ್ಯ ಸಿಕ್ಕುತ್ತದೆ ಅದಕ್ಕಿಂತ ಹೆಚ್ಚು ಸೌಲಭ್ಯಗಳನ್ನು ಅಲ್ಲಿ ಪಡೆಯುತ್ತಾ ಇದ್ದಾರೆ. ಅದಕ್ಕೆ ಸರಿಯಾದ ಕಟ್ಟಡ ಇಲ್ಲ, ಮತ್ತು ಔಷಧಗಳಿಲ್ಲದೆ, ಸರಿಯಾಗಿ ಔಷಧೋಪಚಾರ ಸಿಕ್ಕದಂತಾಗಿದೆ. ಅಲ್ಲಿ ಕೆಲಸ ಮಾಡತಕ್ಕ ಡಾಕ್ಟರುಗಳಿಗೆ ಯಾವ ತರಹದ ಸೌಲಭ್ಯವೂ ಕೂಡ ಇಲ್ಲ. ಆದ್ದರಿಂದ ಅವರಿಗೆ ಹೆಚ್ಚು

(ಶ್ರೀ ಕಾಶೀನಾಥ್ ಸಿದ್ದಯ್ಯ ವೀರಯ್ಯ)

ಸೌಲಭ್ಯ ಕೊಟ್ಟು ಎಸ್. ಎಮ್. ಪಿ. ಸೆಂಟರ್ ಮುಖಾಂತರವಾದರೂ ಜನರು ಔಷಧೋಪಚಾರ ಪಡೆದುಕೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಮೆಡಿಸನ್ ಬಗ್ಗೆ ಹೇಳುವುವಾದರೆ ಪ್ರೈಮರಿ ಹೆಲ್ತ್ ಯೂನಿಟ್‌ಗಳಲ್ಲಿ ಸಾಕಾದಷ್ಟು ಪ್ರೊವಿಜನ್ ಇಟ್ಟಿದ್ದೀರಿ. ಆದರೆ ಪ್ರತಿವರ್ಷ ಎಷ್ಟು ಔಷಧಗಳನ್ನು ಪೂರೈಕೆಮಾಡಿಕೊಳ್ಳಬೇಕೋ ಅಷ್ಟು ಪೂರೈಕೆಮಾಡಿಕೊಳ್ಳದೇ ಅವೆಲ್ಲಾ ಲ್ಯಾಪ್ಸ್ ಆಗುತ್ತವೆ. ಆ ರೀತಿಯಾಗದಂತೆ ಮಾಡಿದ್ದರೆ ಚೆನ್ನಾಗಿತ್ತು.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳಬೇಕೆಂದರೆ ಬೇಸಿಕ್ ಸ್ಕೂಲ್‌ಗಳಿಗೆ ಎಷ್ಟೋ ಹೆಚ್ಚು ರೊಕ್ಕ ಖರ್ಚು ಮಾಡಿದರೂ ಅವು ಸರಿಯಾಗಿ ನಡೆಯದಂಥ ಪರಿಸ್ಥಿತಿ ಇದೆ. ಇವೊತ್ತು ಆರ್ಡಿನರಿ ಸ್ಕೂಲುಗಳಿಗಿಂತ ಬೇಸಿಕ್ ಸ್ಕೂಲುಗಳಿಗೆ ಹೆಚ್ಚು ಹಣ ಖರ್ಚುಮಾಡುತ್ತಾ ಇದ್ದೇವೆ. ಆದರೆ ಅದರಿಂದ ಪ್ರಯೋಜನವಾಗುತ್ತಾ ಇಲ್ಲ. ಹಿಂದೆ ಹೇಳಿದಂತೆ ಯಾವ ಭಾಗದಲ್ಲಿ ಯಾವ ಕೈಗಾರಿಕೆ ಏನೇ ಮಾಡಿದರೂ ಕೂಡ ಅದಕ್ಕೆ ತದ್ವಿರುದ್ಧವಾಗಿ ಇವತ್ತಿನ ದಿವಸ ಬೇಸಿಕ್ ಶಾಲೆಗಳು ನಡೆಯುತ್ತಾ ಬಂದದ್ದರಿಂದ ಅವು ಸರಿಯಾಗಿ ನಡೆಯುತ್ತಿಲ್ಲ. ಅದರ ಸಲುವಾಗಿ ಅವುಗಳಿಗೆ ಬದಲಾಗಿ ಆರ್ಡಿನರಿ ಸ್ಕೂಲುಗಳನ್ನೇ ಹೆಚ್ಚಾಗಿ ನಡೆಸಿದರೆ ಅದರಿಂದ ಉಪಯುಕ್ತವಾಗುತ್ತದೆ. ಮಲ್ಟಿಪರ್‌ಪಸ್ ಸ್ಕೂಲುಗಳೂ ಸಹ ಚೆನ್ನಾಗಿ ನಡೆಯುತ್ತಿಲ್ಲ. ಅದರ ಸಲುವಾಗಿ ಹೆಚ್ಚು ನಿರ್ಬಂಧ ಮಾಡಿ ಆರ್ಡಿನರಿ ಸ್ಕೂಲುಗಳನ್ನೇ ನಡೆಸಿ. ಟೆಕ್ನಿಕಲ್ ಎಜ್ಯುಕೇಷನ್ ಬಗ್ಗೆ ಸ್ಟೇಟ್‌ನಲ್ಲಿ ಕಚ್ಚಾಟ ಹೆಚ್ಚಾಗಿ ನಡೆಯುತ್ತಾ ಬಂದಿದೆ. ದಿನದಿನಕ್ಕೆ ಟೆಕ್ನಿಕಲ್ ಸ್ಕೂಲುಗಳಲ್ಲಿ ಸ್ಥಳದ ಅಭಾವ ಹೆಚ್ಚಾಗುತ್ತಿದೆ. ಅದರ ಸಲುವಾಗಿ ಈ ವರದಿಯಲ್ಲಿ ಹೇಳಿರುವಂತೆ ಬೋರ್ಡ್ ಆಫ್ ಟೆಕ್ನಿಕಲ್ ಎಜ್ಯುಕೇಷನ್ ಎಂದು ಮಾಡಿ, ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಅವರನ್ನು ಚೇರ್ಮನ್‌ರಾಗಿ ಮಾಡಿ, ಡೆಪ್ಯುಟಿ ಡೈರೆಕ್ಟರನ್ನು ಮೆಂಬರ್–ಸೆಕ್ರೆಟರಿ ಆಗಿ ಇಟ್ಟುಕೊಂಡು large industrial concerns representatives ನ್ನು ಮೆಂಬರ್ಸ್ ಆಗಿ ಮಾಡಿ ಅದರ ಮುಖಾಂತರ ಟೆಕ್ನಿಕಲ್ ಸ್ಕೂಲ್‌ಗಳನ್ನು run ಮಾಡಿದರೆ ಹೆಚ್ಚು ಸೌಲಭ್ಯ ಸಿಕ್ಕುತ್ತವೆ. ಸ್ಟೇಟ್ ಇಂಡಸ್ಟ್ರೀಸ್ ಕೂಡ ಹೆಚ್ಚಾಗಿ ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಪ್ರೊಹಿಬಿಷನ್ ಬಗ್ಗೆ ಹೇಳಬೇಕೆಂದರೆ ಎಲ್ಲರಿಗೂ ತಿಳಿದಂತೆ ನಮ್ಮ ಸ್ಟೇಟ್‌ನಲ್ಲಿ ಅದು ಜಯಪ್ರದವಾಗಿಲ್ಲ ಎಂದು ಅಂಕಿ ಅಂಶಗಳ ಮೂಲಕ ಹೇಳಬಹುದಾಗಿದೆ. ಅದೇ ರೀತಿಯಾಗಿ ಈ ರಿಪೋರ್ಟ್‌ನಲ್ಲೂ ಈ ಸಮಿತಿಯ ಒಬ್ಬ ಸದಸ್ಯರಾದ ಶ್ರೀಮಾನ್ ಎಂ. ರಾಮಪ್ಪನವರೂ ಕೂಡ ಹೇಳಿದ್ದಾರೆ. ಹೆಚ್ಚು ಹೆಚ್ಚು ತೆರಿಗೆಗಳನ್ನು ಹಾಕುವುದರ ಬದಲು ಪ್ರೊಹಿಬಿಷನ್ ಸ್ಕ್ರಾಪ್ ಮಾಡಿದರೆ ಅದರಿಂದ ಆದಾಯ ಬರುತ್ತದೆ ಎಂದು ಹೇಳಿ ಅವರು ಪ್ರತ್ಯೇಕವಾಗಿ ಈ ವರದಿಯಲ್ಲಿ ಅವರ ಉತ್ತರವನ್ನು ಬರೆದಿದ್ದಾರೆ. ಅದ್ದರಿಂದ ಅದಕ್ಕೆ ಹೆಚ್ಚು ಗಮನ ಕೊಟ್ಟರೆ ಸೇಲ್ಸ್ ಟ್ಯಾಕ್ಸ್ ವಗೈರೆ ತೆರಿಗೆಗಳು ಹಾಕುವುದನ್ನು ಬಿಡಲಿಕ್ಕೆ ಸಾಧ್ಯವಾಗುತ್ತದೆ.

ಇನ್ನು ಕೋರ್ಟುಗಳ ಬಗ್ಗೆ ಹೇಳಬೇಕೆಂದರೆ ಕೆಲವು ಸಂಚಾರಿ ಕೋರ್ಟುಗಳು ಇವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಮ್ಯಾಜಿಸ್ಟ್ರೇಟ್ ಕೋರ್ಟು ಅಥವಾ ಮುನಿಸೀಫ್ ಕೋರ್ಟು ರಚನೆ ಮಾಡಬೇಕು. ಇನ್ನು ಮುಂದಾದರೂ ಈ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ವ್ಯವಸಾಯದ ಬಗ್ಗೆ ಹೇಳಬೇಕೆಂದರೆ ಸೀಡ್‌ಫಾರಂನಲ್ಲಿ ಸಕಾಲದಲ್ಲಿ ಸೀಡ್ಸ್ ದೊರೆಯುತ್ತಾ ಇಲ್ಲ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮುಖಾಂತರ ದೊರೆಯತಕ್ಕ ಒಳ್ಳೆಯ ಬೀಜ, ಔಷಧೋಪಚಾರಗಳು ಸಕಾಲದಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕು. ಒಂದು ದುರ್ದೈವದ ಸಂಗತಿ ಎಂದರೆ ಬೊಂಬಾಯಿ ಸರ್ಕಾರದಿಂದ ಈ ಸರ್ಕಾರಕ್ಕೆ ಬಂದಾಗ ಇರಿಗೇಷನ್ ಪರ್‌ಪಸ್ ಸಲುವಾಗಿ ಕೆಲವೊಂದು ಮೆಷಿನರಿಗಳನ್ನು ಕೊಟ್ಟರು ಇಲ್ಲಿಯವರೆಗೂ ಅವುಗಳು ಹಾಗೆಯೇ ಬಿದ್ದಿವೆ. ಸಿ. ಡಿ. ಬ್ಲಾಕ್ ಮತ್ತು ಎನ್. ಇ. ಎಸ್ ಬ್ಲಾಕ್‌ಗಳಲ್ಲಿ ಇಲ್ಲಿಯವರೆಗೆ ಎಷ್ಟು ಮಟ್ಟಿನ success ಆಗ ಬೇಕಾಗಿತ್ತೋ ಅಷ್ಟು successful ಆಗಿಲ್ಲ. ಅದರ ಸಲುವಾಗಿ ಇನ್ನೊಂದು ಕಮಿಟಿಯನ್ನಾದರೂ ಮಾಡಿ ಅದು ಜಯಪ್ರದವಾಗುವಂತೆ ಮಾಡಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮುಖಾಂತರ ಬರೀ ರೊಕ್ಕ ಖರ್ಚಾಗುತ್ತಿದೆಯೇ ವಿನಾ ಅದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಡಿ. ಸಾಮ್ರಾಜ್ಯ (ಬ್ರಹ್ಮಾವರ).—ಈಗ ಮೂಲೋತ್ಪಾದನೆ ಮತ್ತು ಮಿತವ್ಯಯ ಸಮಿತಿ ವರದಿಯ ವಿಚಾರವಾಗಿ ನನಗೆ ತಿಳಿದ ಒಂದೆರಡು ವಿಷಯಗಳನ್ನು ಈ ಸಭೆಯ ಮುಂದಿಡಬೇಕೆಂದಿದ್ದೇನೆ. ಮೊದಲನೆಯದಾಗಿ ವರದಿಯಲ್ಲಿ ಹೇಳಿರುವ ಪ್ರಕಾರ ಜನರಿಗೆ ಬೇಕಾದ ಸೌಕರ್ಯವನ್ನೊದಗಿಸುವುದಕ್ಕೆ ತೆರಿಗೆಗಳನ್ನು ಹಾಕಬೇಕಾಗುತ್ತದೆ. ಇದನ್ನು ಎಲ್ಲರೂ ಒಪ್ಪಬೇಕು. ಏಕೆಂದರೆ ಪ್ರತಿಯೊಂದೂ ಸುಧಾರಣೆಯಾಗಬೇಕು, ರಸ್ತೆಯಾಗಬೇಕು, ಸೇತುವೆ, ಆಸ್ಪತ್ರೆ ಬೇಕು ಎಂದು ಅನೇಕರು ಕೇಳುವಾಗ ಅವುಗಳಿಗೆ ಹಣವಿಲ್ಲದಿದ್ದರೆ ಸರ್ಕಾರ ಗಮನ ಕೊಡಲು ಸಾಧ್ಯವಿಲ್ಲ. ಪಾನನಿರೋಧ ಜಾರಿಗೆ ತರಬೇಕೆಂದು ರಾಜ್ಯಾಂಗದಲ್ಲಿದೆ, ಮಹಾತ್ಮ ಗಾಂಧಿಯವರೂ ಕೂಡ ಹೇಳಿದ್ದಾರೆ. ಆದರೆ ಈಗ ಜನರಿಗೆ ಬೇಕಿಲ್ಲದಿರುವುದನ್ನು ತಂದು ದೇಶಕ್ಕೆ ಒಳ್ಳೆಯದಾಗಬೇಕು ಎಂದರೆ ಹೇಗೆ? ಜನರಿಗೆ ತೊಂದರೆ ಬರಬಾರದು, ಒಳ್ಳೆಯದಾಗಬೇಕು ಎಂದು ಸರ್ಕಾರ ಕಾನೂನು ಮಾಡಿ ಪಾನ ನಿರೋಧ ಜಾರಿಗೆ ತಂದರೆ ಇದರಿಂದ ಪ್ರತಿಯೊಂದು ಹಳ್ಳಿಯಲ್ಲೂ ಹಣಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಈಗ ಪೋಲೀಸಿನವರು ಕುಡಿಯುವವರನ್ನು ಹಿಡಿಯುತ್ತಾರೆಯೇ ವಿನಾ ಪಾನವನ್ನು ತಯಾರಿಸುವವರನ್ನು ಹಿಡಿಯುತ್ತಿಲ್ಲ. ಎಷ್ಟೋ ಸಲ ಈ ವಿಚಾರವನ್ನು ನಾನು ಪೋಲೀಸು ಅಧಿಕಾರಿಗಳಿಗೆ ಹೇಳಿದೆ. ತಯಾರಿಸುವವರು ಸಿಕ್ಕುವುದಿಲ್ಲವೇ? ಜನರಿಗೆ ಬೇಡದಿರುವಾಗ ಪಾನನಿರೋಧವನ್ನು ತೆಗೆದರೆ ಕೋಟಿಗಟ್ಟಲೆ ಹಣ ಬರಬಹುದು, ಸರ್ಕಾರ ತೆರಿಗೆ ಹಾಕಬೇಕಾಗುವುದಿಲ್ಲ. ಜನರಿಗೂ ಕೂಡ ನಿರೋಧದ ವಿಚಾರದಲ್ಲಿ ಅನಾದರಣೆಯಿದೆ. ನಮ್ಮ ಜಿಲ್ಲೆಯಲ್ಲಿ ನಡೆದ ಜಿಲ್ಲಾಮಟ್ಟದ ಮಂಡಲಿಯ ಸಭೆ ನಡೆದಾಗಲೂ, ಪ್ರದೇಶ ಕಾಂಗ್ರೆಸ್ ಕಮಿಟಿಯಲ್ಲೂ, ಪಂಚಾಯಿತಿ ಸಭೆಯಲ್ಲೂ ಪಾನ ನಿರೋಧವನ್ನು ರದ್ದು ಮಾಡಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದೇವೆ. ಜನರಿಗೆ ಬೇಡವಾದ್ದನ್ನು ಒತ್ತಾಯ ಮಾಡುವುದರಿಂದ ನಮ್ಮ ರಾಜ್ಯಕ್ಕೂ ನಷ್ಟ ಜನರಿಗೂ ಕೂಡ ಯಾವ

ರೀತಿಯ ಸುಖವೂ ಇಲ್ಲದೆ ಅವರ ಆರೋಗ್ಯವೂ ಹಾಳಾಗುತ್ತದೆ. ಅಲ್ಲದೆ ನಮ್ಮ ಮಿತ್ರರನೇಕರು ಹೇಳಿದಂತೆ ಬೇರೆ ರೀತಿಯಲ್ಲಿ ಲಂಚದ ಹಾವಳಿಯು ಹೆಚ್ಚಲೂ ದಾರಿಯಾಗುತ್ತದೆ. ಆದುದರಿಂದ ಪ್ರಥಮತಃ ಹೇಳುವುದಾದರೆ, ಈ ವಿಷಯದಲ್ಲಿ ಒಂದು ಹೈಪವರ್ ಸಮಿತಿಯನ್ನು ರಚಿಸಿ ಯಾವ ರೀತಿ ಪಾನ ನಿರೋಧವನ್ನು ಜಾರಿಗೆ ತರಬಹುದು ಅಥವಾ ನಿಲ್ಲಿಸಿ ಯಾವ ರೀತಿ ಮುಂದುವರಿಸಬಹುದು ಎಂದು ಇತ್ಯರ್ಥಮಾಡುವುದು ಶ್ಲಾಘನೀಯ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಚಿಕ್ಕಮಗಳೂರು ಮುಂತಾದ ಸಣ್ಣ ಜಿಲ್ಲೆಗಳೇನಿವೆ ಅವು ಬೇಡ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಈಗ ಆಡಳಿತ ಸುಧಾರಣೆ ಮಾಡಲು ಒಂದೊಂದ ತಾಲ್ಲೂಕಿಗೂ ಒಬ್ಬ ತಹಸಿಲ್ದಾರರು ಮತ್ತು 2-3 ಡೆಪ್ಯುಟಿ ತಹಸಿಲ್ದಾರರನ್ನು ಹಾಕಬೇಕು, ಜಿಲ್ಲೆಗೆ ಒಬ್ಬ ಡೆಪ್ಯುಟಿ ಕಮೀಷನರು ಸಾಲುವುದಿಲ್ಲ, ಅಡೀಷನಲ್ ಡೆಪ್ಯುಟಿ ಕಮೀಷನರಿರಬೇಕು ಎಂಬುದಾಗಿ ಸರ್ಕಾರ ಯೋಚನೆ ಮಾಡುತ್ತಿದೆ. ಹೀಗೆ ಯೋಚಿಸುತ್ತಿರುವಾಗ ಜಿಲ್ಲೆ ದೊಡ್ಡದು ಮಾಡಿದರೆ ಜನರಿಗೆ ಸುಖವಾಗುವುದಿಲ್ಲ. ಸಣ್ಣದು ಸಾಧ್ಯವಾದರೆ ಮಾಡಬೇಕು, ಇಲ್ಲದಿದ್ದರೆ ಈಗಿರುವ ಹಾಗೇ ಉಳಿಸಿ, ಬೇಕಾದರೆ ಅವಕ್ಕೆ ಕೆಲವು ಭಾಗ ಸೇರಿಸಬಹುದು. ಜಿಲ್ಲೆಗಳ ಸಂಖ್ಯೆ ಕಡಮೆ ಮಾಡುವುದು ಸೂಕ್ತವಲ್ಲ. ಇನ್ನೊಂದು ಜಿಲ್ಲೆಗೆ ಇಬ್ಬರು ಡೆಪ್ಯುಟಿ ಕಮೀಷನರನ್ನು ನೇಮಿಸುವ ಯೋಚನೆಯಿದೆ ಹಾಗೆ ಮಾಡಿ ಒಬ್ಬರಿಗೆ ಆಡಳಿತ ವಿಚಾರವನ್ನು ಇನ್ನೊಬ್ಬರಿಗೆ ಡೆವಲಪ್‌ಮೆಂಟ್ ವಿಚಾರವನ್ನು ವಹಿಸಬಹುದು. ಆದರೆ ಅದರಿಂದ ಸರಿಯಾದ ಕೆಲಸವಾಗುವುದಿಲ್ಲ. ಒಂದೇ ಜಿಲ್ಲೆಗೆ ಇಬ್ಬರಿದ್ದರೆ ಸರಿಯಾದ ರೀತಿಯಲ್ಲಿ ಕೆಲಸವಾಗದೆ ತೊಂದರೆಯಾಗಬಹುದು. ತಹಸಿಲ್ದಾರರು ಮುಂತಾದವರು ಡೆಪ್ಯುಟಿ ಕಮಿಷನರ ಹಿಂದೆ ಹೋಗಬೇಕಾಗುತ್ತದೆ. ಹೀಗೆ ಅವರಿಗೆ ತಿರುಗಾಟ ಜಾಸ್ತಿಯಾದರೆ ಹೆಚ್ಚು ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಇಬ್ಬರಿಗೆ ಪ್ರವಾಸ ಭತ್ಯ ಕೊಡಬೇಕಾಗುತ್ತದೆ. ಇದರಿಂದ ಒಳ್ಳೆಯದಾಗುವುದಕ್ಕೆ ಬದಲಾಗಿ ತೊಂದರೆಯಾಗುತ್ತದೆ, ಉತ್ತಮವಾಗುವುದಿಲ್ಲ.

ಇನ್ನು ತಾಲ್ಲೂಕುಗಳ ವಿಚಾರ ಹೇಳುವುದಾದರೆ ಕೆಲವು ಕಡೆ 2-3 ಲಕ್ಷ ಜನಸಂಖ್ಯೆಗೆ ಒಂದು ತಾಲ್ಲೂಕಿದೆ, ಮತ್ತೆ ಕೆಲವು ಕಡೆ 20 ಸಾವಿರ ಜನ ಸಂಖ್ಯೆಗೇ ಒಂದು ತಾಲ್ಲೂಕಿದೆ. ಕೆಲವು ತಾಲ್ಲೂಕುಗಳಲ್ಲಿ 100 ಚದರ ಮೈಲಿ ಪ್ರದೇಶವಿದ್ದರೆ ಮತ್ತೆ ಕೆಲವು ತಾಲ್ಲೂಕುಗಳಲ್ಲಿ 500-800 ಚದರ ಮೈಲಿ ಪ್ರದೇಶವಿದೆ. ಇದು ಸರಿಯಲ್ಲ. ಒಂದು ಲಕ್ಷ ಪ್ರಜಾ ಸಂಖ್ಯೆಗೆ ಒಂದು ತಾಲ್ಲೂಕಿರುವಂತೆ 200 ಚದರ ಮೈಲಿ ಪ್ರದೇಶ ಸೇರಿಸಿ ಒಂದು ತಾಲ್ಲೂಕನ್ನು ರಚಿಸಿದರೆ ಹಣ ಜಾಸ್ತಿ ಖರ್ಚುಮಾಡಬೇಕಾಗುವುದಿಲ್ಲ. ನಮ್ಮಲ್ಲಿ ಒಂದು ತಾಲ್ಲೂಕಿಗೆ 2-3 ಬ್ಲಾಕುಗಳಿವೆ, ಕೆಲವು ಕಡೆ 4 ಬ್ಲಾಕುಗಳು ಕೂಡ ಇವೆ. ಇದಕ್ಕೆ ಬದಲಾಗಿ ಅಭಿವೃದ್ಧಿ ಕಾರ್ಯ ಮತ್ತು ರೆವೆನ್ಯೂ ಕೆಲಸ ಎರಡಕ್ಕೂ ಒಂದೇ ವ್ಯವಸ್ಥೆ ಮಾಡಿ ಎರಡಕ್ಕೂ ಒಂದು ಬ್ಲಾಕ್ ಮಾಡಿದರೆ ಎಲ್ಲಾ ಕೆಲಸವನ್ನೂ ಮಾಡಲು ಸಾಧ್ಯವಿದೆ. ಒಬ್ಬ ತಹಸಿಲ್ದಾರ್, ಡೆಪ್ಯುಟಿ ತಹಸಿಲ್ದಾರ್, B. D. O. ಹೀಗೆ 4-5 ಆಫೀಸರುಗಳನ್ನು ಒಂದೇ ಕಡೆ ಹಾಕಿದರೆ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ, ಸರಿಯಾದ ಲೆಕ್ಕಪತ್ರ ಸಿಕ್ಕುವುದಿಲ್ಲ. ಇದುವರೆಗೆ ಶ್ಯಾನುಭೋಗರಿದ್ದರು, ಇನ್ನು ಮುಂದೆ ಪಂಚಾಯಿತಿ ಸೆಕ್ರೆಟರಿ ಇರುತ್ತಾರೆ. ಅವರು 4-5 ಆಫೀಸರುಗಳಿಗೆಲ್ಲಾ ಲೆಕ್ಕಪತ್ರ ಕೊಡಬೇಕೆಂದರೆ ಕಷ್ಟವಾಗುತ್ತದೆ. ಒಂದು ಬ್ಲಾಕಿಗೆ, ಒಂದು ತಾಲ್ಲೂಕಿಗೆ ಒಬ್ಬರೇ ಆಫೀಸರಿದ್ದರೆ ಖರ್ಚು ಉಳಿಯಬಹುದು.

ಇನ್ನು ಡಿವಿಜನಲ್ ಕಮಿಷನರು ಬೇರೆ ಇದ್ದಾರೆ. ಈ ಆಫೀಸು ಒಂದು ದೊಡ್ಡ ಪೋಸ್ಟ್ ಆಫೀಸಿದ್ದ ಹಾಗೆ. ಎಲ್ಲ ಕಾಗದ ಪತ್ರಗಳೂ ಸರ್ಕಾರಕ್ಕೆ ಅವರ ಮೂಲಕ ಬರಬೇಕೆಂದರೆ ಬಹಳ ತೊಂದರೆಯಿದೆ. ಡೆಪ್ಯುಟಿ ಕಮಿಷನರ ಮೂಲಕ ನೇರವಾಗಿ ಸರಕಾರಕ್ಕೆ ಬಂದರೆ ಬೇಗ ಉತ್ತರ ಸಿಕ್ಕಬಹುದು, ಕೆಲಸವಾಗಬಹುದು. ಅದೇ ಡಿವಿಜನಲ್ ಕಮಿಷನರಿದ್ದರೆ ಒಂದೊಂದು ಕಾಗದವೂ ಇತ್ಯರ್ಥವಾಗಲು 2-3 ತಿಂಗಳು ನಿಧಾನವಾಗುತ್ತದೆ, ಕಾರಣ ಕೇಳಿದರೆ ಒಬ್ಬರು ಇನ್ನೊಬ್ಬರ ಮೇಲೆ ಹೇಳಲು ಅವಕಾಶವಿದೆ. ಅಸಿಸ್ಟೆಂಟ್ ಕಮಿಷನರಿರಬೇಕು. ಆದರೆ ಅನೇಕ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರ ಮಂಜೂರಾತಿ ಪಡೆಯಬೇಕಾಗುವುದರಿಂದ ನಿಧಾನವಾಗುತ್ತದೆ. ಇದೆಲ್ಲವನ್ನೂ ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬರಲು ದಕ್ಷರಾದವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಯಾವ ರೀತಿ ಮಾಡಿದರೆ ಒಳ್ಳೆಯದಾಗುವುದೆಂದು ನಿರ್ಧರಿಸುವುದು ಒಳ್ಳೆಯದು. ಈಗ ಯಾವುದೇ ಅರ್ಜಿ ಬಂದರೂ ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಬಂದು ಸರಿಯಾಗಿಲ್ಲವೆಂದು ಕೆಳಗಿನ ಆಫೀಸರಿಗೆ ಹೋಗಿ ಮತ್ತೆ ಬಂದು ಇತ್ಯರ್ಥವಾಗಲು ವರ್ಷಗಟ್ಟಲೆ ನಿಧಾನವಾಗುತ್ತದೆ. ಆದುದರಿಂದ ಅರ್ಜಿ ಯಾವ ರೀತಿ, ಯಾವ ಫಾರಂನಲ್ಲಿ ಕೊಡಬೇಕು ಎಂದು ಗೊತ್ತು ಮಾಡಿದರೆ ಅದಷ್ಟು ಬೇಗ ಇತ್ಯರ್ಥವಾಗಲು ಅನುಕೂಲವಾಗುತ್ತದೆ. 28 ಸಲ ಕಾಗದ ಅಥವಾ ಫೈಲು ಕೆಳಕ್ಕೆ, ಮೇಲಕ್ಕೆ ಹೋಗುವುದಕ್ಕೆ ಬದಲು ಒಂದೇ ಸಲ ತೀರ್ಮಾನವಾಗುವಂತೆ ಅವಕಾಶ ಮಾಡಿದರೆ ತುಂಬಾ ಸಹಾಯವಾಗುತ್ತದೆ.

ಮೀನುಗಾರಿಕೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಆದುದರಿಂದ ಫಿಷರೀಸ್ ಇಲಾಖೆ ಮತ್ತು ಅನಿಮಲ್ ಹಸ್ಬೆಂಡ್ರಿ ಇಲಾಖೆ ಒಟ್ಟಿಗೆ ಸೇರಿಸಿದರೆ ಒಳ್ಳೆಯದಾಗುವುದಿಲ್ಲ. ಮೀನುಗಾರಿಕೆ ಇಲಾಖೆಗೇ ಪ್ರತ್ಯೇಕ ಡೈರೆಕ್ಟರು ಬೇಕೇ ಬೇಕು. ಉತ್ತರ ಕನ್ನಡ ಮತ್ತು ಮಂಗಳೂರುಗಳಿಗೆ ಮಧ್ಯೆ ಒಂದು ಸ್ಥಳದಲ್ಲ ಡೈರೆಕ್ಟರ ಆಫೀಸನ್ನು ಸ್ಥಾಪಿಸಿದರೆ ನೋಡಿ ಬೇಕಾದ ಸೌಲಭ್ಯವನ್ನೊದಗಿಸುವುದಕ್ಕೂ ಮತ್ತು ಸರ್ಕಾರಕ್ಕೆ ತಿಳಿಸುವುದಕ್ಕೂ ಅನುಕೂಲವಾಗುತ್ತದೆ.

ಈ ದೇಶಕ್ಕೆ 25 ಮಂತ್ರಿಗಳೇಕೆ, ಈ ಸಂಖ್ಯೆ ಜಾಸ್ತಿ ಎಂದು ಅನೇಕರು ಆಕ್ಷೇಪಿಸಿದರು. ಅದು ಸರಿಯಲ್ಲ, ಇನ್ನೂ 25 ಜನ ಮಂತ್ರಿಗಳನ್ನು ನೇಮಕ ಮಾಡಿದರೆ ಇನ್ನೂ ಅನುಕೂಲವಾಗುತ್ತದೆ.

Mr. SPEAKER.—The house will now rise for tea far half an Hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

†ಶ್ರೀ ಎಸ್. ಡಿ. ಸಾಮ್ರಾಜ್ಯ.—ಮಂತ್ರಿಗಳು ಬೇರೆ ಬೇರೆ ಜಿಲ್ಲೆಗಳಿಗೆ ಪ್ರವಾಸ ಬಂದಾಗ ಆಯಾಯ ಜಿಲ್ಲೆಗಳ ಅಗತ್ಯವೇನು, ಯಾವ ಕೆಲಸಗಳಾಗಬೇಕು ಎಂಬ ಬಗೆಗೆ ಜನರನ್ನು ಭೇಟಿಮಾಡಿ ಅಲ್ಲಿನ ವಿಷಯಗಳನ್ನು ತಿಳಿದುಕೊಂಡು ಅಗತ್ಯವಾದ ವಿಷಯಗಳ ಬಗ್ಗೆ ಇತ್ಯರ್ಥ ಮಾಡಿದರೆ ಕೆಲಸಗಳು ಸುಲಭವಾಗುತ್ತವೆ. ಮಂತ್ರಿಗಳ ಪ್ರವಾಸದ ವಿಷಯದಲ್ಲಿ ಟೀಕೆ ಮಾಡುತ್ತಾರೆ. ಅವರು ಪ್ರವಾಸ ಮಾಡದೇಯಿದ್ದರೆ ಬೇರೆ ಬೇರೆ ಸ್ಥಳಗಳ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ರಾಜ್ಯದ ಕೇಂದ್ರದಲ್ಲೇ ಅವರು ಕುಳಿತರೆ ಹಳ್ಳಿಗಳಲ್ಲಿ ಜನರಿಗೆ ಏನು ತೊಂದರೆಗಳಿವೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಆಯಾ ಸ್ಥಳಗಳಿಗೆ ಬಂದರೆ ಸರಿಯಾಗಿ ತಿಳಿದುಕೊಳ್ಳಬಹುದು. ಎಂ. ಎಲ್. ಎ. ಗಳು ಅಥವಾ ಬೇರೆ ಕೆಲವರು ಹಣ ಖರ್ಚು ಮಾಡಿಕೊಂಡು ಕೇಂದ್ರಕ್ಕೆ ಬಂದು ಹೇಳಬಹುದು. ಮಿಕ್ಕವರು ತಮ್ಮ ಕಷ್ಟ ಸುಖಗಳನ್ನು ಹೇಗೆ ಹೇಳುವುದು? ಆದಕಾರಣ ಮಂತ್ರಿಗಳು ಪ್ರವಾಸವನ್ನು ಕಡಮೆ ಮಾಡಬೇಕೆಂದು ಹೇಳುವುದು ನ್ಯಾಯವಲ್ಲವೆಂದು ಹೇಳುತ್ತೇನೆ. ಪ್ರವಾಸ ಬಂದಾಗ ಆದಷ್ಟು ಮಟ್ಟಿಗೂ ವಿಷಯಗಳನ್ನು ಅಲ್ಲೇ ಇತ್ಯರ್ಥ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಜಿಲ್ಲೆಗಳ ಕೆಲಸ ಕಾರ್ಯಗಳನ್ನು ಸುಲಭ ಮಾಡುವುದಕ್ಕೆ ಅವಕಾಶವಿದೆ. ಈಗ ಜಿಲ್ಲೆಯ ಎಲ್ಲ ಸಮಿತಿಗಳಿಗೂ ಡೆಪ್ಯುಟಿ ಕಮಿಷನರು ಚೇರ್ಮನ್ ಆಗಿರುತ್ತಾರೆ. ಇದರಿಂದ ಅವರು ಜಿಲ್ಲೆಯ ಬೇರೆ ಬೇರೆ ಸ್ಥಳಗಳಿಗೆ ಪ್ರವಾಸಮಾಡಿ ಜನರ ಕಷ್ಟ ಸುಖಗಳನ್ನು ನೋಡಲು ಕಷ್ಟವಾಗುತ್ತಿದೆ. ತಿಂಗಳಲ್ಲಿ ಹತ್ತು, ಹದಿನೈದು ದಿನಗಳು ಸಮಿತಿಗಳ ಮೀಟಿಂಗುಗಳಲ್ಲಿ ಹಾಜರಿದ್ದು ಅಧ್ಯಕ್ಷತೆ ವಹಿಸಬೇಕಾಗುತ್ತದೆ. ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿಗಳಿಗೆ ಆಯಾ ಸಮಿತಿಗಳ ಅಧ್ಯಕ್ಷತೆ ವಹಿಸಿ ಮೀಟಿಂಗುಗಳನ್ನು ನಡೆಸುವಂತೆ ಮಾಡಿದರೆ ಡೆಪ್ಯುಟಿ ಕಮಿಷನರು ಜಿಲ್ಲೆಯ ಬೇರೆ ಮುಖ್ಯ ಕೆಲಸಗಳಿಗೆ ಗಮನ ಕೊಡುವುದು ಸುಲಭವಾಗುತ್ತದೆ. ಇನ್ನು ಮುಂದೆ ಹೀಗೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಷಯದಲ್ಲಿ ನಾವು ಹೋಗುತ್ತಿರುವ ರೀತಿಯನ್ನು ನೋಡಿದರೆ, ನಾವು ಬ್ರಿಟಿಷರ ಕಾಲದ ಪದ್ಧತಿಯನ್ನು ಇನ್ನೂ ಬಿಟ್ಟಿಲ್ಲವೆಂದು ತೋರುತ್ತದೆ. ದೇಶದಲ್ಲಿ ಇದರಿಂದ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗುತ್ತಿದೆ. ವಿದ್ಯೆ ಕಲಿತವರು ಪ್ರತಿಯೊಬ್ಬರು ನೌಕರಿ ಕೇಳುತ್ತಿದ್ದಾರೆ. ಕೃಷಿ ಅಭಿವೃದ್ಧಿಯಾಗಬೇಕೆಂದು ನಾವೆಲ್ಲ ಹೇಳುತ್ತಿದ್ದರೂ ಇದು ಆಗುತ್ತಿಲ್ಲ. ಕಾರಣ ಈಗಿನ ವಿದ್ಯೆ ಬರಿಯ ಬರವಣಿಗೆಯ ವಿದ್ಯೆ ಆಗಿದೆ. ನಿಜವಾಗಿ ಮನುಷ್ಯ ಹೇಗೆ ಸ್ವತಂತ್ರವಾಗಿ ಜೀವನವನ್ನು ನಡೆಸಬೇಕೋ ಹಾಗೆ ನಡೆಸುವುದನ್ನು ಕಲಿಯಬೇಕು. ಬೇಸಿಕ್ ಶಿಕ್ಷಣ ಮತ್ತು ಮಲ್ಟಿಪರ್ಪಸ್ ಸ್ಕೂಲುಗಳಲ್ಲಿ ಕೊಡುವ ಶಿಕ್ಷಣ ಯಶಸ್ವಿಯಾಗಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಸರಿಯಾಗಿ ಗಮನ ಕೊಡದೇಯಿರುವುದರಿಂದ ಇದು ಯಶಸ್ವಿಯಾಗಿಲ್ಲ. ಯಾವರೀತಿ ಜೀವನವನ್ನು ನಡೆಸಬೇಕೋ ಆ ರೀತಿ ನಡೆಸಲು ತಕ್ಕವಿದ್ಯೆಯನ್ನು ಕೊಟ್ಟರೆ ಎಷ್ಟೋ ಜನ ವಿದ್ಯಾರ್ಥಿಗಳು ಅಂಥ ಶಿಕ್ಷಣವನ್ನು ಪಡೆದು ಕೃಷಿಯ ಕಡೆ ಗಮನಕೊಟ್ಟು ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡುವುದಕ್ಕನುಕೂಲವಾಗುತ್ತದೆ. ಇನ್ನೂ ಹೆಚ್ಚು technical colleges ತೆರೆಯಬೇಕೆಂದು ಹೇಳುತ್ತಾರೆ, ಅದನ್ನು ನಾನು ಒಪ್ಪುವುದಿಲ್ಲ. ಎಲ್ಲರೂ ಇಂಜಿನಿಯರಿಂಗ್ ಕಾಲೇಜು ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಕೇಳಿದರೆ ಹೇಗೆ. ಈಗಾಗಲೇ ಇರುವ ಕಾಲೇಜುಗಳಲ್ಲಿ ಬೇಕಾದಷ್ಟು ಜನ ಶಿಕ್ಷಣ ಪಡೆಯುತ್ತಿದ್ದಾರೆ. ಇನ್ನು ಕೆಲವು ವರ್ಷಗಳು ಹೋದರೆ ಇವರಿಗೆಲ್ಲ ಕೆಲಸಗಳನ್ನು ಕೊಡುವುದು ಕಷ್ಟವಾಗುತ್ತದೆ. ದಿನೇ ದಿನೇ ನಿರುದ್ಯೋಗ ಹೆಚ್ಚಾಗುತ್ತಿರುವುದರ ಜೊತೆಗೆ ಜನ ಸಂಖ್ಯೆಯೂ ಜಾಸ್ತಿಯಾಗುತ್ತಿರುವ ಪರಿಸ್ಥಿತಿಯನ್ನು ನೋಡಿದರೆ, ದಿನೇ ದಿನೇ ಆಹಾರ ಕೊರತೆಯೂ ಜಾಸ್ತಿಯಾಗುತ್ತದೆ. ಇದನ್ನು ನೀಗಬೇಕಾದರೆ ಆದಷ್ಟು ಹೆಚ್ಚು ಜನರು ಕೃಷಿಮಾಡಬೇಕು. ಹಳ್ಳಿಗಳಲ್ಲಿರುವವರೂ ಪೇಟೆಗಳಿಗೆ ಬಂದು ಕುಳಿತು ಮನೆ ಮಾಡಿಕೊಂಡು ವಾಸಮಾಡುತ್ತಿದ್ದಾರೆ. ಹಳ್ಳಿಗಳನ್ನು ಮುಂದೆ ತರುವವರು ಯಾರು? ಆದಕಾರಣ ವಿದ್ಯಾಭ್ಯಾಸದ ರೀತಿಯನ್ನು ಬದಲಾಯಿಸಿದರೆ ಅನುಕೂಲವಾಗುತ್ತದೆಯೇ ವಿನಾ ಇಲ್ಲದಿದ್ದರೆ ಸಾಧ್ಯವಿಲ್ಲ. ವಿದ್ಯಾಭ್ಯಾಸವನ್ನು ಜಾಸ್ತಿಮಾಡಿ, ಕಾಲೇಜುಗಳನ್ನು ಹೆಚ್ಚಿಸಿದರೆ ಕೆಲಸಗಳನ್ನೊದಗಿಸಲು ಸಾಧ್ಯವಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಈಗ ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೆ, ಈಗ Resources and Economy ಕಮಿಟಿಯ ವರದಿಯ ಮೇಲೆ ಚರ್ಚೆಯಲ್ಲಿ ಅನೇಕ ಸದಸ್ಯರು ಭಾಗವಹಿಸಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಮಿತಿಯನ್ನು ರಚನೆ ಮಾಡುವ ಕಾಲದಲ್ಲಿ ಸರ್ಕಾರದ ಉದ್ದೇಶವೇನೆಂದರೆ, ಮೂರನೆಯ ಪಂಚವಾರ್ಷಿಕ ಯೋಜನೆಗೆ ಅಗತ್ಯವಾದ ಹಣದಲ್ಲಿ 43 ಕೋಟಿ ರೂಪಾಯಿಗಳ ಕೊರತೆಯಿರುವುದನ್ನು ಭರ್ತಿ ಮಾಡುವುದು, ಅಥವಾ ಕಡಮೆಯನ್ನು ಸರಿತೂಗಿಸುವುದು. ಇದಕ್ಕಾಗಿ ಮಿತವ್ಯಯ ಹಾಗೂ ಉತ್ಪತ್ತಿಯನ್ನು ಹೆಚ್ಚಿಸುವುದು, ಈ ಎರಡನ್ನೂ ಯಾವ ರೀತಿ ಮಾಡಬೇಕೆಂಬ ಬಗ್ಗೆ ಸಲಹೆ ಪಡೆಯಲು ಸರ್ಕಾರದವರು ಈ ಸಮಿತಿಯನ್ನು ರಚನೆ ಮಾಡಿದರು. ಈ ಸಮಿತಿಯವರು ಅನೇಕ ಸೂಕ್ತ ಸಲಹೆಗಳನ್ನು, ಬಹಳ ದೀರ್ಘವಾಗಿ ಚರ್ಚೆ ನಡೆಸಿ, ಸುಮಾರು 412 ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನು ಈಗ ನಮ್ಮ ಮುಂದಿಟ್ಟಿದ್ದಾರೆ.

ಈ ದಿವಸ ಅವರು ಇಟ್ಟಿರತಕ್ಕ ಸಲಹೆಗಳನ್ನು ಸರ್ಕಾರ ಎಷ್ಟರಮಟ್ಟಿಗೆ ಕಾರ್ಯಗತ ಮಾಡುತ್ತದೆಂಬುದನ್ನು ನಾವೆಲ್ಲರೂ ನೋಡಬೇಕಾಗಿದೆ. ಏಕೆಂದರೆ, ಈ ಶಿಫಾರಸ್ಸುಗಳನ್ನು ಕಾರ್ಯಗತ ಮಾಡುವುದು ಬಹಳ ಕಷ್ಟಸಾಧ್ಯವೆಂದು ಕಾಣುತ್ತದೆ; ಬಹಳ ಎಡರುತೊಡರುಗಳನ್ನು ಅನುಭವಿಸಬೇಕಾಗುತ್ತದೆ. ಹಾಗೂ ದಿಟ್ಟತನದಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಯಗತ ಮಾಡುವುದಾದರೆ ಇವು ನಿಜವಾಗಿಯೂ ಬಹಳ ಉಪಯುಕ್ತವಾದ ಸಲಹೆಗಳು. ಇಂಥ ಸಲಹೆಗಳನ್ನು ನಮ್ಮ ಮುಂದೆ ಇಟ್ಟಿರುವಂಥ ಕಮಿಟಿಯವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ.

ಇಷ್ಟು ಹೇಳಿ, ನಾನು ಸದ್ಯಕ್ಕೆ ಎಲ್ಲ ಇಲಾಖೆಗಳ ವಿಷಯವನ್ನೂ ಪ್ರಸ್ತಾಪಿಸಲಿಕ್ಕೆ ಹೋಗದೆ ಒಂದು ಇಲಾಖೆಯ ವಿಷಯವನ್ನು ಮಾತ್ರ ಮಾತನಾಡಲು ನನ್ನ ಕಾಲವನ್ನು ವಿನಿಯೋಗಿಸಬಯಸುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕ ಲೋಪ ದೋಷಗಳನ್ನು ಸುದೀರ್ಘವಾಗಿ ಇಲ್ಲಿ ಚರ್ಚೆಮಾಡಿದ್ದಾರೆ. ಅಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುವುದಾದರೆ ಪ್ರಾಯಶಃ ನಾವು ಖರ್ಚು ಮಾಡುತ್ತಿರತಕ್ಕ ಹಣದಲ್ಲಿ ಬಹಳ ಹೆಚ್ಚಿನ ಕೆಲಸ ಮಾಡಬಹುದು ಮತ್ತು ಮೂರನೆಯ ಪಂಚವಾರ್ಷಿಕಯೋಜನೆಯಲ್ಲಿ ಈ ಇಲಾಖೆಯಿಂದ ಖರ್ಚಾಗುವ ಹಣದಿಂದ ಪೂರ್ಣ ಪ್ರತಿಫಲ ಹೊಂದಬಹುದಲ್ಲದೆ ಖರ್ಚು ಮಾಡುವ ಹಣದಲ್ಲಿ ಶೇಕಡ 40 ಭಾಗ ಉಳಿಸಬಹುದು. ಮಾನ್ಯ ಮುಖ್ಯಮಂತ್ರಿಗಳು ಶರಾವತಿ ಪ್ರಾಜೆಕ್ಟಿನ ವಿಚಾರ ಮಾತನಾಡುತ್ತಾ ಹೇಳಿದರು 'ನಾವು Extra lead charges ಮಾತ್ರ ಕೊಟ್ಟಿದ್ದೇವೆ'' ಎಂದು. ಎಸ್ಟಿಮೇಟ್ ಮಾಡಿದಾಗಲೇ ಗೊತ್ತಿರಲಿಲ್ಲವೇ ಹಾಗೂ ಸ್ಪೆಸಿಫಿಕೇಷನ್ನಿನಲ್ಲಿಯೇ ತಿಳಿಸಿರಲಿಲ್ಲವೇ ಎಷ್ಟು ಹೆಚ್ಚಿಗೆ ದೂರದಿಂದ ಸಾಗಾಣಿಕೆ ಮಾಡಬೇಕಾದರೆ ಎಷ್ಟು ಹೆಚ್ಚಿಗೆ ದರ ಕೊಡಬೇಕು ಎಂದು. ಹೀಗಿರುವಲ್ಲಿ ಆರ್ಬಿಟ್ರೇಟರು ಹೇಳುವುದೇಕೆ? ಅವರು ಹೇಳಿದಂತೆ extravagant charges ಕೊಡುವುದೇಕೆ? ಎಸ್ಟಿಮೇಟಿನಲ್ಲಿ ಹೇಳುವುದಕ್ಕಿಂತ ಜಾಸ್ತಿ ಮಾಡಿದ್ದರೆ, ಷೆಡ್ಯೂಲ್ಡ್ ರೇಟಿನಂತೆ ಕೊಡಬಹುದಲ್ಲವೇ? ಮೂರು ಮೈಲಿ ದೂರವಿದ್ದರೆ ಷೆಡ್ಯೂಲ್ಡ್ ದರವೇನು. ಎಲ್ಲವೂ ಮುಂಚೆಯೇ ಗೊತ್ತಿದೆ. ಇದನ್ನು ಹೇಳುವುದಕ್ಕೆ ಆರ್ಬಿಟ್ರೇಟರೇ ಬೇಕಾಗಿಲ್ಲ. ಇನ್ನು ಈ ವಿಚಾರದಲ್ಲಿ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಸಾಧ್ಯವಿದ್ದರೆ detail ಆಗಿ ಈ ವಿಷಯವನ್ನು ಪ್ರಶ್ನೆ ಮಾಡಬಯಸುತ್ತೇನೆ. ಅದಕ್ಕಾಗಿ ಕಾಲಾವಕಾಶವನ್ನೂ ಕೇಳಿದ್ದೇನೆ. ಅದು ಬಂದಾಗ ಚರ್ಚೆ ಮಾಡುತ್ತೇನೆ. ಆದರೂ ಸದ್ಯಕ್ಕೆ ಈ ಇಲಾಖೆಯಲ್ಲಿ ನಡೆಯುತ್ತಿರತಕ್ಕ ಇಂಥ ಲೋಪಗಳನ್ನು ಸಭೆಯ ಗಮನಕ್ಕೆ ತರುವುದು ಅವಶ್ಯಕ. ಈ ಇಲಾಖೆಯಲ್ಲಿ ಸಾಮಾನ್ಯವಾಗಿ ಖರ್ಚು ಹೆಚ್ಚಾಗಲು ಕಾರಣವೇನೆಂದರೆ, ಮುಂಚೆ ಎಸ್ಟಿಮೇಟ್ ಮಾಡುವಾಗ ಇಲಾಖೆಯವರು ಸಾಕಷ್ಟು ಮುಂದಾಲೋಚನೆ ಮಾಡುವುದಿಲ್ಲ. ಈ ಎಸ್ಟಿಮೇಟುಗಳು ಅನೇಕ ಹಂತಗಳಲ್ಲಿ scrutiny ಆಗುತ್ತವೆ. Central Water Commission, High Power Committee ಮುಂತಾಗಿ ಅನೇಕ ಕಡೆ scrutiny ಯಾಗಿ ತಯಾರಾಗಿದ್ದರೂ, ಕೆಲಸ ಪ್ರಾರಂಭವಾದಮೇಲೆ ಎಸ್ಟಿಮೇಟುಗಳು ಬದಲಾವಣೆ ಹೊಂದುತ್ತಿರುವುದು ಸರ್ವೆಸಾಮಾನ್ಯವಾಗಿದೆ. ಇದರಿಂದಲೇ ಆಗುವ ಅನ್ಯಾಯವೆಲ್ಲಾ. ಅಲ್ಲಿರತಕ್ಕ ಅಧಿಕಾರಿಗಳ ಕೈವಾಡ ಹಾಗೂ ಮುಖಂಡರ ಕೈವಾಡ ಎಲ್ಲಾ ಈ ಕಾಲದಲ್ಲೇ ನಡೆಯತಕ್ಕದ್ದು. ಅಂದಾಜೆಲ್ಲಾ scrutiny ಯಾದಮೇಲೆ, Plan ಎಲ್ಲಾ approve ಆದಮೇಲೆ ಈ ರಿತೀಯ ಬದಲಾವಣೆ ಮಾಡುವ ಅವಶ್ಯಕತೆಯೇನೋ ನನಗೆ ಗೊತ್ತಾಗುವುದಿಲ್ಲ. ಎಷ್ಟೋ ವೇಳೆ ಅಧಿಕಾರಿಗಳು ಕಂಟ್ರಾಕ್ಟ್‌ದಾರರಿಗೆ ಕೊಟ್ಟಿರತಕ್ಕ ರೇಟನ್ನು ಬದಲಾವಣೆ ಮಾಡುವ ಹೆಚ್ಚಿನ ಉದ್ದೇಶದಿಂದಲೇ ಸ್ಪೆಸಿಫಿಕೇಷನ್ ಮತ್ತು ಡಿಸೈನ್‌ಗಳನ್ನು ಬದಲಾವಣೆ ಮಾಡುವ ಪ್ರಯತ್ನ ಮಾಡುತ್ತಾರೆ. ಇದರಿಂದ ಆಗತಕ್ಕ loss ಬಹಳ ಹೆಚ್ಚು. ಸರ್ಕಾರದವರು ಈ ಮಟ್ಟದಲ್ಲಿ ಅನ್ಯಾಯವಾಗುತ್ತಿಲ್ಲವೆಂದು ಎದೆ ಮುಟ್ಟಿ ಹೇಳಲಿ ನೋಡೋಣ! ಈಗಲೂ ಮೇಜರ್ ಇರಿಗೇಷನ್ ಕೆಲಸಗಳ ಸಂಬಂಧದಲ್ಲಿ ಅಂದಾಜು ಮಾಡಿದ್ದನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ಬದಲಾವಣೆ ಮಾಡುತ್ತಿರುವುದನ್ನು ತನಿಖೆ ಮಾಡಲು ಒಂದು ಕಮಿಟಿಯನ್ನು ರಚಿಸಿ ಅವರು ಕೊಡುವ ವರದಿಯನ್ನು ನಮ್ಮ ಮುಂದಿಡಲಿ ನೋಡೋಣ. ಶರಾವತಿಯ ವಿಚಾರದಲ್ಲಿ ಚೀಫ್ ಮಿನಿಸ್ಟರನ್ನು ಹೀಗೆ ಕೇಳಿದ್ದಕ್ಕೆ, 'ಕೊಡಬೇಕಾಗಿತ್ತು, ಕೊಟ್ಟಿದ್ದೇನೆ' ಎಂದು ಹೇಳಿಬಿಟ್ಟರು. ಹಾಗಲ್ಲ ಉತ್ತರ ಹೇಳುವುದು. ಸಾರ್ವಜನಿಕರ ದುಡ್ಡನ್ನು ವ್ಯವಸ್ಥಿತ ರೀತಿಯಲ್ಲಿ ಖರ್ಚು ಮಾಡದೆ ಮನಸ್ವಿ ಖರ್ಚು ಮಾಡುವುದೇ! ಒಬ್ಬಿಬ್ಬರು ಪ್ರಭಾವಯುತ ಕಂಟ್ರಾಕ್ಟ್‌ದಾರರು ಹಣ ತಿನ್ನುವುದಕ್ಕೆ ಅವಕಾಶ ಕೊಡುವುದೇ? ಕೆಲಸ ನಡೆಯುವ ಮಧ್ಯಕಾಲದಲ್ಲಿ ಡಿಸೈನ್ ಬದಲಾವಣೆ ಮಾಡುವುದಕ್ಕೆ ಎಡೆ ಕೊಡುವುದೇ ಇದಕ್ಕೆಲ್ಲಾ ಕಾರಣ. ಇದರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಇದಕ್ಕೆಂದಿಗೂ ಅವಕಾಶ ಕೊಡಕೂಡದು. ಇದರ ಪರಿಣಾಮ ಸಾರ್ವಜನಿಕರ ಮೇಲೆ ಆಗುತ್ತದೆಂದು ನಾನು ಹೇಳುತ್ತೇನೆ.

ಇದರ ಜೊತೆಗೆ ಇನ್ನೊಂದು ಕೆಲಸ ಈ ಇಲಾಖೆಯಲ್ಲಿ ನಡೆಯುತ್ತಿರುತ್ತದೆ. ಟೆಂಡರು ಕರೆದು ಟೆಂಡರನ್ನು accept ಮಾಡುತ್ತಾರೆ. Accept ಮಾಡಿದಮೇಲೆ, ಅದರ ದರವನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಾಗುವ ರೀತಿಯಲ್ಲಿ ಅಗ್ರಿಮೆಂಟ್ ಬರೆಸುತ್ತಾರೆ. ಆದ್ದರಿಂದ ಸರಿಯಾದ ಒಂದು ನಿರ್ದಿಷ್ಟ ರೀತಿಯಲ್ಲಿ ಅಗ್ರಿಮೆಂಟ್ ಬರೆಸುವ *Pro froma* ಹಾಕಿಕೊಡಬೇಕು. ಅಲ್ಲದೆ ಒಂದು ಸಾರಿ ಅಗ್ರಿಮೆಂಟ್ ಮಾಡಿಕೊಂಡಮೇಲೆ ಅದನ್ನು ಬದಲಾವಣೆ ಮಾಡುವುದೆಂದರೆ ಇದಕ್ಕೆ ಪರ್ಯವಸಾನವೇನು? ಅವರವರಿಗೆ ಅನುಕೂಲವಾಗುವ ರೀತಿಯಲ್ಲಿ ಅಗ್ರಿಮೆಂಟ್ ಬರೆಸಿಕೊಳ್ಳುವುದೆಂದರೆ ಅಗ್ರಿಮೆಂಟ್ ಏಕೆ? ಕೊಡಕೂಡದು. ಶರಾವತಿ ಪ್ರಾಜೆಕ್ಟಿನ ಸಂಬಂಧದಲ್ಲಿ ಬರೆಸಿದ ಅಗ್ರಿಮೆಂಟಿನ ರೀತಿ ಬೇರೆ ಎಲ್ಲಿಯೂ ಇಲ್ಲವೆಂದು ಹೇಳಿದ್ದಾರೆ. ಈ ರೀತಿಯ ಬದಲಾವಣೆ ಏಕೆ ಮಾಡಿದರು? ಹೀಗೆ ಅಧಿಕಾರಿಗಳು ಮನಸ್ವಿಯಾಗಿ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಅಗ್ರಿಮೆಂಟ್ ಬರೆಸಿಕೊಳ್ಳುವುದಕ್ಕೆ ಅವಕಾಶ ಕೊಡುವುದು ದೇಶದ ಬೊಕ್ಕಸಕ್ಕೆ ಹಾನಿಕರ. ದೇಶಾದ್ಯಂತವೂ ಒಂದು uniform agreement ಬರೆಸುವ ಯೋಚನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇದಲ್ಲದೆ ಈ ಇಲಾಖೆಯಲ್ಲಿ Non-tendered items ಗಳೆಂದು ಹೇಳಿ ಕೆಲವು ಬಾಬುಗಳನ್ನು ಅಗ್ರಿಮೆಂಟ್ ಬರೆಸುವಾಗ ಕೈಬಿಟ್ಟಿರುತ್ತಾರೆ. ಕೆಲಸ ಮಾಡುವ ಕಾಲದಲ್ಲಿ ಇಲಾಖೆಯವರು ತಮ್ಮ ಇಷ್ಟಾನುಸಾರ ಅವುಗಳಿಗೆ ರೇಟ್ ಕೊಡುತ್ತಾರೆ. ಎಷ್ಟು ಜನ ಕಾರ್ಮಿಕರ ನೇಮಕ ಮಾಡಿಕೊಳ್ಳುತ್ತಾರೋ ಆ ತಳಹದಿಯ ಇದನ್ನು ಕೊಡುತ್ತಾರೆ. ಈ ರೀತಿ ಇಲಾಖೆಯವರು ಮನಸ್ವಿ ಕೊಡುವುದನ್ನು ತಪ್ಪಿಸಬೇಕಾದರೆ ಈ Non-Tendered ಐಟಂಗಳನ್ನೂ ಅಗ್ರಿಮೆಂಟಿನಲ್ಲಿ ಸೇರಿಸಬೇಕು. ಇದನ್ನು ಮಾಡದೆ ಹೋದರೆ ಸರ್ಕಾರಕ್ಕೆ ಬಹಳ ಅನ್ಯಾಯವಾಗುತ್ತದೆಂದು ಸಮಿತಿಯವರು ಹೇಳಿದ್ದಾರೆ. ಇಲಾಖೆಯಲ್ಲಿ ಅನೇಕ ತರದ ಮೆಷಿನರಿಗಳಿರುತ್ತವೆ. ಲಾರಿಗಳನ್ನು ಟ್ರಾಕ್ಟರುಗಳನ್ನು ಅನೇಕವಾಗಿ ಇಟ್ಟುಕೊಂಡಿರುತ್ತಾರೆ. ಈ heavy machinery ಗಳನ್ನು ಬಾಡಿಗೆಯಮೇಲೆ ಕೊಟ್ಟಿರುತ್ತಾರೆ. ಅದಕ್ಕೆ ಸರಿಯಾದ charges ಹಾಕುವುದಿಲ್ಲ. ಕೊಟ್ಟಿರತಕ್ಕ ಕಾಲ, ಕೆಲಸ ಮಾಡಿದ ವೇಳೆಯನ್ನೇ ತೋರಿಸುವುದಿಲ್ಲ. ಇದರಿಂದಾಗಿ ಇಲಾಖೆಯಲ್ಲಿರತಕ್ಕ ಬರಬೇಕಾಗಿರತಕ್ಕ ಆದಾಯ ಸರ್ಕಾರಕ್ಕೆ ಬರುವುದಿಲ್ಲ. ಕಂಟ್ರಾಕ್ಟರುಗಳಿಗೆ ಮನಸ್ಸಿಗೆ ಬಂದಂತೆ ಕೊಟ್ಟು ಅಧಿಕಾರಿಗಳು ಸಂಪಾದನೆ ಮಾಡುತ್ತಿರುತ್ತಾರೆ.

ಅವುಗಳಿಗೆ ತಕ್ಕ ಬಂದೋಬಸ್ತನ್ನು ಮಾಡಬೇಕು. ಪ್ರತಿವರ್ಷದಲ್ಲೂ $\frac{2}{3}$ ಭಾಗವನ್ನು ಈ ಇಲಾಖೆಗೆ

(ಶ್ರೀ ಎಚ್. ಡಿ. ದೇವೇಗೌಡ)

ಖರ್ಚುಮಾಡುತ್ತಿದ್ದೀರಿ. ಶೇ. 40ರಷ್ಟು ಹಣ ವ್ಯಥಾ ಅನ್ಯಾಯವಾಗುತ್ತಿದೆ. ಇದರಲ್ಲಿ ಏನೂ ಅನುಮಾನವಿಲ್ಲ. ಈ ವಿಚಾರವನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ಈ ರೀತಿಯಾಗಿ ಈ ಇಲಾಖೆಯಲ್ಲಿ ಆಗುತ್ತಿರತಕ್ಕ ಅನ್ಯಾಯಗಳನ್ನು ತಡೆಗಟ್ಟದಿದ್ದರೆ ಜನತೆಗೆ ಏನು ಕಲ್ಯಾಣವಾಗುತ್ತದೆಯೆಂದು ಯೋಚನೆ ಮಾಡುತ್ತಿದ್ದೇವೋ ಅದು ಬರೀ ಖಾಲಿ ಯೋಚನೆ ಆಗುತ್ತದೆ. ನಾನು ಹೇಳಿದಹಾಗೆ ಮೇಜರ್ ಇರ್ರಿಗೇಷನ್‌ಗಳಲ್ಲಿ ಆಗತಕ್ಕ ಅನ್ಯಾಯಗಳನ್ನು ಕೂಡಲೇ ತಡೆಗಟ್ಟದೇ ಹೋದರೆ ಈ ಕೆಲಸಗಳಿಂದ ನಮಗೆ ಹಾನಿಯೇ ಹೊರತು ಇದರಿಂದ ಒಳ್ಳೆಯದೇನೂ ಆಗುವುದಿಲ್ಲ. ಎಕರೆಗೆ 600 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೆಲವು ಜನರಿಂದ ಬರಬೇಕು ಎಂದು ಹೇಳುತ್ತೀರಿ, ಇತ್ತೀಚೆಗೆ ಒಂದು ಎಕರೆಗೆ 1,200-1,300 ರೂಪಾಯಿಗಳೆಂದು ಇರತಕ್ಕ ಅಂದಾಜುಗಳನ್ನು ಬದಲಾಯಿಸುವುದು. ರೇಟ್‌ಗಳನ್ನು ಸಿಕ್ಕಾ ಪಟ್ಟೆ ಕಂಟ್ರಾಕ್ಟ್‌ದಾರರನ್ನು ಉದ್ಧಾರ ಮಾಡುವ ಪರಿಣಾಮವಾಗಿ ಬೆಳೆಯತಕ್ಕ ರೈತನ ಮೇಲೆ ಹೆಚ್ಚಿಗೆ ಕಂದಾಯ ಹಾಕುವುದು. ಇಂಥಾದ್ದನ್ನೆಲ್ಲಾ ಸರ್ಕಾರದವರು ಸರಿಯಾದ ರೀತಿಯಲ್ಲಿ ತಡೆಗಟ್ಟಬೇಕು. ಇಲ್ಲದಿದ್ದರೆ ಬಹಳ ಅನ್ಯಾಯವಾಗುತ್ತದೆ. ಇದು ಪ್ಲಾನಿಂಗ್ ತಳಹದಿಯ ಮೇಲೆ ಎಫೆಕ್ಟ್ ಆಗುತ್ತದೆ. ಯಾರೋ ಒಬ್ಬಿಬ್ಬರನ್ನು ಬದುಕಿಸುವುದಕ್ಕೋಸ್ಕರ ಅವಕಾಶವನ್ನು ಸರ್ಕಾರದವರು ಕಲ್ಪಿಸಿ ಕೊಡಕೂಡದು. ಇದರಿಂದ ಹತ್ತು ಜನಗಳಿಗೆ ಅನುಕೂಲವಾಗುವ ಕೆಲಸವಾದಂತಾಗುವುದಿಲ್ಲ. ಈಗ ಅನೇಕರು ಕೆಲವು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈಗಿರತಕ್ಕ ಎಸ್ಟಾಬ್ಲಿಷಮೆಂಟ್‌ನ್ನು ಆದಷ್ಟು ಮಟ್ಟಿಗೆ ಪಿ.ಡಬ್ಲ್ಯೂಡಿ.ಯಲ್ಲಿ ರೆಡ್ಯೂಸ್ ಮಾಡಬೇಕು. 30 ಜನ ಸೂಪರಿಂಟೆಂಡಿಂಗ್ ಇಂಜನಿಯರ್‍ಸ್ ಪಿ. ಡಬ್ಲ್ಯೂ.ಡಿ.ಯಲ್ಲಿ ಕೆಲಸ ಮಾಡುತ್ತಿದ್ದಾರೆಂಬುದಾಗಿ ಅಂಕಿಅಂಶವನ್ನು ಕೊಟ್ಟಿದ್ದಾರೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಆದರಲ್ಲೂ ನಾನು ಹತ್ತು ವರ್ಷಗಳು ಕಂಟ್ರಾಕ್ಟ್‌ದಾರನಾಗಿ ಕೆಲಸ ಮಾಡಿದ ಅನುಭವವಿರುವುದರಿಂದ, ಈ ಇಲಾಖೆಯ ಕೆಲಸಗಳೆಲ್ಲಾ ಬರೀ ಪೋಸ್ಟ್ ಆಫೀಸ್ ಲೆಖ್ಖಾಚಾರದಂತಿದೆ. ಎಕ್ಸಿಕ್ಯುಟಿವ್ ಇಂಜಿನಿಯರ್ ಜಿಲ್ಲಾ ಮಟದಲ್ಲಿಯೂ, ಚೀಫ್ ಇಂಜಿನಿಯರ್ ಸ್ಟೇಟ್ ಮಟ್ಟದಲ್ಲಿಯೂ ಕೆಲಸ ಮಾಡುತ್ತಾರೆ. ಸೂಪರಿಂಟೆಂಡಿಂಗ್ ಇಂಜನಿಯರ್ ಕೆಲಸ ತಕ್ಕ ಮಟ್ಟದಲ್ಲಿ ಸೂಪರ್‌ವಿಷನ್ ಕೆಲಸ. ಎಕ್ಸಿಕ್ಯುಟಿವ್ ಇಂಜನಿಯರಿಗೆ ಇರುವ ಪವರ್‍ಸ್ ಕೇವಲ ಮೂರು ಲಕ್ಷ ರೂಪಾಯಿಗಳ ವರೆಗೆ. ಆದ್ದರಿಂದ ಈ ಸೂಪರಿಂಟೆಂಡಿಂಗ್ ಇಂಜನಿಯರುಗಳ ಹುದ್ದೆಗಳನ್ನು ರದ್ದುಮಾಡಬೇಕು. ಟೆಕ್ನಿಕಲ್ ಕಮಿಟಿಯವರ ಅಭಿಪ್ರಾಯದ ಪ್ರಕಾರ ಅವರು ಇರಲೇಬೇಕೆಂದು ಹೇಳಬಹುದು. ಆದರೆ ಅವು ಅನಾವಶ್ಯಕ. 30 ಜನ ಸೂಪರಿಂಟೆಂಡಿಗ್ ಇಂಜನಿಯರುಗಳ ಹುದ್ದೆ ಖಂಡಿತವಾಗಿ ಅನಾವಶ್ಯಕ. ಅವನ್ನು ರದ್ದುಮಾಡಬೇಕೆಂದು ಈ ಕಮಿಟಿಯವರು ಸೂಚಿಸಿದ್ದಾರೆ. ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಮುಖ್ಯವಾಗಿ ಈ ರೀತಿ ಪೋಸ್ಟ್ ಆಫೀಸ್ ಬಿಸಿನೆಸ್ ಇರತಕ್ಕ ಆಫೀಸುಗಳನ್ನು ಇಟ್ಟುಕೊಂಡು ನಾವು ಯಾವ ಒಂದು ಒಳ್ಳೆಯ ಉದ್ದೇಶವನ್ನೂ ಸಾಧಿಸುವುದಕ್ಕಾಗುವುದಿಲ್ಲ. ಸುಮ್ಮನೆ ಅನಾವಶ್ಯಕವಾದ ಖರ್ಚು. ಅಷ್ಟೇ. ಹೇಗಾದರೂ ಆಗಲಿ ಈಗಿರತಕ್ಕ 30 ಜನರ ಪೈಕಿ ಕೊನೆಯಪಕ್ಷ 15 ಜನರ ಹುದ್ದೆಗಳನ್ನಾದರೂ ಅಬಾಲಿಷ್ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ರೀತಿ ಅವರು ಕೊಟ್ಟಿರತಕ್ಕ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಇಲಾಖೆಯ ಬಗ್ಗೆ ಹೇಳುವುದಾದರೆ ಸಾಯಿಲ್‌ಕನ್‌ಸರ್‌ವೇಷನ್ ವಿಷಯದಲ್ಲಿ ಒಂದೆರಡು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಖರ್ಚುಮಾಡಿರತಕ್ಕ ಹಣ ಶಾಸ್ತ್ರೀಯವಾಗಿ ಒಂದು ವಿತರಣೆಯಿಂದ ಖರ್ಚಾಗಿಲ್ಲವೆಂದು ಪುಟದಲ್ಲಿ ವಿವರವಾಗಿ ಹೇಳಿದ್ದಾರೆ. ಹಣ ಬಹಳ 178ನೇ ದುರ್ವಯವಾಗುತ್ತಿದೆ. ಈ ರೀತಿ ಖರ್ಚು ಮಾಡಿ ರೈತನಿಗೆ ಕೊಟ್ಟಿರತಕ್ಕ ಸಾಲವನ್ನು ಹಿಂದಕ್ಕೆ ಪಡೆಯಬೇಕಾದರೆ ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ. ಅದರಿಂದೇನು ಉಪಯೋಗವಿಲ್ಲವೆಂದು ಚರ್ಚೆ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಸೀಡ್‌ಫಾರ್ಮಿಂಗ್‌ಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ನೀರಿನ ವ್ಯವಸ್ಥೆ ಇಲ್ಲದಿರುವ ಕಡೆ ಸೀಡ್‌ಫಾರ್ಮಿಂಗ್‌ಗಳಿಂದ ಸರಿಯಾದ ಒಳ್ಳೆಯ ಫಲ ದೊರಕುತ್ತಾ ಇಲ್ಲ. ಆದ್ದರಿಂದ ಅವುಗಳನ್ನು ಮುಚ್ಚಿದರೆ ವಾಸಿ ಎಂದು ಈ ಸಮಿತಿಯವರು ಹೇಳಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಆಸ್ಪತ್ರೆ ಇರುವ ಕಡೆ 60 ಸಾವಿರ ಎಕರೆ ಜಮೀನಿನ ಪೈಕಿ ಆರು ಸಾವಿರ ಎಕರೆ ಜಮೀನನ್ನು ಕ್ಯಾಟಲ್‌ಗೋಸ್ಕರ ರಿಜರ್ವ್ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ಬರುವ ಉಪಯೋಗ ಏನೂ ಇಲ್ಲ. ಕೇವಲ ಕೆಲವು ಜನಗಳಿಗೆ ಯಾರಾದರೂ ಒಬ್ಬಿಬ್ಬರ ರಕ್ಷಣೆಯಲ್ಲಿರೋಣವೆಂದು, ಅದರಲ್ಲೂ ಕಾಂಗ್ರೆಸ್ ಪುಢಾರಿಗಳಿಗೇ ಅನುಕೂಲವಾಗಬೇಕೆಂಬ ಉದ್ದೇಶದಿಂದ ಇಂತಹ ಅವಕಾಶಗಳನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ, ನ್ಯಾಯವಲ್ಲ ಮತ್ತು ಸಾಧುವಾದುದೂ ಅಲ್ಲ. ಯಾರೋ ಒಬ್ಬಿಬ್ಬರ ಸ್ವಾರ್ಥಕ್ಕಾಗಿ ಈ ರೀತಿ ಮಾಡುವುದನ್ನು ಕೂಡಲೆ ಸ್ಟಾಪ್ ಮಾಡಬೇಕು. ಈ ರೀತಿ ತೆಗೆದರೆ ವ್ಯವಸಾಯೋತ್ಪತ್ತಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂಬುದಾಗಿ ನಾನು ಸಲಹೆ ಮಾಡುತ್ತೇನೆ. ಈ ಬಗ್ಗೆ ನನಗೆ ಸರ್ಕಾರದ ಮೇಲೆ ಪೂರ್ಣ ನಂಬಿಕೆಯೂ ಇದೆಯೆಂದು ನಾನು ಹೇಳುತ್ತೇನೆ.

ಇನ್ನು ನಾನು ಈ ಫಿಷರೀಸ್ ವಿಷಯದಲ್ಲಿ ಒಂದೇ ಒಂದು ಮಾತನ್ನು ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಇದರ ಇಲಾಖೆಬಗ್ಗೆ ಸರ್ಕಾರ ಪೂರ್ಣ ಗಮನ ಕೊಡಬೇಕು. ಇವು ವಿಶೇಷವಾಗಿ ಸೌತ್ ಕೆನರಾ ಮತ್ತು ಸೀಕೋಸ್ಟ್‌ನಲ್ಲಿರುತ್ತವೆ. 300-400 ಮೇಜರ್ ಕೆರೆಗಳಿರುವ ಕಡೆ ಕೇವಲ ಒಂದೆರಡು ಫಿಷರೀಸ್ ಇಲಾಖೆಗಳಿವೆ. ಇದಕ್ಕೆ ಒಬ್ಬ ಸೂಪರಿಂಟೆಂಡೆಂಟ್, ಇಬ್ಬರು ಗುಮಾಸ್ತರು ನಂತರ ಕೆಲವರು ಫಿಷರ್‌ಮೆನ್ ಹೀಗೆ ಎಸ್ಟಾಬ್ಲಿಷ್‌ಮೆಂಟ್ ಉಂಟು. ತಿಂಗಳಿಗೆ ಮೂರು ಸಾವಿರ ರೂಪಾಯಿಗಳು ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚಾಗುತ್ತದೆ. ಆದರೆ ಇದರಿಂದ ಬರತಕ್ಕ ರೆವಿನ್ಯೂ ಕೇವಲ 100-200 ರೂಪಾಯಿಗಳು. ಈ ಮಧ್ಯೆ ಇವರ ಐದರಷ್ಟು ಅಧಿಕಾರಿಗಳ ಕೈವಾಡ ಬೇರೆ. ಹೀಗೆ ದುರ್ವ್ಯವಹಾರ ಅನೇಕ ತಾಲ್ಲೂಕ್‌ಗಳಲ್ಲಿ ನಡೆಯುತ್ತಿದೆ. ಹೆಚ್ಚು ಖರ್ಚುಮಾಡಿ ಆದಾಯ ಕಡಮೆ ಕೊಡತಕ್ಕ ತಾಲ್ಲೂಕ್‌ಗಳಲ್ಲಿ ಈ ಫಿಷರೀಸ್ ಇಲಾಖೆಗಳನ್ನು ಮೊದಲು ರದ್ದುಮಾಡಬೇಕು. ಎಲ್ಲಿ ಅವಶ್ಯಕತೆ ಇದೆಯೋ, ಎಲ್ಲಿ ಇದರಿಂದ ಉಪಯೋಗ ದೊರೆಯುತ್ತದೋ ಅಂತಹ ಕಡೆಗಳಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರದವರು ಕೊಡುವುದು

ಬಹಳ ಸೂಕ್ತ. ಮುಖ್ಯವಾಗಿ ಸೀಕೋಸ್ಟ್‌ನಲ್ಲಿ ಮತ್ತು ಸೌತ್ ಕೆನರಾದಲ್ಲಿ ಇದರ ಉಪಯೋಗ ಹೆಚ್ಚಾಗಿದೆ. ಅಂತಹ ಕಡೆಗಳಲ್ಲಿ ಮಾತ್ರ ಈ ಇಲಾಖೆಗಳನ್ನು ಇಟ್ಟುಕೊಂಡು ಬಾಕಿ ಕಡೆಗಳಲ್ಲಿರುವುದನ್ನು ರದ್ದುಮಾಡುವುದು ಒಳ್ಳೆಯದೆಂದು ಅಧ್ಯಕ್ಷರ ಮೂಲಕ ಸರ್ಕಾರದವರಿಗೆ ನಾನು ಸಲಹೆ ಮಾಡುತ್ತೇನೆ.

ಇನ್ನು ಲ್ಯಾಂಡ್ ರೆವಿನ್ಯೂ ಮೇಲೆ ಶೇಕಡ 50 ಭಾಗವನ್ನು ಸರ್‌ಚಾರ್ಜು ರೂಪವಾಗಿ ತೆರಿಗೆ ಹಾಕಬೇಕೆಂದು ಇದರಲ್ಲಿ ಹೇಳಿದ್ದಾರೆ. ಇದನ್ನು ನಾನು ವಿರೋಧ ಮಾಡುತ್ತೇನೆ. ಶ್ರೀಮಾನ್ ರಾಮಪ್ಪನವರು ಆ ಬಗ್ಗೆ ಡಿಸೆಂಟಿಂಗ್ ನೋಟನ್ನು ಸಹ ಕೊಟ್ಟಿದ್ದಾರೆ. 50 ರೂಪಾಯಿಗಳ ಮಿನಿಮಂ ಕಂದಾಯಕ್ಕೆ ಮೇಲ್ಪಟ್ಟು ಕೊಡುವವರಿಗೆ ಈ ಸರ್‌ಚಾರ್ಜ್ ಫೀಯನ್ನು ಮುಂದುವರಿಸಿ. ಅದಕ್ಕೊಳಗೆ ಒಳಪಟ್ಟಿರುವವರಿಗೆ ಈ ಸರ್‌ಚಾರ್ಜನ್ನು ವಿಧಿಸುವುದರಿಂದ ತುಂಬಾ ತೊಂದರೆಯಾಗುತ್ತದೆ. ಬಡ ರೈತರಿಗಂತೂ ವಿಪರೀತ ಕಷ್ಟವಾಗುತ್ತದೆ. ಒಟ್ಟಿನಲ್ಲಿ ಈ ಸರ್‌ಚಾರ್ಜನ್ನು 50 ರೂಪಾಯಿಗಳ ಮೇಲ್ಪಟ್ಟು ಕಂದಾಯ ಕೊಡುವವರ ಮೇಲೆ ಮಾತ್ರ ವಿಧಿಸುವುದು ಒಳ್ಳೆಯದು ಎಂಬುದಾಗಿ ನಾನು ಪ್ರಾರ್ಥಿಸುತ್ತೇನೆ.

ನನಗೆ ಈ ಕಮಿಟಿಯ ವರದಿಯ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸನ್ಮಾನ್ಯ ಅಧ್ಯಕ್ಷರೇ, ಇಂದು ನಮ್ಮ ಮುಂದಿರತಕ್ಕ ರಾಮಚಂದ್ರರಾಯರ ಮೂಲೋತ್ಪಾದನೆ ಮತ್ತು ಮಿತವ್ಯಯ ಸಮಿತಿ ವರದಿಯನ್ನು ನಾವು ಚರ್ಚೆಮಾಡುತ್ತಿದ್ದೇವೆ. ಇದರ ವಿಚಾರವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಒಳ್ಳೆಯ ಸೂಕ್ತವಾದ ಸಲಹೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಈಗಿನ ಈ ವರದಿಯ ಹಾಗೆ ಹಿಂದೆ ನಾಲ್ಕಾರು ವರದಿಗಳು ಸರ್ಕಾರದ ಮುಂದೆ ಬಂದಿದ್ದವು. ಈ ಸಭೆಯಲ್ಲಿಯೇ ಅವು ಸಾಕಾದಷ್ಟು ಚರ್ಚೆಯಾಗಿ ಅವುಗಳು ಏನಾಗಿವೆ ಎಂಬ ಅಂಶ ಸ್ವಲ್ಪವೂ ತಿಳಿಯ ಬರಲಿಲ್ಲ. ಈಗ ಮೂರನೇ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಲು ಸಾಕಾದಷ್ಟು ಹಣವನ್ನು ತೆರಿಗೆ ರೂಪದಲ್ಲಿ ಪಡೆಯಬೇಕು, ಅದಕ್ಕಾಗಿ ಸರ್ಕಾರದ ಖರ್ಚನ್ನು ಮಿತವ್ಯಯ ಮಾಡಬೇಕೆಂದು ಹೇಳಿ, ಆ ಒಂದು ಘನೋದ್ದೇಶದಿಂದ ಈ ವರದಿ ನಮ್ಮ ಮುಂದೆ ಬಂದಿದೆ. ನಮ್ಮ ಅರ್ಥಿಕ ಸಚಿವರು ಮುಂದೆ ಈ ಮೂರನೇ ಪಂಚವಾರ್ಷಿಕ ಯೋಜನೆಯ ಕೆಲಸ ಕಾರ್ಯಗಳಿಗಾಗಿ ಸಾಕಾದಷ್ಟು ಹಣಬೇಕೆಂದು ಈಗ ನಾಲ್ಕಾರು ಕಂದಾಯದ ಮಸೂದೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸಂತೋಷ. ಈ ರೀತಿ ಸರ್ಕಾರ ಇಟ್ಟಿದೆ. ಆ ಪ್ರಕಾರ ಕಂದಾಯ ಕೊಡುವುದೂ ಉಂಟು, ಸರಿ. ಆದರೆ ಈಗ ದೇಶದ ಜನಗಳ ಮುಂದೆ ಈ ತೆರಿಗೆಗಳನ್ನು ಇಡುತ್ತಿದ್ದೀರಿ. ಈ ವಿಧವಾದ ವರದಿಯನ್ನು ಬಹಳ ಆತುರದಿಂದ ನೋಡುತ್ತಿದ್ದೀರಿ, ಇನ್ನೂ ಅದರ ಮೇಲೆ ಏನೊಂದು ಕ್ರಮವನ್ನು ತೆಗೆದುಕೊಳ್ಳಬೇಕಾದರೂ ಬಹಳ ಆತುರರಾಗಿದ್ದೀರಿ ಎಂಬುದು ಇದರಿಂದಲೇ ಸ್ಪಷ್ಟವಾಗಿ ಕಾಣುತ್ತದೆ. ಕೇವಲ ನೀವು ಜನಗಳ ಮೇಲೆ ತೆರಿಗೆಗಳನ್ನ ಮಾತ್ರ ಹಾಕುವುದಕ್ಕೆ ಆತುರರಾಗಿದ್ದೀರೇ ಹೊರತು ಮತ್ತು ಆ ಬಗ್ಗೆ ಸರ್ಕಾರದ ಆದಾಯವನ್ನು ಹೆಚ್ಚಿಗೆ ಮಾಡಬೇಕೆಂದು ಹೊರಟಿದ್ದೀರೆ ಹೊರತು ಮಿತವ್ಯಯದ ಕಡೆ ಸರ್ಕಾರದವರು ಸಾಕದಷ್ಟು ಗಮನ ಕೊಟ್ಟಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗಲಾರದು ಎಂಬುದಾಗಿ ನನ್ನ ಅಭಿಪ್ರಾಯವಾಗಿದೆ.

ಅದರಲ್ಲೂ ಇವೊತ್ತಿನ ದಿವಸ ಪ್ರೊಹಿಬಿಷನ್ ವಿಷಯದಲ್ಲಿ ನಮ್ಮ ಸ್ನೇಹಿತರನೇಕರು ಹೇಳಿದರು. ಈ ಪ್ರೊಹಿಬಿಷನ್‌ನಿಂದ ದೇಶಕ್ಕೆ ಒಂದು ಹಾನಿಯುಂಟಾಗಿದೆ. ಹೀಗೆಯೇ ಇವರು ಮಾಡಿಕೊಂಡು ಹೋದರೆ ಜನತೆಯ ಮೇಲೆ ಇನ್ನೂ ಹೆಚ್ಚಿನ ತೆರಿಗೆಯನ್ನು ಹಾಕುತ್ತಾರೆ. ಇದರಿಂದ ಆಡಳಿತ ಪಕ್ಷಕ್ಕೆ ಒಳ್ಳೆಯ ಗೌರವ ಬರುತ್ತದೆ ಎಂದು ಹೇಳುವ ಹಾಗಿಲ್ಲ. ಸರ್ಕಾರದವರು ನೇಮಕ ಮಾಡಿದ್ದ ಪಾನನಿರೋಧ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದು ಸರ್ಕಾರದ ಮುಂದೆ ಇದೆ. ಅದನ್ನು ಕಾರ್ಯಗತಮಾಡಿಲ್ಲ. ನಾನು ಆ ಸಮಿತಿಯ ವರದಿಯನ್ನು ತಿಳಿದುಕೊಂಡಿರುವಮಟ್ಟಿಗೆ ಪಾನನಿರೋಧ ಪೂರ್ಣವಾಗಿ ಫಲಕಾರಿಯಾಗಿಲ್ಲ. ಅದರಿಂದ ಜನಗಳ ಆರೋಗ್ಯ ಕೆಡುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರನೇಕರೂ ಆ ವಿಷಯವನ್ನು ಹೇಳಿದ್ದಾರೆ. ಅದರಿಂದ ಅನೇಕ ಜನಗಳು ತಮ್ಮ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಯಾವ ಒಂದು ಕಾರ್ಯದಿಂದ ನಮ್ಮ ಜನತೆಗೆ ಪ್ರಯೋಜನ ಆಗಬೇಕೋ ಅದು ಆಗದೆ ಹೋದರೆ ಅದನ್ನು ಯೋಚನೆಮಾಡಿ ಅದನ್ನು ಸರಿಯಾದ ರೀತಿಯಲ್ಲಿ ಏತಕ್ಕೆ ತರಬಾರದು ಎಂದು ನಾನು ಹೇಳುವವನಾಗಿದ್ದೇನೆ. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಸೇಲ್ಸ್‌ಟ್ಯಾಕ್ಸ್ ಏನು ಹಾಕಿದ್ದಾರೆಯೋ ಅದರಲ್ಲಿರತಕ್ಕ ಲೀಕೇಜನ್ನು ಭದ್ರಮಾಡಿ ಸರಿಯಾದ ರೀತಿಯಲ್ಲಿ ನೋಡಿಕೊಂಡರೆ ಬಹುಶಃ ಕೋಟ್ಯಾಂತರ ರೂಪಾಯಿಗಳ ಹೆಚ್ಚಿನ ವರಮಾನ ಬರುವ ಅವಕಾಶವಿದೆ. ಈ ವಿಷಯವನ್ನು ಸಮಿತಿಯವರೂ ಸಹ ಹೇಳಿದ್ದಾರೆ. ಈ ವಿಷಯ ಎಲ್ಲರಿಗೂ ಗೊತ್ತಿದೆ.

ರೋಡ್ ಟ್ರಾನ್ಸ್‌ಪೋರ್ಟ್ ವಿಷಯ ಎಲ್ಲರ ಬಾಯಲ್ಲಿಯೂ ಬರುತ್ತಿದೆ. ಎಲ್ಲರೂ ಆ ವಿಷಯವನ್ನು ಮಾತನಾಡುತ್ತಿದ್ದಾರೆ. ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಕಾರ್ಪೊರೇಷನ್ ಆಗಿರುವುದರಿಂದ ಈ ಸಮಿತಿಯವರು ಆ ವಿಷಯದಲ್ಲಿ ಸಾಕಷ್ಟು ಪ್ರಸ್ತಾಪಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅದರಿಂದ ಸಾಕಷ್ಟು ಉತ್ಪತ್ತಿಯನ್ನು ಮಾಡುವುದಕ್ಕೆ ಏನೂ ತೊಂದರೆಯಿಲ್ಲ. ಚೆನ್ನಾಗಿ ಕೆಲಸಮಾಡತಕ್ಕ ಮತ್ತು ಉತ್ಸಾಹಶಾಲಿಗಳಾದವರನ್ನು ಅಲ್ಲಿಗೆ ಕಳುಹಿಸಿದರೂ ಕೂಡ ಏತಕ್ಕೆ ಅಲ್ಲಿ ಈ ರೀತಿ ಅನ್ಯಾಯಗಳು ನಡೆಯುತ್ತವೆಂದು ಒಂದೊಂದು ಸಾರಿ ಮನಸ್ಸಿಗೆ ನೋವಾಗುತ್ತದೆ.

ಇವೊತ್ತು ದೇಶದಲ್ಲಿ ಕೈಗಾರಿಕೆಗಳು ಬಹಳ ಎದ್ದು ಕಾಣುತ್ತವೆ. ಇವೊತ್ತು ನಮ್ಮ ದೇಶದಲ್ಲಿ ಖಾಸಗೀಯವರು ಕೈಗಾರಿಕೆಗಳನ್ನು ನಡೆಸಿ ಕೋಟ್ಯಾಂತರ ರೂಪಾಯಿಗಳನ್ನು ಉತ್ಪಾದನೆ ಮಾಡಿ 30, 40 ಪರ್ಸೆಂಟ್ ಡಿವಿಡೆಂಡ್ ಕೊಡುತ್ತಾರೆ. ಅವರು ಉತ್ತಮವಾದ ಪದಾರ್ಥಗಳನ್ನೂ ತಯಾರಿಸುತ್ತಾರೆ. ಅವು ಪ್ರಪಂಚದ ಎಲ್ಲಾ ಭಾಗಗಳಿಗೂ ಹೋಗುತ್ತವೆ. ನಮ್ಮ ಸರ್ಕಾರದ ವತಿಯಿಂದ ನಡೆಸತಕ್ಕ ಕೈಗಾರಿಕೆಗಳಲ್ಲಿ ಉತ್ಪಾದನೆ ಸಾಕಷ್ಟು ರೀತಿಯಲ್ಲಿ ಆಗುತ್ತಿಲ್ಲ. ಆದರೆ ಹಾಸನದಲ್ಲಿರುವ ಇಂಪ್ಲಿಮೆಂಟ್ ಫ್ಯಾಕ್ಟರಿ ಮತ್ತು ಬೆಂಗಳೂರಿನಲ್ಲಿರುವ ಪೋರ್ಸಿಲೈನ್ ಫ್ಯಾಕ್ಟರಿ ಇವುಗಳು ಸ್ವಲ್ಪಮಟ್ಟಿಗೆ ಸುಧಾರಿಸುತ್ತಿವೆ. ಕೈಗಾರಿಕೆಗಳನ್ನು

(ಶ್ರೀ ಕೆ. ವಿ. ಬೈರೇಗೌಡ)

ಉತ್ತಮವಾಗಿ ಸರಿಯಾದ ರೀತಿಯಲ್ಲಿ ನಡೆಸಿದರೆ ಅವುಗಳಿಂದ ಹೆಚ್ಚಿನ ಹಣವನ್ನು ಸಂಪಾದನೆ ಮಾಡುವುದಕ್ಕೆ ಅವಕಾಶವಿದೆ. ಈ ವಿಷಯವನ್ನೂ ಸಹ ಸಮಿತಿಯವರು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ ಏನೇನು ನ್ಯೂನತೆಗಳಿವೆಯೋ ಅವುಗಳಿಗೆ ಕೈಹಾಕಿ ಧೈರ್ಯವಾಗಿ ಅವುಗಳನ್ನು ಸರಿಪಡಿಸುವುದಕ್ಕೆ ಯೋಚನೆ ಮಾಡಬೇಕು. ಪ್ರಜಾಪ್ರಭುತ್ವದ ಆಡಳಿತದಲ್ಲಿ ಎಲ್ಲಿ ತಪ್ಪುಗಳು ಕಾಣುತ್ತವೆಯೋ ಅವುಗಳನ್ನು ನಿರ್ವಂಚನೆಯಿಂದ ಸರಿಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈಗ ನಮಗೆ ಹಣದ ಕೊರತೆ ಏನಿದೆ ಮತ್ತು ಈಗ ತೆರಿಗೆಗಳನ್ನು ಹಾಕುವುದಕ್ಕೆ ಯಾವ ವರದಿಗಳು ಸಿದ್ಧವಾಗಿವೆಯೋ ಅವುಗಳಿಂದ ಬರತಕ್ಕ ಸುಮಾರು ಅರ್ಧದಷ್ಟು ತೆರಿಗೆಯ ಹಣವನ್ನು ಈ ಕೈಗಾರಿಕೆಗಳಿಂದ ಸಂಪಾದನೆ ಮಾಡುವುದಕ್ಕೆ ಅವಕಾಶವಿದೆ.

ಕಮ್ಯೂನಿಟಿ ಡೆವಲಪ್‌ಮೆಂಟ್ ವಿಷಯದಲ್ಲಿ ನಾಲ್ಕಾರು ಸಲಹೆಗಳನ್ನು ಹೇಳಿದ್ದಾರೆ. ಇವುಗಳಲ್ಲಿ ನಮ್ಮ ಕಣ್ಣಿಗೆ ಕಾಣುವುದು ಏನೆಂದರೆ ಸ್ಕೂಲು, ಕಟ್ಟಡ, ಬಾವಿ ಮತ್ತು ರಸ್ತೆಗಳು. ಇದರ ಮೂಲ ಉದ್ದೇಶ ಏನಿದೆಯೋ ಅದು ಆಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ವಿಲೇಜ್ ಲೆವೆಲ್ ವರ್ಕರ್ಸ್‌ಗೆ ಕೆಲಸವನ್ನು ಕೊಡುವ ಮುಖೇನ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ನಿವಾರಿಸಿದೆ. ಈ ಯೋಜನೆಗಳ ವಿಷಯದಲ್ಲಿ ಎಷ್ಟು ತಮ್ಮ ಒಂದು ಶಕ್ತಿಯನ್ನು ಕೊಡಬೇಕೋ, ಎಷ್ಟು ಕೆಲಸಗಳನ್ನು ಮಾಡಬೇಕೋ ಅದನ್ನು ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆಡಳಿತದಲ್ಲಿರತಕ್ಕ ಲೋಪದೋಷಗಳನ್ನೂ ನ್ಯೂನತೆಗಳನ್ನೂ ಹೋಗಲಾಡಿಸುವುದಕ್ಕೆ ಯೋಚನೆ ಮಾಡಬೇಕು, ಎಂದೂ ಈ ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈ ವಿಷಯದ ಕಡೆ ಸರ್ಕಾರದವರು ಗಮನ ಕೊಡಬೇಕು.

ವ್ಯವಸಾಯ ಇಲಾಖೆಯ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕೆಂದು ಎಲ್ಲರೂ ಹೇಳುತ್ತಾರೆ. ನಮ್ಮ ದೇಶದಲ್ಲಿ ಹೆಚ್ಚು ಆಹಾರ ಉತ್ಪತ್ತಿ ಆಗಬೇಕು. ದೇಶದಲ್ಲಿ ಯಾವ ಒಂದು ಕ್ಷೇತ್ರವನ್ನು ಸುಧಾರಿಸಬೇಕಾದರೂ ವ್ಯವಸಾಯದ ಬಾಬು ಮುಖ್ಯ ತಳಹದಿಯಾಗಿ ಕೆಲಸಮಾಡಬೇಕೆಂದು ಇದರಲ್ಲಿ ನಾಲ್ಕಾರು ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಷಯವನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈ ಬಾಬಿಗೆ ಹೆಚ್ಚಿಗೆ ಹಣವನ್ನು ಇಟ್ಟಿದ್ದರೂ ಸಹ ಅದು ಸರಿಯಾಗಿ ಖರ್ಚಾಗುತ್ತಿಲ್ಲ. ಇದರ ಬಗ್ಗೆ ಹಾಕಿಕೊಂಡಿರುವ ಯೋಜನೆಗಳು ಏನಿವೆ ಅವು ಪೂರ್ಣವಾಗಿ ಆಗದೆ ಹಾಗೆಯೇ ಇವೆ. ಸುಮಾರು 30-40 ಯೋಜನೆಗಳು ಹಾಗೆಯೇ ನಿಂತಿವೆ. ಇದರಲ್ಲಿ ಯಾವರೀತಿ ಕೆಲಸ ಕಾರ್ಯಗಳು ನಡೆಯಬೇಕೋ ಆ ರೀತಿ ನಡೆಯುತ್ತಿಲ್ಲ. ಇದನ್ನು ಹೆಚು ಉತ್ಸಾಹದಿಂದ ನೋಡಿಕೊಳ್ಳುತ್ತಾ ಇಲ್ಲ. ಈ ಇಲಾಖೆ ಕ್ಷೀಣವಾಗುತ್ತಾ ಇದೆ. ಆದ್ದರಿಂದ ಇದರ ಶಕ್ತಿಯನ್ನು ಬೆಳೆಸಬೇಕು. ಆದಷ್ಟು ಜಾಗ್ರತೆ ಜನಗಳಿಗೆ ಒಂದು ಶಕ್ತಿಯನ್ನು ಕೊಡಬೇಕು. ನಾವು ಎಷ್ಟೇ ಪ್ರಯತ್ನಪಟ್ಟರೂ ಕೂಡ ಈ ನಮ್ಮ ದೇಶ ಕೈಗಾರಿಕೆಯಲ್ಲಿ ಮುಂದುವರೆಯುವವರೆವಿಗೂ ಕೂಡ ವ್ಯವಸಾಯ ಕ್ಷೇತ್ರಕ್ಕೆ, ವ್ಯವಸಾಯದ ಉದ್ಯಮಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕಾಗಿದೆ. ನಮ್ಮ ದೇಶದಲ್ಲಿ ಕೈಗಾರಿಕೆ ಅಭಿವೃದ್ಧಿ ಆಗದಹೊರತು ನಮ್ಮ ದೇಶದ ಜನಗಳ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವುದಿಲ್ಲ. ಆದ್ದರಿಂದ ಹೆಚ್ಚು ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆಮೇಲೆ ವ್ಯವಸಾಯ ಕ್ಷೇತ್ರಕ್ಕೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅದನ್ನು ಕೊಡಬೇಕು. ಆ ವಿಷಯವನ್ನು ಈ ವರದಿಯಲ್ಲಿಯೂ ಸಹ ನಮೂದುಮಾಡಿದ್ದಾರೆ. ಮೊನ್ನೆ ಎಸ್ಟಿಮೇಟ್ ಕಮಿಟಿಯವರೂ ಕೂಡ ತಮ್ಮ ವರದಿಯಲ್ಲಿ ನಮ್ಮ ದೇಶದ ಆಡಳಿತದ ವಿಷಯದಲ್ಲಿ ಸಾಕಷ್ಟು ವಿಷಯಗಳನ್ನು ತಿಳಿಸಿದ್ದಾರೆ. ಅವುಗಳ ವಿಷಯದಲ್ಲಿಯೂ ಕೂಡ ಸರ್ಕಾರದವರು ಗಮನಕೊಡಬೇಕು. ಎಸ್ಟಿಮೇಟ್ ಕಮಿಟಿಯವರು ತಮ್ಮ ವರದಿಯಲ್ಲಿ ಯಾವ ವಿಷಯಗಳನ್ನು ತಿಳಿಸಿದ್ದಾರೆಯೋ ಆ ವಿಷಯಗಳನ್ನೇ ಈವರದಿಯಲ್ಲಿಯೂ ಸಹ ತಿಳಿಸಿದ್ದಾರೆ. ಅದರ ಕಡೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಹಿಂದೆ ಕೆಲವು ರಿಪೋರ್ಟುಗಳನ್ನು ತಯಾರಿಸಿದರು. ಆದರೆ ಅದರಲ್ಲಿರತಕ್ಕ ವಿಷಯಗಳನ್ನು ಕಾರ್ಯಗತ ಮಾಡಲಿಲ್ಲ. ಆದ್ದರಿಂದ ಬರೀ ರಿಪೋರ್ಟುಗಳನ್ನು ತಯಾರುಮಾಡಿದಾಕ್ಷಣಕ್ಕೆ ಯಾವ ಸುಧಾರಣೆಯೂ ಆಗುವುದಿಲ್ಲ. ಅದರಲ್ಲಿರತಕ್ಕ ವಿಷಯಗಳನ್ನು ಕಾರ್ಯರೂಪಕ್ಕೆ ತರಬೇಕು. ಈ ವಿಷಯವನ್ನು ಹೇಳುವುದಕ್ಕೆ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. ಸೆಕ್ರೆಟೇರಿಯಟ್‌ನಲ್ಲಿ ಸರ್ಕಾರದ ಆರ್ಡರುಗಳನ್ನು ಮಾಡುತ್ತಾರೆ; ಮತ್ತು ಸರ್ಕ್ಯುಲರ್‌ಗಳನ್ನು ಹೊರಡಿಸುತ್ತಾರೆ. ಅವು ಕೊನೆಯ ಹಂತಕ್ಕೆ ಹೋಗುವುದರೊಳಗಾಗಿ ಅವು ವೀಕ್ ಆಗುತ್ತವೆ. ಹತ್ತಾರು ಸಂದರ್ಭಗಳಲ್ಲಿ ಆ ರೀತಿಯಾಗಿರುವುದು ನನಗೆ ಗೊತ್ತಿದೆ. ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ಒಂದು ಸರ್ಕ್ಯುಲರ್ ಅನ್ನು ಸಾಕಷ್ಟು ಆಲೋಚನೆಮಾಡಿ ಇಂಥಾದ್ದು ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಆಗಬೇಕೆಂದು ಅದನ್ನು ಜಿಲ್ಲೆಗಳಿಗೆ ಕಳುಹಿಸಿಕೊಟ್ಟರೆ ಅಲ್ಲಿ ಅದರಮೇಲೆ ಆಕ್ಷೇಪಣೆಗಳು, ಟೀಕೆ ಟಿಪ್ಪಣಿಗಳು ಆಗಿ ಕೊನೆಯ ಮಟ್ಟದಲ್ಲಿ ಅದು ಕಾರ್ಯಗತ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆ ವಿಷಯವನ್ನು ಈ ವರದಿಯಲ್ಲಿಯೂ ನಮೂದು ಮಾಡಿದ್ದಾರೆ. ಈ ವರದಿಯಲ್ಲಿ ಮಿತವ್ಯಯ ಮಾಡಲು ಏನೇನು ಸೂಚನೆಗಳನ್ನು ಮಾಡಿದ್ದಾರೆಯೋ ಅವುಗಳನ್ನು ಅನುಷ್ಠಾನಕ್ಕೆ ತಂದರೆ, ಕಾರ್ಯರೂಪಕ್ಕೆ ತಂದರೆ ಕಂದಾಯವನ್ನಾಗಲೀ ಅಥವಾ ತೆರಿಗೆಯನ್ನಾಗಲೀ ಹಾಕಬೇಕಾದ ಪ್ರಮೇಯವೇ ಇಲ್ಲ ಎಂದು ಕಾಣುತ್ತದೆ. ಸರ್ಕಾರದ ಆಡಳಿತದಲ್ಲಿ ಇರತಕ್ಕ ಲೀಕೇಜ್ ಏನಿದೆ ಅದನ್ನೂ ಭದ್ರಪಡಿಸಿ ಸ್ವಲ್ಪ ಬಿಗಿಯಾಗಿ ಸರ್ಕಾರದವರು ಕೆಲಸ ಮಾಡಬೇಕು. ಹಿಂದೆ ಇದೇ ಸಭೆಯಲ್ಲಿ ಯುನಾನಿಮಸ್ ಆಗಿ ಒಂದು ರೆಸೆಲ್ಯೂಷನ್ ಆಗಿದ್ದು ಎಲ್ಲರಿಗೂ ಗೊತ್ತಿದೆ. ಅದು ಏನೆಂದರೆ ಒಂದು ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಮತ್ತು 100 ರೂಪಾಯಿಗಳಿಗಿಂತ ಕಡಿಮೆ ಸಂಬಳ ಯಾವ ಸರ್ಕಾರಿ ನೌಕರರಿಗೂ ಇರಬಾರದು ಎಂದು. ಆದರೆ ಅದು ಯಾವುದನ್ನೂ ಅನುಷ್ಠಾನಕ್ಕೆ ತರಲಿಲ್ಲ. ಸುಮ್ಮನೆ ಭಾಷಣಗಳನ್ನು ಮಾಡಿಕೊಂಡು ವರದಿಗಳನ್ನು ಮಾಡುತ್ತಾ ಹೋದರೆ ಜನತೆಗೆ ನಿರುತ್ಸಾಹವಾಗುತ್ತದೆ. ದೇಶಾಭಿಮಾನಿಗಳಾದ ಮತ್ತು ಜವಾಬ್ದಾರಿಯುತವಾದ ಜನಗಳು ಈ ಕಮಿಟಿಯಲ್ಲಿ ಸೇರಿ ಕೆಲಸ ಮಾಡಿದ್ದಾರೆ. ಮಿತವ್ಯಯದ ವಿಷಯದಲ್ಲಿ ಕೆಲವು ಒಳ್ಳೆಯ ಸಲಹೆಗಳನ್ನು ಈ ವರದಿಯಲ್ಲಿ ಮಾಡಿದ್ದಾರೆ. ಇವುಗಳನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಬಹಳ ವಿಶ್ವಾಸದಿಂದ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ ಎನ್ನುವುದರಲ್ಲಿ ಅನುಮಾನವಿಲ್ಲ. ಮಿತವ್ಯಯದ ಕಡೆಗೆ ಗಮನ ಕೊಡದೇ ಮೂರನೇ ಪಂಚವಾರ್ಷಿಕ ಯೋಜನೆಗೆ ಹಣಬೇಕು ಅದಕ್ಕೋಸ್ಕರ ಕಂದಾಯ ಹಾಕುತ್ತೇವೆ ಎಂದು ಹೇಳಿ one way traffic ಎಂದು ಏನು ಹೇಳುತ್ತೇವೆ. ಆ ಮಾರ್ಗದಲ್ಲಿ ಹೋಗುತ್ತಾ ಇದ್ದೀರಿ. ಆ ರೀತಿ ಮಾಡದೇ ಮಿತವ್ಯಯದ ಕಡೆಗೆ ಗಮನ ಕೊಡಬೇಕು. ಸರ್ಕಾರದವರು ಅನೇಕ ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿ ದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೀರಿ. ಹಾಗಿರುವಾಗ ಇದರಲ್ಲಿ ಮಿತವ್ಯಯದ ಬಗ್ಗೆ ಏನು ಸೂಚನೆ ಮಾಡಿದ್ದಾರೆ. ಅದರಂತೆ ಕೆಲಸ ಮಾಡಬೇಕಾದ್ದು ಮುಖ್ಯ ಎಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ಅಧ್ಯಕ್ಷರಿಗೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ರೋಗಿಗಳಿಗೆ ಪಥ್ಯ ಯಾವ ರೀತಿ ಹಿಡಿಸುವುದಿಲ್ಲವೋ ಹಾಗೆಯೇ ವಿರೋಧ ಪಕ್ಷದವರು ಮಾಡತಕ್ಕ ಸಲಹೆಗಳೂ ಕೂಡ ಈಗ ನಡೆದುಕೊಂಡು ಬಂದಿರತಕ್ಕ ಅನೇಕ ಸಂದರ್ಭಗಳನ್ನು ನೋಡಿದರೆ ಸರ್ಕಾರದವರಿಗೆ ಅಷ್ಟಾಗಿ ಹಿಡಿಸುತ್ತಾ ಇಲ್ಲ. ಅನೇಕ ಸಂದರ್ಭಗಳಲ್ಲಿ ನ್ಯಾಯವಾದ ಸಲಹೆಗಳನ್ನು ವಿರೋಧ ಪಕ್ಷದವರು ಮಾಡುತ್ತಾ ಇಲ್ಲ, ಕರ್ತವ್ಯ ಲೋಪ ಮಾಡುತ್ತಾ ಇದ್ದಾರೆ ಎಂದು ಬಹಳವಾಗಿ ಕೆಲವು ಕಡೆ ಪ್ಲಾಟ್‌ಫಾರಂನಲ್ಲಿ ನಿಮ್ಮ ಮುಖಂಡರು ಉದ್ವೇಗವಾದ ಭಾಷಣ ಮಾಡಿದ್ದಾರೆ. ಅನಂತರ ಬೆಂಗಳೂರಿಗೆ ಬಂದು ಈ ಅಸೆಂಬ್ಲಿಯ ಮೆಂಬರಾಗಿ, ಮಂತ್ರಿಗಳಾದ ಮೇಲೆ ಭಾಷಣಗಳನ್ನು ಸ್ವಲ್ಪ ಕಡಿಮೆ ಮಾಡುತ್ತಾರೆ. ಮತ್ತು ಪ್ರತಿಯೊಂದು ಆಫೀಸಿಗೂ ಫೋನ್ ಇಟ್ಟುಕೊಂಡು ಎಲ್ಲಾ ಕೇಸುಗಳಲ್ಲೂ ಕೈಹಾಕುವುದಕ್ಕೆ ಪ್ರಾರಂಭಮಾಡಿ ತಮ್ಮ ಕೈಯಲ್ಲಿ ಆಗದಿದ್ದರೆ ಅಧಿಕಾರಿಗಳನ್ನು ಆ ತಪ್ಪಿಗೆ ಈಡು ಮಾಡುತ್ತಾರೆ. ಅಧಿಕಾರಿಗಳಲ್ಲಿ ದಕ್ಷತೆ ಕಡಿಮೆ ಆಗಿದೆ ಮತ್ತು ಕಾಗದ ಪತ್ರಗಳ ವಿಲೇವಾರಿ ಬಹಳ ವಿಳಂಬವಾಗುತ್ತಿದೆ ಎಂದು ಈ ಸಮಿತಿಯವರು ವರದಿ ಮಾಡಿದ್ದಾರೆ. ಇದಕ್ಕೆ ನನ್ನ ಅಭಿಪ್ರಾಯವಾದರೂ ಇಷ್ಟೆ. ದಾಕ್ಷಿಣ್ಯಕ್ಕೆ ಒಳಗಾಗಿ ಈ ಐ.ಎ.ಎಸ್. ಅಧಿಕಾರಿಗಳನ್ನು ನೇಮಿಸಿರುವುದು ಮತ್ತು ಪ್ರೊಬೇಷನರುಗಳನ್ನು ತೆಗೆದುಕೊಳ್ಳುವಾಗ ಯಾರೋ ಒಬ್ಬ ಈಗ ಬಿ.ಎ. ಪಾಸ್ ಮಾಡಿರತಕ್ಕ ಮನುಷ್ಯನನ್ನು 1926ನೇ ಇಸವಿಯಲ್ಲಿ ಪಾಸ್ ಮಾಡಿದವನ ಮೇಲೆ ಹಾಕುವುದು ಇದಕ್ಕೆಲ್ಲಾ ಕಾರಣವಾಗಿದೆ. ಪ್ರೊಬೇಷನರುಗಳನ್ನು ತೆಗೆದುಕೊಳ್ಳುವಾಗ ಯಾವ ರೀತಿ ಸಮರ್ಥಿಸುತ್ತೀರಿ ಎಂದರೆ ಎಲೆಕ್ಷನ್‌ಗೆ ಒಂದು ತಿಂಗಳ ಮುಂಚೆ ತಹಸೀಲ್‌ದಾರರ ಲಿಸ್ಟು ತಯಾರು ಮಾಡಿದರು. ತಯಾರುಮಾಡಿ ನಮ್ಮ ಪಾರ್ಟಿ ಮನುಷ್ಯನನ್ನು ಚುನಾವಣೆಗೆ ನಿಲ್ಲಿಸುತ್ತೇವೆ ಆತನಿಗೆ ಓಟು ಕ್ಯಾನವಾಸ್ ಮಾಡಬೇಕು, ಮಾಡಿದರೆ ನಿಮ್ಮ ಪೈಕಿ ಯಾರನ್ನಾದರೂ ಪ್ರೊಬೇಷನರನ್ನಾಗಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ತೆಗೆದುಕೊಂಡಿದ್ದಾರೆ. ಹೆಸರು ಬೇಕಾದರೆ ಹೇಳುತ್ತೇನೆ. ಆ ಪಟ್ಟಿ ನನ್ನ ಹತ್ತಿರ ಇದೆ. ಬೇಕಾದರೆ ತಮ್ಮ ಗಮನಕ್ಕೆ ತರುತ್ತೇನೆ. ಅವನೂ ನಮ್ಮ ಹುಡುಗನೇ ಆದ್ದರಿಂದ ಹೆಸರು ಹೇಳುವುದಿಲ್ಲ, ಇಂಥಾ ಅನ್ಯಾಯಕ್ಕೆ ಸರ್ಕಾರ ಕೈಹಾಕಿದ ಮೇಲೆ ಅಧಿಕಾರಿಗಳನ್ನು ನಿಷ್ಠೂರ ಮಾಡುವುದು ತಪ್ಪಾಗುತ್ತದೆ. ಸಂಬಳದ ಆಸೆಗೆ ಸೇರುತ್ತಾರೆ. ದೇಶದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಾ ಇದ್ದಾರೆ. ಪ್ರಾಂತಗಳ ಪುನರ್‌ವಿಂಗಡನೆ ಆದಮೇಲೆ ಇಲ್ಲಿಗೆ ಬಂದು ಸೇರಿದ ಹೈದರಾಬಾದ್ ಪ್ರದೇಶದವರ ಸಂಬಳ ಜಾಸ್ತಿ ಇದೆ ಎಂದು ಮದ್ರಾಸಿನವರ ಸಂಬಳ ಜಾಸ್ತಿ ಇದೆ ಎಂದು ಮೈಸೂರಿನವರು ಹೇಳುತ್ತಾರೆ. ಸ್ವಾಮಿ 20 ವರ್ಷದಿಂದ ಈ ಕೆಲಸ ಮಾಡುತ್ತಾ ಇದ್ದ ನನಗಿಂತ ಕೆಳಗಿದ್ದವನನ್ನು ಸೂಪರ್‌ವೈಜರ್ ಆಗಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಈ ರೀತಿ ವಿಪರೀತ ತಾರತಮ್ಯವುಂಟಾಗಿದೆ, ಇದರ ಪರಿಣಾಮವಾಗಿ ಅವರನ್ನು ಇವರು ಇವರನ್ನು ಅವರು ನೋಡುತ್ತಾ ಇರುವುದು ಬಿಟ್ಟು ಇನ್ನೇನೂ ಕೆಲಸವಾಗುತ್ತಿಲ್ಲ. ಇನ್ನು ಕೆಲವರಿಗೆ ಕನ್ನಡ ಮಾತನಾಡುವುದಕ್ಕೇ ಬರುವುದಿಲ್ಲ ಎಂದು ವರ್ತಮಾನ ಕೇಳುತ್ತಾ ಇದ್ದೇವೆ. ಆಫೀಸಿನಲ್ಲಿ ಒಂದು ಏ ಕ್ಯಾ ಹೊ ಗಯಾ? ಏ ಕ್ಯಾ ಹೊ ಗಯಾ ಎಂದು ಕೇಳುತಾರೆ. ಯಾರಿಗೂ ಮರ್ಯಾದೆ ಕೊಡುವುದಿಲ್ಲ. ನಮ್ಮ ಮೈಸೂರು ದೇಶದ ಅಧಿಕಾರಿಗಳು ಏನು ಹೇಳುತ್ತಾರೆ ಎಂದರೆ ಹೊರಗಿನವರನ್ನು ನಮ್ಮ ಜೊತೆಯಲ್ಲಿ ಸೇರಿಸಿ ನಮಗೆ ಬರತಕ್ಕ ಪ್ರಮೋಷನ್ ಎಲ್ಲಾ ಹೋಯಿತು ಎಂದು ಹೇಳುತ್ತಾರೆ. ಕಾಗದ ವಿಲೇವಾರಿ ವಿಷಯದಲ್ಲಿ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಸಮಿತಿಗಳನ್ನು ಏನಾದರೂ ಒಂದು ಉದ್ದೇಶ ಇಟ್ಟು ಕೊಂಡು ನಮ್ಮ ದೇಶಕ್ಕೆ ಒಳ್ಳೆಯದಾಗಲೀ ಎಂದು ರಚನೆ ಮಾಡುತ್ತೇವೆ. ಮೈಸೂರು ಸರ್ಕಾರದ ಒಂದು ಪರಂಪರೆ ಏನಾಗಿದೆ ಎಂದರೆ ಮಂತ್ರಿಮಂಡಲದಲ್ಲಿ ಜಾಗ ಕೊಡುವುದಕ್ಕೆ ಅವಕಾಶವಿಲ್ಲದೇ ಇದ್ದರೆ, ಅವರು ಏನಾದರೂ ನಿರುದ್ಯೋಗಿಗಳಾಗಿದ್ದು ರಾಜಕೀಯ ನಿಪುಣರಾಗಿದ್ದರೆ ಒಂದು ಸಮಿತಿ ಮಾಡಿ 6 ತಿಂಗಳು ಅವರನ್ನು ಛೇರ್ಮನ್ನ ಆಗಿ ಮಾಡಿ ಅವರಿಗೆ ಒಂದು ಮನೆ, ಕಾರು ಕೊಟ್ಟು ದೇಶದಲ್ಲಿ ಅಲ್ಲಿ ಇಲ್ಲಿ ಸಂಚಾರ ಮಾಡುತ್ತಾ ಇರೀ ಅಷ್ಟರಲ್ಲೇ ಇಲ್ಲೇನಾದರೂ ಖಾಲಿ ಆದರೆ ನೋಡೋಣ ಎಂದು ಹೇಳುವುದಕ್ಕೆ ಇಂಥಾ ಸಮಿತಿಗಳನ್ನು ರಚನೆ ಮಾಡುತ್ತಾರೆ. ಈಗ ನಮ್ಮ ಸರ್ಕಾರದವರು ರಚನೆ ಮಾಡಿದ ಸಮಿತಿಯವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮನುಷ್ಯ ಎಂದಮೇಲೆ ಎಡವದೇ ಇರುವವರು ಯಾರೂ ಇಲ್ಲ. ಇದರಲ್ಲಿ ಭಿನ್ನಾಭಿಪ್ರಾಯ ಇರಬಹುದು. ಆದರೆ ಪೂರ್ತಿ, ಅವರು ಮಾಡಿರತಕ್ಕ ಪ್ರತಿಯೊಂದೂ ಕೂಡ ಅವಹೇಳನ ಮಾಡುವುದಕ್ಕಾಗುವುದಿಲ್ಲ. ಮೊದಲನೆಯದಾಗಿ ಸಮಿತಿಯವರ ಹೆಸರಾದರೂ ಏನು? ಮಿತವ್ಯಯ ಮತ್ತು ಸಂಪನ್ಮೂಲ ಸಮಿತಿ ಅಂತ ಇದೆ. ನಮ್ಮ ಸರ್ಕಾರ ಪ್ರತಿಯೊಂದರಲ್ಲೂ ಹಿಂದೂ ಮುಂದು. ಮಿತವ್ಯಯ ಬಿಟ್ಟರು. ಸಂಪನ್ಮೂಲ ಹುಡುಕಿಕೊಂಡು ಹೋದರು. ಯಾವ ರೀತಿ ಅಂದರೆ. ಅವರು ಟ್ಯಾಕ್ಸ್ ಹಾಕಿ ಎಂದು ಹೇಳಿದ್ದಾರೆ. ಆದ್ದರಿಂದ ಮೊದಲು ಟ್ಯಾಕ್ಸ್ ಹಾಕುತ್ತೇವೆ. ಆ ಮೇಲೆ ಮಿತವ್ಯಯ ಮಾಡೋಣ ಎಂದಿರಬಹುದು. ನಮ್ಮದು ಮಾದರಿ ಮೈಸೂರು, ಚಿನ್ನ ಇದೆ; ಭಂಗಾರ ಇದೆ, ಕೈಗಾರಿಕೆಗಳಿವೆ ಎಂದು ಹೇಳಿ ಹೇಳತಕ್ಕ ಈ ಭಾಷಣಗಳನ್ನು ಕೇಳಿದರೆ, ಯಾವನಾದರೂ ಅಜ್ಞಾನಿ ಆಗಿದ್ದ ಪಕ್ಷದಲ್ಲಿ ಕಿಂದರ ಜೋಗಿ ಎಳೆದುಕೊಂಡು ಹೋದ ಅನ್ನುವ ಹಾಗೆ ಅವನನ್ನು ಎಳೆದುಕೊಂಡು ಹೋಗಿ ದುರ್ಭರವಾದ ಗುಂಡಿ ತೋರಿಸುತ್ತಾ ಇದ್ದರು. ಇದು ನಿಜವಾಗಿಯೂ ಆಶ್ಚರ್ಯಕರ. ಯೋಜನೆಯ ಮಹತ್ವವನ್ನರಿತು ಕಾರ್ಯಗತ ಮಾಡುವುದಕ್ಕೆ ಸಂಪನ್ಮೂಲಗಳು ಏನೇನು ಇವೆ ಎಂಬುದನ್ನು ಸಮಿತಿಯವರು ಹೇಳಿದ್ದಾರೆ. ಎಂಟು ಜನ ಮಂತ್ರಿಗಳು ಸಾಕು ಎಂದರೆ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ನಮ್ಮ ಮಾದರೀ ಮೈಸೂರಿನಲ್ಲಿ 27 ಜನ ಮಂತ್ರಿಗಳನ್ನು ಮಾಡಿದ್ದೀರಿ. ರಾಜಕೀಯದಲ್ಲಿ ನೊಂದವರು ಅಂತ ಹೇಳಿ ಒಂದು ತಿಂಗಳಿಗೆ 1000 ರೂಪಾಯಿ ಕೊಡಿ ಪರವಾಗಿಲ್ಲ. ಆದರೆ ಈ ಡೆಪ್ಯುಟಿ ಮಿನಿಸ್ಟರಿಗೆ ಏನು ಕೆಲಸ ಕೊಟ್ಟಿದ್ದೀರಿ? ಅವರಿಗೆ ಒಂದು ಕಾಗದ ಹೋಗುವುದಿಲ್ಲ. ಒಂದು ಕಾಗದ ಬರುವುದಿಲ್ಲ. ಆಫೀಸಿನಲ್ಲಿ ಯಾರಾದರೂ ಹತ್ತಿರ ಮಾತನಾಡಿಕೊಂಡು, ಫೋನ್ ಹಿಡಿದುಕೊಂಡು ಕುಳಿತಿರುತ್ತಾರೆ. ಈ ಡೆಪ್ಯುಟೀ ಮಿನಿಸ್ಟರುಗಳು ಏನು ಕೆಲಸ ಮಾಡಬೇಕೆನ್ನುತ್ತೀರಿ? ಮಂತ್ರಿಗಳು ಒಂದಿಬ್ಬರು ಜಾಸ್ತಿ ಇದ್ದರೆ ನಮ್ಮ ದೇಶ ಏನೂ ಹಾಳಾಗುವುದಿಲ್ಲ. ಡೆಪ್ಯುಟಿ ಮಿನಿಸ್ಟರಿಗೆ ಕೊಡತಕ್ಕ ಸಂಬಳ ಅನ್ಯಾಯವಾಗಿ ಸುಮ್ಮನೆ ಹಾಳಾಗುವುದಕ್ಕೆ ಬದಲಾಗಿ ಅವರಿಗೆ ಉದ್ಯೋಗವಾದರೂ ಹಚ್ಚಿ, ಸಂಚಾರ ಹೋಗಿ ನೋಡಿಕೊಂಡು ಬಂದೆ ಅಂತ ಹೇಳಿ ಬೆಳಗಾಂನಿಂದ ಹೈದರಾಬಾದಿಗೆ ಹೋದರು. ಹೋಗಿ ಬಂದು ಏನುಮಾಡಿಕೊಂಡು ಬಂದರು ಎಂದು ಕೇಳುವವರು ಯಾರೂ ಬೇಡವೇ? ಹೋಗಲಿ, ಮುಂದೆ ಮಂತ್ರಿಗಳಾಗುವವರು ಎಂದು ಭಾವಿಸಿ ತರಪೇತು ಆದರೂ ಕೊಡುತ್ತೀರಾ ಎಂದರೆ ಅವರಿಗೆ ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗುವುದಕ್ಕೆ ಅಧಿಕಾರವಿಲ್ಲ. ಮುಂದೆ ಅವರು ಮಂತ್ರಿಗಳಾದರೆ ಏನು ಮಾಡಬೇಕು ಅಲ್ಲಿ ಏನು ಮಾತನಾಡುತ್ತಾರೆ ಎಂಬುದನ್ನು ಕಲಿತುಕೊಳ್ಳುವುದಕ್ಕೆ ನಿಮ್ಮ ಪಕ್ಕದಲ್ಲಿ ಒಂದು ಬೆಂಚ್ ಆದರೂ ಹಾಕಿ ಕುಳ್ಳರಿಸಿಕೊಳ್ಳಿ ಸ್ವಾಮಿ. (ನಗು!) ಕುರ್ಚಿ ಇಲ್ಲದೇ ಇದ್ದರೂ ಬೇಡ ಜಾಸ್ತಿ ಜಾಗ ಹಿಡಿಯುತ್ತದೆ. (ನಗು!) ಆ ರೀತಿ ಮಾಡಿದರೆ ಮುಂದಾದರೂ ಸಾರ್ಥಕವಾಗಬಹುದು ಎಂದು ಭಾವಿಸಬಹುದು ಎಂದು ಹೇಳುತ್ತೇನೆ.

ಆ ಮೇಲೆ ತೆರಿಗೆಗಳನ್ನು ಹಾಕುವುದಕ್ಕೆ ಸರ್ಕಾರ ಹೊರಟಿದೆ. ಟ್ಯಾಕ್ಸ್ ಹಾಕದೇ ಯಾವ ಸರ್ಕಾರ ಆಗಲೀ ದೇಶದಲ್ಲಿ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ಅಜ್ಞಾನಿಗಳು, ಅವಿದ್ಯಾವಂತರು ಆಗಿರತಕ್ಕ ವ್ಯವಸಾಯಗಾರರ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದೀರಿ. ಉದ್ದೇಶ ಏನು? ವಿದ್ಯಾವಂತರು, ಬುದ್ಧಿವಂತರ ಮೇಲೆ ಟ್ಯಾಕ್ಸ್ ಹಾಕಿದರೆ ಪ್ರತಿಭಟನೆ ಮಾಡುತ್ತಾರೆ. ನಿಮ್ಮ ಸರ್ಕಾರ ಚೆನ್ನಾಗಿದೆ ಎಂದು ಹೇಳುವುದಿಲ್ಲ. ಅಜ್ಞಾನಿಗಳಾಗಿರತಕ್ಕ ಅವಿದ್ಯಾವಂತರ ಮೇಲೆ ಹಾಕಿದರೆ ಕೊಡಬೇಕು ಎನ್ನುವ ದೃಷ್ಟಿಯಿಂದ ಕೊಡುತ್ತಾರೆ ಎಂದು ಈ ಸಾಧುಪ್ರಾಣಿಗಳ ಮೇಲೆ, ಮೂಕ ಪ್ರಾಣಿಗಳ ಮೇಲೆ ಈ ತೆರಿಗೆಯನ್ನು ಹಾಕಿರುವುದು ಶುದ್ಧ ಅನ್ಯಾಯ. ಶ್ರೀಮಾನ್ ಬೈರೇಗೌಡರು ಹೇಳಿದ ಹಾಗೆ ರೋಡ್ ಟ್ರಾನ್ಸ್‌ಪೋರ್ಟ್, ಯಾವನಾದರೂ ಒಬ್ಬ ಖಾಸಗೀ ಮನುಷ್ಯನಿಗೆ ಒಂದು ಬಸ್ ಲೈನ್ ಸಿಕ್ಕಿದರೆ ಅವನಾಗಲೇ ಚುನಾವಣೆಯಲ್ಲಿ contest ಮಾಡುವುದಕ್ಕೆ ಶುರು ಮಾಡುತ್ತಾನೆ. ರೋಡ್ ಟ್ರಾನ್ಸ್‌ಪೋರ್ಟ್ ಸರ್ವೀಸ್‌ನಲ್ಲಿ ಯಾವ ಮನುಷ್ಯನಿಗೆ ಯಾವ ಕೆಲಸ ಬೇಕಾದರೂ ಸಿಕ್ಕುತ್ತದೆ. ಅನಾಹುತಗಳು ಆಗುತ್ತಿರುವುದನ್ನು ನೋಡಬಹುದು. ಎಲ್ಲಿ ನೋಡಿದರೂ ಕೆಂಪು ಬಸ್ಸುಗಳೇ, ಸರ್ಕಾರಕ್ಕೆ ಬರತಕ್ಕ ಉತ್ಪನ್ನ ಏನಪ್ಪ ಎಂದರೆ ಅದನ್ನು ಎಣಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ಆಗುತ್ತಾ ಇರತಕ್ಕ ಅಪಚಾರ ಕಿವಿಯಲ್ಲಿ ಕೇಳಿದರೆ ನಾಲ್ಕು ಜನ ಮಂತ್ರಿಗಳು ಬಸ್ ಲೈನ್ ಮೇಲೆ ಹೋದ ಹೊರತೂ ಪ್ರಯೋಜನವಾಗುವುದಿಲ್ಲ. ಅದು ಹೋಗಲಿ ಸರ್ಕಾರಕ್ಕೆ ಲಾಭ ಬರದಿದ್ದರೂ, ಜನಗಳಿಗೆ ಉಪಕಾರವಾಗಿದೆಯೇ ಎಂದರೆ 6 ಆಣೆ ಕೊಡುತ್ತಾ ಇದ್ದ ಕಡೆ 12 ಆಣೆ ಕೊಡಬೇಕಾಗಿದೆ. ಅಷ್ಟೇ ಅಲ್ಲದೆ ಎರಡು ತೆಂಗಿನಕಾಯಿ ಮೂಟೆ ತೆಗೆದುಕೊಂಡು ಹೋದರೆ ಬಸ್‌ನಲ್ಲಿ ಸೀಟೇ ಸಿಕ್ಕುವುದಿಲ್ಲ. ಇನ್ನು ಕೆಲವರು ಎರಡು ರೂಪಾಯಿ ಟಿಕೆಟ್‌ಗೆ 1½ ರೂಪಾಯಿ ಕೊಟ್ಟು ಟಿಕೆಟ್ ಕೂಡ ಕೇಳದೇ ಪ್ರಯಾಣಮಾಡಿಕೊಂಡು ಹೋಗುತ್ತಾರೆ, 8 ಆಣೆ ಮಿಕ್ಕಿತು, ಬೆಂಗಳೂರು ಸೇರಿದ್ದು ಆಯಿತು ಅಂತ ಯಾವುದಾದರೂ ರೂಪದಲ್ಲಿ ಹಣ ಉಳಿಸಿಕೊಂಡು ಹೋಗುತ್ತಾರೆ. ಅಂತೂ ಇಂತೂ ಪ್ರವಾಹ ಬಂದ ಹಾಗೆ 25 ಜನ ಮಂತ್ರಿಗಳು ಯಾವುದಾದರೂ ಒಂದು ರೀತಿಯಲ್ಲಿ ದುಡ್ಡು ಪೋಲು ಮಾಡುತ್ತಾರೆ ಎಂಬ ಭಾವನೆ ನಮ್ಮ ಜನಕ್ಕೆ ಬಂದಿದೆ.

ಮಂತ್ರಿಗಳಿಗೆ 900 ರೂಪಾಯಿಗಳ ಸಂಬಳ ಮತ್ತು 250 ರೂಪಾಯಿಗಳ ಮನೆ ಬಾಡಿಗೆ ಕೊಡಬೇಕೆಂದು ಕಾನೂನಿನಲ್ಲಿದೆ. ಆದರೆ ಈ ಅವಕಾಶ ಹೇಗೆ ದುರುಪಯೋಗ ಮಾಡುತ್ತಾರೆಂಬುದನ್ನು ನೋಡಿ ಮನೆ ಬಾಡಿಗೆ ಅಥವಾ ಸುಸಜ್ಜಿತವಾದ ಮನೆ ಮಂತ್ರಿಗಳಿಗೆ ಒದಗಿಸಬೇಕೆಂದು ಕಾನೂನಿನಲ್ಲಿ ಸೂಚಿಸಲಾಗಿದೆ. ಹೀಗಿರುವುದರಿಂದ ಸುಸಜ್ಜಿತವಾದ ಮನೆಗಾಗಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ಕಾರ್ಲ್‌ಟನ್ ಹೌಸ್‌ಗೆ ಸುಮಾರು ಎರಡು ಸಾವಿರ ರೂಪಾಯಿಗಳ ಬಾಡಿಗೆ ಬರುತ್ತದೆ. ಅದನ್ನು ಒಬ್ಬ ಮಂತ್ರಿಗಳಿಗೆ ಕೊಡುವುದು ಸೂಕ್ತವೆ? ಲೈಟ್ ಛಾರ್ಜೇ ಬೇಕಾದಷ್ಟಾಗುತ್ತದೆ. ಜಂಖಾನ, ಮೇಜು, ಕುರ್ಚಿ ಮುಂತಾದ ಫರ್ನಿಚರ್ ಇದನ್ನೆಲ್ಲಾ ಒದಗಿಸುತ್ತಾರೆ. ಆದರೆ ಮಂತ್ರಿಗಳ ಅಧಿಕಾರಾವಧಿ ಮುಗಿದ ನಂತರ ಕೇಳಿದರೆ ಫರ್ನಿಚರ್ ಕೊಡುವುದಿಲ್ಲ ಏನು ಬೇಕಾದರೂ ಬರೆದುಕೊಳ್ಳಲಿ ಎಂದು ಹೇಳುತ್ತಾರೆ. ಮಂತ್ರಿಗಳು ಸಾಧ್ಯವಾದ ಮಟ್ಟಿಗೆ ನಮ್ಮ ದೇಶದ ಅಂತಸ್ತಿಗೆ ತಕ್ಕಹಾಗಿರಬೇಕು. ಹೆಚ್ಚು ಬಾಡಿಗೆ ಬರುವ ಮನೆಯನ್ನು ಒಬ್ಬರಿಗೇ ಕೊಡುವುದು ಅನ್ಯಾಯ. ಮಂತ್ರಿಗಳೆಲ್ಲಾ ಅಧಿಕಾರಕ್ಕೆ ಬರುವ ಮುಂಚೆ ಇಂಥ ದೊಡ್ಡ ಮನೆಗಳಲ್ಲೇ ಇದ್ದರೆ, ಮಂತ್ರಿ ಪದವಿ ಹೋದ ನಂತರ ಅಂತಹ ಮನೆಗಳಲ್ಲೇ ವಾಸ ಮಾಡಲು ಸಾಧ್ಯವೆ ಎಂಬುದನ್ನು ಗಮನಿಸಬೇಕು. ಅದನ್ನು ಯೋಚಿಸಿ ಅಂತಸ್ತಿಗೆ ತಕ್ಕಂತೆ ಒಂದು ಮನೆಯನ್ನು ಅರಿಸಿ ಅದರಲ್ಲಿ ವಾಸಮಾಡುವುದು ಒಳ್ಳೆಯದು. ಇಲ್ಲದಿದ್ದರೆ ಅಧಿಕಾರ ಮುಗಿದ ಮೇಲೆ ಅಳಬೇಕಾಗುತ್ತದೆ, ಬಹಳ ಕಷ್ಟವಾಗುತ್ತದೆ. ಪದವಿ ಹೋದಾಗ ಕೂಡ ಒಂದೇ ರೀತಿ ಇರಬೇಕು. ಮುಂದೆ ಸಂಕಟಕ್ಕೆ ಒಳಗಾಗಬಾರದು.

ಇನ್ನು ಒಂದೊಂದು ಜಿಲ್ಲೆಗೆ ಇಬ್ಬರು ಡೆಪ್ಯುಟಿ ಕಮಿಷನರನ್ನು ನೇಮಕ ಮಾಡಬೇಕೆಂದು ಸರ್ಕಾರ ಯೋಚಿಸುತ್ತಿದೆಯೆಂದು ಕೇಳಿದ್ದೇವೆ. ಹಾಗೆ ಮಾಡಿದರೆ ವೃಥಾ ಖರ್ಚು ಹೆಚ್ಚುತ್ತದೆ. ಸಾಮಾನ್ಯವಾಗಿ ಈಗ ಮಂತ್ರಿಗಳು ಪ್ರವಾಸ ಬಂದಾಗ ಜನರ್‍ಯಾರೂ ಅವರನ್ನು ನೋಡಲು ಬರುವುದಿಲ್ಲ. ಇನ್ನು ಮೇಲೆ ಮಂತ್ರಿಗಳು ಪ್ರವಾಸ ಬಂದಾಗ ಕಟ್ಟಲು ಖಾಯಂ ಆಗಿರುವಂತೆ ಪ್ಲಾಸ್ಟಿಕ್ ತೋರಣ ಮಾಡಿ ಇಡಬೇಕೆಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಹಾಗೆ ಮಾಡದಿದ್ದರೆ ಉಪ್ಪಿನ ಕಾಯಿಗೆ ಮಾವಿನಕಾಯೇ ಸಿಕ್ಕುವುದಿಲ್ಲ ಎಂದು ಭಾವಿಸುವ ಕಾಲ ಬಂದಿದೆ.

ಮಿತವ್ಯಯ ಹೇಗೆ ಮಾಡಬೇಕೆಂಬುದಕ್ಕೆ ಒಂದು ಸಲಹೆಯನ್ನೂ ಕೊಡುತ್ತಿಲ್ಲ ಎಂದು ಹೇಳಿದರು. ಬಡ್ಜೆಟ್ ಅಧಿವೇಶನದಲ್ಲೇ ಎಷ್ಟೋ ಹೇಳಿದೆವು. ಇವತ್ತಿನವರೆಗೂ ಅದಕ್ಕೆ ಗಮನ ಕೊಟ್ಟಿಲ್ಲ. ಎಲೆಕ್ಷನ್‌ಗೆ ಒಂದು ತಿಂಗಳ ಮುಂಚೆ ಮೈಸೂರಿನಲ್ಲಿ

A.E.O. ಆಫೀಸನ್ನು ತೆರೆದರು. ಆ ಆಫೀಸು ಎಲ್ಲಿದೆಯೆಂಬುದೇ ಗೊತ್ತಾಗುವುದಿಲ್ಲ. ಅದಕ್ಕೆ 5 ಜನ ಗುಮಾಸ್ತರು, ಒಬ್ಬ ಮ್ಯಾನೇಜರು ಮತ್ತು ಒಬ್ಬ ಗೆಜೆಟೆಡ್ ಆಫೀಸರನ್ನು ನೇಮಿಸಿದರು. 150 ರೂಪಾಯಿಗಳ ಮನೆ ಬಾಡಿಗೆ ಬೇರೆ ಕೊಡುತ್ತಿದ್ದಾರೆ. ಈ ಏಳು ತಿಂಗಳಿಂದ ಈ ಆಫೀಸಿಗೆ ಒಂದು ಪೇಪರ್ ಕೂಡ ಹೋಗಿಲ್ಲ. ಈ ಆಫೀಸಿನ ಏಳು ಮಂದಿಯೂ ಆರಾಮಾಗಿ ಇಸ್ಪೀಟ್ ಆಡಿಕೊಂಡಿರಬಹುದು. ಇವರ ಆಫೀಸಿಗೆ ಒಂದು ಕಾಗದವೂ ಕೂಡ ಹೋಗಿಲ್ಲ, ಅಲ್ಲಿಂದ ಒಂದು ಕಾಗದವೂ ಬಂದಿಲ್ಲ ಎಂದು ಛಾಲೆಂಜ್ ಮಾಡಬಹುದು.

ಅದರ ಹಾಗೆಯೇ ಬೆಟರ್‌ಮೆಂಟ್ ಲೆವಿಗಾಗಿ ಕೆಲವು ಅಧಿಕಾರಿಗಳನ್ನು ಕಳುಹಿಸಿದರು. ಕಾನೂನಿನಲ್ಲೇನೋ ತಪ್ಪಿದೆ ಎಂದು ಈ ಅಧಿಕಾರಿಗಳು ಏನು ಕೆಲಸವೂ ಮಾಡದೆ ಆರಾಮಾಗಿ ತಿರುಗಾಡುತ್ತಿದ್ದಾರೆ. ಒಂದಾಣೆ ಎಲ್ಲಾದರೂ ಅವರು ಲೆವಿ ಮಾಡಿದ್ದರೆ ನಾನು ರಾಜೀನಾಮೆ ಕೊಡಲು ಸಿದ್ಧ. ಯಾವ ಸದಸ್ಯರೇ ಆಗಲಿ ಉತ್ತಮವಾದ ಸಲಹೆ ಕೊಟ್ಟಾಗ ಅದನ್ನು ಗಮನಿಸಬೇಕು.

ಒಬ್ಬ ಮಾನ್ಯಸದಸ್ಯರು.—ರಾಜಿನಾಮೆ ಕೊಟ್ಟರೆ ಬೈಎಲೆಕ್ಷನ್ ಮಾಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಒಬ್ಬರು ಲೋಕ ಸಭೆಗೆ ಚುನಾಯಿತರಾಗಿ ಮಂತ್ರಿ ಪದವಿ ಕೊಡುತ್ತಾರೋ ಇಲ್ಲವೋ ಎಂಬ ಅನುಮಾನದಿಂದ ಅದನ್ನು ಬಿಟ್ಟು ಮೈಸೂರಿಗೆ ಬಂದು ಮಂತ್ರಿಗಳಾದರು. ಹೀಗೆ ಮಾಡಿದರೆ ಮತ್ತೆ ಚುನಾವಣೆ ನಡೆಯಬೇಕಾಗುತ್ತದೆ. ಕೇಂದ್ರ ಸರ್ಕಾರದ ಮಂತ್ರಿಗಳು ರಾಜ್ಯಪಾಲರಾಗುತ್ತಾರೆ. ಆಗಲೂ ಸಹ ಮತ್ತೆ ಚುನಾವಣೆ ನಡೆಯಬೇಕು. ನಮಗೂ ತೊಂದರೆ ನಾವೂ ಚುನಾವಣೆಗೆ ನಿಲ್ಲಲೆಬೇಕಾಗುತ್ತದೆ, ಸರ್ಕಾರಕ್ಕೂ ಖರ್ಚು ಆದುದರಿಂದ ಇದನ್ನೆಲ್ಲಾ ನೋಡಿಕೊಂಡು ಮುಂದುವರೆಯಬೇಕು.

ಈಗ ಪೊಲಿಟಿಕಲ್ ಸಫರರ್ಸ್‌ಗೆ ಶಾಲೆಗಳಲ್ಲಿ ಫೀಜಿನ ರಿಯಾಯಿತಿ, ವಿದ್ಯಾರ್ಥಿವೇತನ ಕೊಡುತ್ತಾರೆ, ಸಂತೋಷ. ಆದರೆ ಪೊಲಿಟಿಕಲ್ ಸಫರರ್ ಎಂದು ಗೊತ್ತು ಮಾಡುವುದು ಹೇಗೆ? ಹಿಂದೆ ಬಾವುಟ ಹಿಡಿದುಕೊಂಡು ಹೋದರೆ ಅಥವಾ ಕಾರು ನೂಕಿದರೆ ಆಯಿತೆ? ಅವನಿಗೆ ಹಿಂದೆ ಆಸ್ತಿ ಎಷ್ಟಿತ್ತು, ಈಗ ಎಷ್ಟಿದೆ, ಕಡಮೆಯಾಯಿತೆ ಎಂದು ವಿಮರ್ಶೆ ಮಾಡಬೇಕು. 5 ರೂಪಾಯಿಗಳನ್ನು ಕೊಟ್ಟರೆ ಒಂದು ಸರ್ಟಿಫಿಕೇಟ್ ಕೊಡುತ್ತಾರೆಂದು ಹೇಳುತ್ತಾರೆ. ಇರುವ ಭೂಮಿಯನ್ನೆಲ್ಲಾ ಅವರಿಗೇ ಕೊಟ್ಟರೆ ಬಡವರ ಗತಿಯೇನು? ಯಾರು ಯಾರು ಹೇಗೆ ತೊಂದರೆ ಗೀಡಾಗಿದ್ದಾರೆ ಎಂದು ವಿಚಾರ ಮಾಡಬೇಕು ಯಾರಾದರೂ ತಾನು ಪೊಲಿಟಿಕಲ್ ಸಫರರ್, ರುಜು ಹಾಕಿ ಅಂದರೆ ಈ ಸಭೆಯ ಸದಸ್ಯರು ರುಜು ಹಾಕುತ್ತಾರೆ.

ಉಪಾಧ್ಯಕ್ಷರು.—ಈ ಸಭೆಯವರು ಯಾರೂ ಹಾಗೆ ಮಾಡುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹೋಗಲಿ, ಅದನ್ನು ಅಲ್ಲಿಗೆ ಬಿಡುತ್ತೇನೆ. ಸರ್ಟಿಫಿಕೇಟ್ ಕೊಡುವಾಗ ಯಾರಾದರೂ ನಿಜವಾಗಿ ತೊಂದರೆಗೀಡಾಗಿದ್ದರೆ ಅವರಿಗೆ ದ್ವಿಗುಣವಾಗಿ ಸಹಾಯ ಮಾಡಿ, ಹಾಗಿಲ್ಲದೆ ಅಪಾತ್ರರಿಗೆ ಫೀಜಿನ ರಿಯಾಯಿತಿ, ಜಮೀನು ಮುಂತಾದ್ದನ್ನೆಲ್ಲಾ ಕೊಡುವುದು ಅನ್ಯಾಯ ಮೈನರ್ ಆಗಿರುವ ಪೊಲಿಟಿಕಲ್ ಸಫರರ್ ಸರ್ಟಿಫಿಕೇಟ್ ಕೊಡುವಾಗ ಮೆಜಾರಿಟಿಗೆ ಬಂದಿರುತ್ತಾನೆ. ಕೆಲವು ಆಫೀಸುಗಳಲ್ಲಿ ಅಣ್ಣ ಸರ್ವಿಸ್ಸಿನಲ್ಲಿರುವಾಗ ತಮ್ಮ ರಿಟೈರ್ ಆಗಿರುವ ಸಂದರ್ಭಗಳಿವೆ, ಬೇಕಾದರೆ ಹೇಳುತ್ತೇನೆ.

Sri K. LAKKAPPA.—I rise to a point of order. Can a member of this House sit in the Press Gallery?

Mr. DEPUTY SPEAKER.—It is not allowed. No member of this House should sit in any other gallery.

4-30 P.M.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವಿದ್ಯಾಭ್ಯಾಸದ ವಿಷಯದಲ್ಲಿ ಏನೂ ಉಪಯುಕ್ತವಾದ ಸುಧಾರಣೆ ಮಾಡಿಲ್ಲ. ಬೇಸಿಕ್ ಸ್ಕೂಲುಗಳು, ಮಲ್ಟಿಪರ್‌ಪಸ್ ಸ್ಕೂಲುಗಳು ಎಂದು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇವುಗಳಿಂದ ಎಷ್ಟು ವಿದ್ಯಾರ್ಥಿಗಳು ತಯಾರಾದರು, ಅವರು ಎಷ್ಟು ಕೆಲಸಮಾಡಿದ್ದಾರೆ, ಎಷ್ಟು ಸಾಮಾನುಗಳನ್ನು ಆ ಸ್ಕೂಲುಗಳಿಂದ ಕೊಡಲಾಗಿದೆ ಎಂದು ಕೇಳುತ್ತೇನೆ. ಆರು ವರ್ಷ ವಯಸ್ಸಿನ ಮಕ್ಕಳಿಗೆ ಗುದ್ದಲಿ, ಪಿಕಾಸಿ, ಹಾರೆ ಮುಂತಾದುವನ್ನು ಕೊಟ್ಟು ಕೆಲಸಮಾಡಿ ಎಂದರೆ, ಅವರೇನು ಕೆಲಸ ಮಾಡಬಲ್ಲರು? Multipurpose Schools ಎಂದರೆ ವಿವಿಧೋದ್ದೇಶಗಳ ಶಾಲೆಗಳು ಎಂದರ್ಥ. ಇವು ಯಾವ ಉದ್ದೇಶಗಳು? ಯಾವುದಾದರೂ multi purpose ಸ್ಕೂಲಿನಲ್ಲಿ ಯಾವುದಾದರೂ ಕಾರ್ಯ ಮಾಡಿದರೆ? ಈ ಶಬ್ದವನ್ನು ಹೀಗೆ ಉಪಯೋಗಿಸಿ ಏಕೆ ಹಾಳುಮಾಡಿದರು? ಒಂದು ಡಿಸ್ಟ್ರಿಕ್ಟಿನಲ್ಲಿ ಒಂದು ಸ್ಕೂಲನ್ನು ಮಾದರಿಯಾಗಿ ನಡೆಸಿ ತೋರಿಸಿದರೆ ಜನರು ಸಂತೋಷಪಡುತಾರೆ. ಆದರೆ ಒಂದೂ ಇಲ್ಲ. ಇಂಥ ಅಪಚಾರಗಳನ್ನು ಮಾಡಿ, ಇಲ್ಲದ ಸುಂಕಗಳನ್ನು ಜನರ ಮೇಲೆ ಹೇರಬೇಡಿ ಎಂದು ಸರ್ಕಾರಕ್ಕೆ ಹೇಳುತ್ತೇನೆ. ಶರಾವತಿ ಯೋಜನೆಯ ವಿಷಯದಲ್ಲಿ ನಾವು ಪ್ರಶ್ನೆಗಳನ್ನು ಕಳುಹಿಸಿದ್ದೆವು. ೬೪ ಲಕ್ಷರೂಪಾಯಿ ಅಪವ್ಯಯವಾಗಿದೆ ನೋಡಿ ಎಂದು ಹೇಳಿದರೆ, ವಿವರವಾಗಿ ಮಂತ್ರಿಗಳು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ನೋಡಿ ಒಂದು ಮೈಲಿಯಿಂದ ತರಬೇಕಾಗಿದ್ದ ಕಲ್ಲನ್ನು ಮೂರು ಮೈಲಿಯಿಂದ ತರಬೇಕಾಯಿತು, ಹಾಗೆ ತಂದಿದ್ದಾರೆಂದು ಹೇಳಿದ್ದರೆ ಒಪ್ಪಬಹುದು, ಆದರೆ ಅದಕ್ಕೆ ಮಂತ್ರಿಗಳ ಉತ್ತರ ಸಮಂಜಸವಾಗಿಲ್ಲ. ಆರ್ಬಿಟ್ರೇಟರ್ ಹೆಚ್ಚು ಕೊಡಬೇಕೆಂದು ಹೇಳಿದರು, ಕೊಟ್ಟೆವು ಎಂದು ಹೇಳಿದರು. "ರೇವಣಸಿದ್ದಪ್ಪನವರು ಕವಿಗಳಾಗಬೇಕಾಗಿತ್ತು, ಆದರೆ ಅವರು ಆಗಲಿಲ್ಲ, ಕವಿತ್ವ ಕಟ್ಟಿಕೊಂಡು ಹೇಳುತ್ತಾರೆ" ಎಂದು ಹೇಳಿದರು, ಚೀಫ್ ಇಂಜಿನಿಯರ್‌ಗೆ ಆಪರೇಷನ್ ಆಗಿ ಆಸ್ಪತ್ರೆಯಲ್ಲಿದ್ದರು, ಕಂಟ್ರಾಕ್ಟರು ಒಬ್ಬರು ಡಾಕ್ಟರನ್ನು ಜೊತೆಗೆ ಕರೆದುಕೊಂಡು ಜೀಪ್ ನಲ್ಲಿ ಹೋಗಿ ೬೪ಲಕ್ಷ ರೂಪಾಯಿ ಕೊಡಬಹುದೆಂದು ಹೇಳಿ ಸ್ಯಾಂಕ್ಷನ್ ಮಾಡಿ, ನಿಮಗೆ ನಾಲ್ಕು ಲಕ್ಷರೂಪಾಯಿ ಕೊಡುತ್ತೇವೆಂದು ಹೇಳಿದರು. ಆದರೆ ಅವರು 'ನಾನು ಸಾಯುವಾಗ ಅನ್ಯಾಯ ಮಾಡುವುದಿಲ್ಲವೆಂದು ಹೇಳಿದರು. ತನಗೆ ಬರಬೇಕಾದ ಹಣ ಬರಲಿಲ್ಲವಲ್ಲಾ ಇವರಿಂದ, ಇವರೇಕೆ ಬದುಕಬೇಕು, ಎಂದು ಆ ಡಾಕ್ಟರು ಅವರನ್ನು ಸಾಯಿಸಿದರೋ ಏನೋ ಎಂಬ ಸಂಶಯ ಬರುತ್ತದೆ. ಇಂಥ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

influence ಬಂದದ್ದು ನಿಜ. ಅಲ್ಲವೆಂದು ಯಾರಾದರೂ challenge ಮಾಡಲಿ ನಾನು ಹೈ ಕೋರ್ಟಿಗೆ ರಿಟ್ ಹಾಕಲು ಸಾರ್ವಜನಿಕರು ಹಣ ಕೊಟ್ಟರೆ ನಾನು ಹಾಕಲು ಸಿದ್ಧನಾಗಿದ್ದೇನೆ. ದೇಶದ ಹಣ ೬ಳ ಲಕ್ಷ ರೂಪಾಯಿ ಹೋಗಿರುವುದನ್ನು ಲಘುವಾಗಿ ಭಾವಿಸ ಬಾರದು.

ಪಾನ ನಿರೋಧವನ್ನು ರದ್ದುಮಾಡಿ ಎಂದು ಹೇಳಿ ದರೆ, ಅದು ದೇಶದ್ರೋಹವೆಂದು ಅವರು ಕರೆಯ ಬಹುದು. ಆದರೆ ವಾಸ್ತವವಾಗಿ ನೋಡಿದರೆ ಪಾನ ನಿರೋಧ ಯಶಸ್ವಿಯಾಗಿಲ್ಲ ಎಲ್ಲಿಯೂ ಇದಕ್ಕೆ ಬದಲು ಎಲ್ಲರನ್ನೂ ವಿದ್ಯಾವಂತರನ್ನಾಗಿ, ಬುದ್ಧಿವಂತರನ್ನಾಗಿ ಮಾಡಲಿ. ಎಲ್ಲರೂ ಕುಡಿಯುವುದಿಲ್ಲ. ಯಾರೋ ಕೆಲವರು, ಸನ್ನಿವೇಶಗಳ ದೆಸೆಯಿಂದ ಕುಡಿಯು ತ್ತಾರೆ. ಹೀಗಿಲ್ಲ ಇರುವಾಗ ಒಂದು ತತ್ವಕ್ಕೋಸ್ಕರ ಗಾಗಿದ್ದೇವೆಂದು ಹೇಳಿದರೆ ಹೇಗೆ? ನಿಜವಾದ ವಿದ್ಯಾ ವಂತರೂ ಬುದ್ಧಿವಂತರೂ ಕುಡಿಯುವುದಿಲ್ಲ. ತತ್ವಗಳು ಬೇಕಾದಷ್ಟಿವೆ, ಆದರೆ ನಡೆದುಕೊಳ್ಳಲು ಸಾಧ್ಯವಾದ ತತ್ವಗಳನ್ನನುಸರಿಸಬೇಕು. ನಡೆಯುವ ಗಾಡಿಯಲ್ಲಿ ಹೋಗುವುದನ್ನು ಬಿಟ್ಟು ನಡೆಯದೇಯಿರುವ ಗಾಡಿ ಯಲ್ಲಿ ಕುಳಿತರೆ ಹೇಗೆ ಮುಂದೆ ಹೋಗುವುದಕ್ಕೆ ಸಾಧ್ಯ? ನಡೆಯದೇಯಿರುವ ತತ್ವಕ್ಕೆ ಕಟ್ಟುಬಿದ್ದರೆ ಹೇಗೆ? ನೀರಾ ಕೇಂದ್ರಗಳನ್ನು ತೆರೆಯುವುದು, ಆಮೇಲೆ ಅವುಗಳಲ್ಲಿ ಸೇಂದಿ ಮಾಡಿ ಮಾರುತ್ತಾರೆಂದು ಸರ್ಕಾರದವರು ಮುಚ್ಚಿಸುವುದು. ಆಮೇಲೆ ಚುನಾ ವಣೆಯ ಕಾಲದಲ್ಲಿ ಮತ್ತೆ ತೆರೆಯಲು ಅವಕಾಶ ಕೊಡುವುದೇ? ದೇಶದಲ್ಲಿ ಈ ಹೊತ್ತು ಬೆಂಗಳೂರು ಮೈಸೂರು ಎರಡು ಡಿಸ್ಟ್ರಿಕ್ಟುಗಳಲ್ಲಿ ವಿನಾ ಬೇರೆಕಡೆ ಪಾನ ನಿರೋಧವಿದ್ದರೂ ಹಿಂದೆ ಬರುತ್ತಿದ್ದ ಎಕ್ಸೈಜು ಹಣಕ್ಕಿಂತ ಸ್ವಲ್ಪ ಕಡಮೆ ಬರಬಹುದು. ಹೀಗಿದ್ದರೂ ಹೆಚ್ಚು ಹಣ ಬರಲು ಅವಕಾಶವಿಲ್ಲದಂತಾಗಿದೆ. ಗೋವರ್ಧನ್ ಕಂಪೆನಿಯವರು, ಸೇಂದಿ ಹರಾಜಾದಾಗ ಅವರ ಮುಂದೆ ಇನ್ನಾರು ಕೂಗಬಾರದೆಂದು ಮಾಡಿದ್ದಾರೆ, ಸೇಂದಿ ಕಂಟ್ರಾಕ್ಟರುಗಳು ಸೇರಿ ಈ ಕಂಪೆನಿ ಮಾಡಿ ಕೊಂಡಿದ್ದಾರೆ. ಇವರ ಮುಂದೆ ಸಣ್ಣ ಪುಟ್ಟ ಕಂಟ್ರಾಕ್ಟರುಗಳು ಯಾರೂ ಕೂಗುವಹಾಗಿಲ್ಲ. ಸಿಟಿ ಮತ್ತು ಕಂಟೋನ್ಮೆಂಟ್ ಪ್ರದೇಶ ಒಟ್ಟಿಗೆ ಸೇರಿಸಿ ಹರಾಜು ಹಾಕುತ್ತಾರೆ. ಈ ಕಂಪನಿಯವರೇ ಬಿಡ್ ಕೂಗಿ, ಇದನ್ನು ಪಡೆದು ಆಮೇಲೆ ಎಲ್ಲರೂ ಹಂಚಿ ಕೊಳ್ಳುತ್ತಾರೆ. ಒಟ್ಟಿಗೆ ಹರಾಜು ಮಾಡುವ ಬದಲು ಬೇರೆ ಬೇರೆ ಅಂಗಡಿಸಿ, ಸ್ವಲ್ಪ ಸ್ವಲ್ಪವಾಗಿ ಹರಾಜು ಮಾಡಿದರೆ ಒಳ್ಳೆಯದು. ಶರಾವತಿಯ ಸಂಬಂಧದಲ್ಲಿ lowest tender ಗೆ ಏಕೆ ಕೊಡಲಿಲ್ಲವೆಂದು ಕೇಳಿದರೆ, ಅವನಿಗೆ ಕೆಲಸಮಾಡಲು ಶಕ್ತಿಯಿರಲಿಲ್ಲ ಎಂದು ಹೇಳುತ್ತಾರೆ. ಟೆಂಡರಿನಲ್ಲಿ ಇರುವ ಷರತ್ತಿನ ಪ್ರಕಾರ ಯಾರಾದರೂ ನಡೆದುಕೊಳ್ಳಬೇಕು. ಹಾಗೆ ನಡೆಯ ದಿದ್ದರೆ ಜುಲ್ಮಾನೆ ಹಾಕಬಹುದು. ಹೀಗಿರುವಾಗ ಏಕೆ ಅಂತ್ಯಂತ ಕಡಮೆ ರೇಟ್ ಕೊಟ್ಟಿದ್ದವನಿಗೇಕೆ ಕೊಡಲಿಲ್ಲ ವೆಂದರೆ ಅವನಿಗೆ ಆ ಕೆಲಸಮಾಡಲು ಶಕ್ತಿಯಿಲ್ಲವೆಂದು ಹೇಳುತ್ತಾರೆ. ಅವನು ಇವರ ಮನೆಗಳಿಗೆ ಹೋಗಿ ಹಣ್ಣು ಕಾಯಿ ಕೊಡಬೇಕ ಗಿತ್ತೆ? ಗ್ರಾಮಾಂತರ ಗಳಲ್ಲಿ ಸರ್ಕಾರಿ ಹೈಸ್ಕೂಲುಗಳನ್ನು ಕೇಳಿದರೆ ಕೊಡುವುದಿಲ್ಲವೆಂದು ಸರ್ಕಾರದವರು ಹೇಳಿದ್ದರು. ಆದರೆ ಚುನಾವಣೆಯ ಕಾಲದಲ್ಲಿ ೧೭ ಹೈಸ್ಕೂಲು ಗಳನ್ನು ಕೊಟ್ಟರು, ಇದಕ್ಕೇನು ಹೇಳುವುದು? ಈ ಮಂತ್ರಿಮಂಡಲದಲ್ಲಿ ತುಮಕೂರಿಗೆ ಕೀರ್ತಿ ತರುವ ಒಬ್ಬರು ಮಂತ್ರಿಗಳಿದ್ದಾರೆ. ಈಗ ಹಾಕಿರುವ ತೆರಿಗೆ ಗಳನ್ನು ವಜಾಮಾಡಲಿ, ನನ್ನ ಸಲಹೆಯನ್ನು ಕೇಳಲಿ ಬೇಕಾದರೆ ತೆರಿಗೆಗಳಿಲ್ಲದೆ ನಾನು ನಡೆಸುತ್ತೇನೆ.

ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗ ಳೂರು).—ಸ್ವಾಮಿ, ನಮ್ಮ ಮುಂದಿರುವ ಈ Resources and Economy Committee ವರದಿಯ ಮೇಲೆ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ದೇಶದ ಆಡಳಿತ ಮತ್ತು ಆರ್ಥಿಕಸ್ಥಿತಿ ಉತ್ತಮವಾಗ ಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ಸಲಹೆ ಮಾಡಲು ಸರ್ಕಾರದವರು ಇವರೆಗೂ ನೇಮಕಮಾಡಿ ರುವ ಅನೇಕ ಸಮಿತಿಗಳು ವರದಿಗಳನ್ನು ಸಲ್ಲಿಸಿವೆ. ಆದರೆ ಆ ವರದಿಗಳಲ್ಲಿ ಸೂಚಿಸಿದ್ದ ಸಲಹೆಗಳು ಎಷ್ಟು ಮಟ್ಟಿಗೆ ಕಾರ್ಯಗತವಾಗುತ್ತಿವೆ ಎನ್ನುವ ವಿಚಾರ ದಲ್ಲಿ ಎಲ್ಲರಲ್ಲಿಯೂ ಅನುಮಾನವಿದೆ. ಆದರೂ ಈ ಸಮಿತಿಯವರು ಬಹಳ ಯೋಚನೆಮಾಡಿ ದೇಶದ ಹಿತ ದೃಷ್ಟಿಯಿಂದ, ಉಳಿತಾಯದ ದೃಷ್ಟಿಯಿಂದ ಹಲವಾರು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವರದಿ ಯಲ್ಲಿ ದೇಶದಲ್ಲಿರತಕ್ಕ ನಾನಾ ಇಲಾಖೆಗಳಲ್ಲಿ ಅನಾ ವಶ್ಯಕವಾಗಿರುವ ಕೆಲವನ್ನು ಕಡಮೆ ಮಾಡಬೇಕೆಂಬ ಸಲಹೆ ಮಾಡಿದ್ದಾರೆ. ಅಂಥ ಇಲಾಖೆಗಳನ್ನು ಪ್ರಾರಂಭ ಮಾಡಿದ್ದಾಯಿತು, ಅವುಗಳನ್ನು ಈಗ ತೆಗೆದು ಹಾಕುವುದರಿಂದ ಉಂಟಾಗತಕ್ಕ ನಿರುದ್ಯೋಗ ಸಮಸ್ಯೆಯನ್ನು ಸರ್ಕಾರ ಎದುರಿಸಬೇಕಾದ ಪ್ರಶ್ನೆ ಬರುತ್ತದೆ. ಅನಾವಶ್ಯಕವಾದ ಇಲಾಖೆಗಳೂ ಕೆಲಸ ಗಳೂ ಇರುವುದು ನಿಜ. ದೇಶದ ಆದಾಯ ಹೆಚ್ಚ ಬೇಕಾದರೆ ಜನರಮೇಲೆ ತೆರಿಗೆ ಹಾಕಬೇಕೆಂದೂ ಈ ಸಮಿತಿಯವರು ಸಲಹೆ ಮಾಡಿದ್ದಾರೆ. ಆದರೆ ದೇಶದ ಜನತೆ ತೆರಿಗೆಗಳನ್ನು ಹೊರಲು ಎಷ್ಟುಮಟ್ಟಿಗೆ ಶಕ್ತಿ ಯನ್ನು ಹೊಂದಿದೆ, ಜನತೆಯ ಆದಾಯ, ಅವರ ಆರ್ಥಿಕ ಸ್ಥಿತಿ ಉತ್ತಮವಾಗಿದೆಯೆ ಎನ್ನುವುದನ್ನು ಯೋಚನೆ ಮಾಡಬೇಕಾದುದು ಅಗತ್ಯ, Land Revenue Surcharge ಹಾಕಬೇಕೆಂದು ಸಲಹೆ ಮಾಡಿದ್ದಾರೆ. ಹಾಗೆಮಾಡಿದರೆ ರೈತರಿಗೆ ಬಹಳ ಜಾಸ್ತಿಯಾ ಗುತ್ತದೆ. ಇದನ್ನು ರೈತರಮೇಲೆ ಹೊರಿ ಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಮತ್ತು ಅಧಿಕಾರಿಗಳನ್ನು ವರ್ಗ ಮಾಡುವ ವಿಷಯದಲ್ಲಿ ಈ ಕಮಿಟಿಯವರು ಒಂದು ಉಪಯುಕ್ತ ವಾದ ಸಲಹೆ ಮಾಡಿದ್ದಾರೆ. ಅಧಿಕಾರಿಗಳು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ 6 ತಿಂಗಳಿ ಗೊಂದುಸಾರಿ ವರ್ಗ ಮಾಡುವುದರಿಂದ ಅವರುಗಳಿಗೆ ಆಗತಕ್ಕ ಕಷ್ಟ, ಅವರಿಗಾಗಿ ಹೆಚ್ಚಿಗೆ ಖರ್ಚಾಗುವ ಟಿ. ಎ. ಎಲ್ಲವನ್ನೂ ಅವರು ತಿಳಿಸಿದ್ದಾರೆ. ಈಗ ನಾವು ನೋಡಿರುವಂತೆ ಎಷ್ಟೋ ಅಧಿಕಾರಿಗಳು ಕೆಲವು ದಿವಸ ಒಂದು ಜಾಗದಲ್ಲಿರುವುದಕ್ಕೆ ಅವಕಾಶ ವಿರುವುದಿಲ್ಲ. ಅವರು ವರ್ಗ ಎಂದು ಕೇಳಿದ ಕೂಡಲೆ ಎಂ. ಎಲ್. ಎ. ಗಳನ್ನು ಬಂದು ತೊಂದರೆ ಪಡಿಸು ತ್ತಾರೆ. ಅವರ ಮಕ್ಕಳು ಮರಿಗಳ ವಿದ್ಯಾಭ್ಯಾಸಕ್ಕೆ ಆಗತಕ್ಕ ಅನ್ಯಾಯ, ಅವರುಗಳಿಗೆ ಆಗತಕ್ಕ ಕಿರುಕುಳ ಗಳನ್ನು ನೋಡಿದರೆ ಯಾರಿಗಾದರೂ ಕನಿಕರವುಂಟಾ ಗುತ್ತದೆ. ಇನ್ನೊಂದು ವಿಚಿತ್ರವೆಂದರೆ ಬಹು ಅಧಿಕಾ ರಿಗಳು ಚೆನ್ನಾಗಿಲ್ಲವೆಂದು ಗೊತ್ತಾದರೂ ಅವರ ವಿಷಯದಲ್ಲಿ ಬೇಗ ವರ್ಗ ಮಾಡುವ ಕ್ರಮ ತೆಗೆದು ಕೊಳ್ಳುವುದಿಲ್ಲ. ಅದೇ ಉತ್ತಮವಾದ ದಕ್ಷರಾದ

ಅಧಿಕಾರಿಗಳನ್ನು ನಾವು ಬೇಡವೆಂದರೂ ವರ್ಗ ಮಾಡಿಬಿಡುತ್ತೀರಿ ಈ ನೀತಿಯನ್ನು ನೋಡಿದರೆ ಅಧಿಕಾರಿಗಳು 'ನಾವೇಕೆ ದಕ್ಷತೆಯಿಂದ ಕೆಲಸ ಮಾಡಬೇಕು; ಎಷ್ಟು ಕಷ್ಟಪಟ್ಟರೂ ಸುಖವಿಲ್ಲ. ಎಲ್ಲವೂ ಜಾತಿಯ ಅಭಿಮಾನದ ಮೇಲೆ ನಡೆಯುತ್ತಿದೆ' ಎಂದು ಅನುಮಾನ ಪಡುತ್ತಿದ್ದಾರೆ. ಆದ್ದರಿಂದ ಚೆನ್ನಾಗಿ ದೇಶದ ಕೆಲಸ ಕಾರ್ಯಗಳನ್ನು ಮಾಡುವಂಥವರನ್ನು, ನಿಷ್ಠೆಯಿಂದ ದಕ್ಷತೆಯಿಂದ ಇರುವವರನ್ನು ಸರ್ಕಾರ ನೋಡಿ ಅವರ ವಿಷಯದಲ್ಲಿ ಹೆಚ್ಚಿನ ನಿಗಾ ಕೊಡುವುದು ಅವಶ್ಯಕ. ಅನಾವಶ್ಯಕವಾಗಿ ವರ್ಗಾವರ್ಗಿ ಮಾಡಕೂಡದೆಂದು ಹೇಳುತ್ತೇನೆ. ನನಗೆ ತಿಳಿದು ಬಂದಿರುವಂತೆ ಫಸ್ಟ್ ಡಿವಿಜನ್ ಮತ್ತು ಸೆಕೆಂಡ್ ಡಿವಿಜನ್ ಕ್ಲಾರ್ಕುಗಳನ್ನು ಬೆಳಗಾವಿನಿಂದ ಚಿಕ್ಕಮಗಳೂರಿಗೆ ವರ್ಗ ಮಾಡಿದ್ದಾರೆ. ಇವರುಗಳು ಹೀಗೆ ವರ್ಗವಾದರೆ ಎರಡು ಕಡೆ ಸಂಸಾರ ಮಾಡುವುದು ಹೇಗೆ. ಬೆಳಗಾವಿನಲ್ಲಿ ಮರಾಠಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮಕ್ಕಳು ಚಿಕ್ಕಮಗಳೂರಿಗೆ ಬಂದಮೇಲೆ ಕನ್ನಡ ಕಲಿಯಬೇಕೆಂದರೆ ಹೇಗೆ ? ಆದ್ದರಿಂದ ಸರ್ಕಾರದವರು ಫಸ್ಟ್ ಡಿವಿಜನ್ ಮತ್ತು ಸೆಕೆಂಡ್ ಡಿವಿಜನ್ ಕ್ಲಾರ್ಕುಗಳನ್ನು ಈ ರೀತಿ ವರ್ಗ ಮಾಡುವ ಪದ್ಧತಿಯನ್ನು ನಿಲ್ಲಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈ ಸಮಿತಿಯವರು ಹೀಗೆ ಇನ್ನೂ ಅನೇಕ ಒಳ್ಳೆಯ ಸಲಹೆಗಳನ್ನು ಮಾಡಿದ್ದಾರೆ. ಅರಣ್ಯದ ವಿಷಯದಲ್ಲಿ ಹೇಳುತ್ತಾ, ಅರಣ್ಯ ಇಲಾಖೆಯಲ್ಲಿ 'ಸ್ಪೆಷಲ್ ದರಖಾಸ್ತ್ ಸ್ಕೀಮು' ಎಂದು ಹೇಳಿ ರೈತರ ಅನುಕೂಲಕ್ಕೆಂದು ಸರ್ಕಾರದವರು ಮಾಡಿದ್ದಾರೆ. ಇದರಿಂದ ಏನೇನೂ ಅನುಕೂಲ ರೈತರಿಗೆ ಆಗಿಲ್ಲ. ಸರ್ಕಾರಕ್ಕೆ ಖರ್ಚು ಹೆಚ್ಚು ಮಾಡುವ ವಿಷಯ ಮಾತ್ರವಾಗಿದೆ ಅಷ್ಟೆ.

ಸರ್ಕಾರದವರು ಈ ಹಿಂದೆ ಜಮೀನಿಲ್ಲದ ರೈತರಿಗೆ lease ಬೇಸಿಸ್ ಮೇಲೆ 5 ವರ್ಷಕ್ಕೆಂದು ಎಷ್ಟೋ ಭೂಮಿಯನ್ನು ಕೊಟ್ಟಿರುತ್ತಾರೆ. ಇಂದು ಯಾರಾದರೂ ಅವುಗಳನ್ನು ಹೋಗಿ ನೋಡಲಿ. ಜಮೀನು ಪಡೆದಿರುವವರು ಅಲ್ಲಿದ್ದ ಮರಗಳನ್ನೆಲ್ಲಾ ಕಡಿದು ಮಾರಿಬಿಟ್ಟು, ಇನ್ನೂ ಬೆಳೆಯಬಹುದಾಗಿದ್ದಂಥ ಸಣ್ಣ ಪುಟ್ಟ ಗಿಡಮರಗಳನ್ನು ಹಾಳುಮಾಡಿದ್ದಾರೆ. ಒಬ್ಬರಾಗಲೀ ಸಾಗುವಳಿ ಮಾಡಿರುವುದನ್ನು ನಾನು ಕಂಡಿಲ್ಲ. ಯಾರಾದರೂ ಆಫೀಸರನ್ನು ಕಳುಹಿಸಿ ಈ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಲಿ. ಇಲ್ಲದಿದ್ದರೆ ನಿಮ್ಮ ಅಧಿಕಾರಿಗಳಿಂದ ಇದುವರೆಗೆ ಕೊಟ್ಟಿರುವ ಜಮೀನಿನಿಂದ ಎಷ್ಟುಮಟ್ಟಿಗೆ ಉತ್ಪತ್ತಿ ಜಾಸ್ತಿಯಾಗಿದೆಯೆಂಬ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಡಿ. ನಿಜವಾಗಿಯೂ ಈ ಜಮೀನುಗಳನ್ನು ಕೊಟ್ಟಿದ್ದರಿಂದಾಗಿ ಹೆಚ್ಚು ಉತ್ಪತ್ತಿಯಾಗಿಲ್ಲ. ಸರ್ಕಾರ ಈ ಬಗ್ಗೆ ವರದಿಯನ್ನು ತರಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಭದ್ರಾವತಿ ಕಾರ್ಖಾನೆಗೆ ಇದ್ದಿಲನ್ನು ಒದಗಿಸಿಕೊಡುವುದಕ್ಕಾಗಿ ಕಾಗೇನಹಳ್ಳಿ ಕಾಡಿನಿಂದ 500 ಎಕರೆಗಳನ್ನು ಕೊಟ್ಟಿದ್ದಾರೆಂದು ಕೇಳಿಬಂತು. ಈ ಕಾಡಿನಲ್ಲಿ ಕೊಟ್ಟು ಅಲ್ಲಿರತಕ್ಕ ಸಣ್ಣ ಪುಟ್ಟ ಮರಗಳನ್ನು ಕಡಿಸಿದರೆ ಇನ್ನು ಹತ್ತಾರು ವರ್ಷಗಳಲ್ಲಿ ಅಲ್ಲಿ ಒಂದು ಮರವೂ ಇರುವುದಿಲ್ಲ. ಈಗ ನಿಮಗೆಲ್ಲಾ ಗೊತ್ತಿರುವ ಹಾಗೆ, ಲಕ್ಕವಳ್ಳಿ ಕಾಡೆಲ್ಲಾ ಪೂರ್ಣ ನಾಶವಾಗಿದೆ. ಈ ರೀತಿ ಮಾಡುವುದು ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಸರ್ಕಾರದವರು ಇದರ ಬಗ್ಗೆ ಪುನರ್ವಿಮರ್ಶಿಸಬೇಕೆಂದು ಹೇಳುತ್ತೇನೆ.

ಕಮಿಟಿಯವರು ಮಾಡಿರುವುದರಲ್ಲಿ ಇನ್ನೊಂದು ಉತ್ತಮವಾದ ಸಲಹೆಯೆಂದರೆ ಕೋಕೋ ರಬ್ಬರ್ ಪ್ಲಾಂಟೇಷನ್‌ಗಳನ್ನು ಎಬ್ಬಿಸುವುದು. ಈ ವಿಚಾರದಲ್ಲಿ ನಾನು ಚಿಕ್ಕಮಗಳೂರಿನ ಅಧಿಕಾರಿಗಳ ಅಭಿಪ್ರಾಯವನ್ನು ಕೇಳಿದ್ದೇನೆ. ಅವರೆಲ್ಲರೂ ಈ ಸಲಹೆಯನ್ನು ಮೆಚ್ಚಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಇಂಥ ಪ್ಲಾಂಟೇಷನ್ ಏಳಿಸಲು ಒಂದು ಲಕ್ಷಕ್ಕೂ ಮೀರಿದಷ್ಟು ಎಕರೆಗಳಷ್ಟು ಜಮೀನಿದೆ. ಆದ್ದರಿಂದ ಈ ಸಲಹೆಯನ್ನು ಕಾರ್ಯಗತಮಾಡಬೇಕೆಂದು ನಾನು ಸೂಚಿಸುತ್ತೇನೆ.

ತಾಲ್ಲೂಕು ಬೋರ್ಡ್ ರಸ್ತೆಗಳ ವಿಷಯದಲ್ಲಿ ಒಂದು ಉತ್ತಮವಾದ ಸೂಚನೆ ಮಾಡಿದ್ದಾರೆ. ಒಂದು ಮೈಲಿ ರಸ್ತೆಯನ್ನು ನಡೆಸಿಕೊಂಡು ಬರುವುದಕ್ಕೆ 200 ರೂಪಾಯಿಗಳನ್ನು ಮತ್ತು ಶೇಕಡ 50 ರಷ್ಟು ಗ್ರಾಂಟನ್ನೂ ಕೊಡಬೇಕೆಂದೂ ಸಮಿತಿಯವರು ಸಲಹೆ ಮಾಡಿದ್ದಾರೆ. ಇದೊಂದು ಪ್ರಾಮುಖ್ಯವಾದ ವಿಷಯ. ಏಕೆಂದರೆ ತಾಲ್ಲೂಕು ಬೋರ್ಡುಗಳ ಹಣದ ಪರಿಸ್ಥಿತಿ ಚೆನ್ನಾಗಿಲ್ಲ. ಹಳ್ಳಿಯವರಿಗೆ ತಿರುಗಾಡುವುದಕ್ಕೆ ಮಾರ್ಗ ಸೌಕರ್ಯಗಳು ಕಡಮೆ. ಈ ಸಲಹೆಯನ್ನು ಅಂಗೀಕರಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಉತ್ತಮ ಸಲಹೆಯೆಂದರೆ, ದೇಶದಲ್ಲಿ ಉತ್ತಮವಾದ ಅಧಿಕಾರಿಗಳನ್ನು, 10 ವರ್ಷಗಳ ಕಾಲ ನಾನಾ ಇಲಾಖೆಗಳಲ್ಲಿದ್ದು General Administration ಆಡಳಿತ ವ್ಯವಹಾರ ಚೆನ್ನಾಗಿ ಬಲ್ಲವರಿಗೇ independent ಆಗಿ ಡಿಸ್ಟ್ರಿಕ್ಟ್ ಚಾರ್ಜ್ ಕೊಡಬೇಕೆಂದು ಸೂಚಿಸಿರುತ್ತಾರೆ. ಇದು ಒಳ್ಳೆಯ ಸೂಚನೆ. ಆಡಳಿತ ತಿಳಿದಿರುವವರಿಗೆ ಮಾತ್ರ ಹೀಗೆ independent charge ಕೊಡುವುದಾದರೆ ದೇಶಕ್ಕೆ ಅನುಕೂಲವಾಗುತ್ತದೆ. ರಾಜ್ಯಭಾರ ನಡೆಸತಕ್ಕ ಸರ್ಕಾರಕ್ಕೂ ಗೌರವ ಬರುತ್ತದೆ. ಹಾಗಿಲ್ಲದೆ ಅನುಭವವಿಲ್ಲದ, ಕಾಂಪಿಟಿಟಿವ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದ ಅಧಿಕಾರಿಗಳನ್ನು ಜಿಲ್ಲಾ ಚಾರ್ಜುಗಳಿಗೆ ಹಾಕಿದ್ದೇ ಆದರೆ ಖಂಡಿತ ಜಿಲ್ಲೆಯ ಆಡಳಿತ ಸುಗಮವಾಗಿ ನಡೆಯುವುದಿಲ್ಲ. ಇಂಥವುಗಳೆಲ್ಲಾ ದೇಶದ ಹಿತದೃಷ್ಟಿಯಿಂದ ನಡೆಯುವಂಥವುಗಳಾಗಿರಬೇಕೇ ಹೊರತು, ಇವುಗಳಲ್ಲೆಲ್ಲಾ ಜಾತಿ ಮತ ವಿಷಯಗಳಿಗೆ ಮನಗೊಡುವುದಲ್ಲ.

ಕೋಆಪರೇಟಿವ್ ಸಂಸ್ಥೆಗಳ ವಿಷಯ ಹೇಳುವುದಾದರೆ, ಈ ಸಂಸ್ಥೆಗಳ ಆಡಿಟ್ ಕೆಲಸವನ್ನು ಸ್ಟೇಟ್ ಅಕೌಂಟ್ಸ್ ಇಲಾಖೆಗೆ ವರ್ಗಾಯಿಸಬೇಕೆಂದು ಹೇಳುತ್ತೇನೆ. ನೀವೀಗ ಪ್ರತಿಯೊಂದು ವಿಷಯಕ್ಕೂ ಒಂದು ಸೊಸೈಟಿಯನ್ನು ಸ್ಥಾಪಿಸುತ್ತಿದ್ದೀರಿ. ಲೆದರ್ ಸೊಸೈಟಿ, ಗಾಣಿಗರ ಸೊಸೈಟಿ, ಇತ್ಯಾದಿ ಅನೇಕ ತರದ ಸೊಸೈಟಿಗಳು, ಹುಟ್ಟಿಕೊಂಡಿವೆ. ಇವುಗಳ ಮ್ಯಾನೇಜ್‌ಮೆಂಟ್ ವ್ಯವಸ್ಥೆ ಸರಿಯಾಗಿಲ್ಲದಿದ್ದರೆ, ಈ ಸೊಸೈಟಿಗಳಿಗೆ ಸರ್ಕಾರದವರು ಕೊಟ್ಟಿರತಕ್ಕ ನೆರವು ವಾಪಸು ಬರತಕ್ಕ ನಂಬಿಕೆಯಿರಲಾರದು. ಮೋಸ ಮಾಡುವಂಥ ಸೆಕ್ರೆಟೆರಿಯವರುಗಳಾಗಿ ಬಿಟ್ಟರೆ ಎಂ.ಎಲ್.ಎ. ಗಳಿಗೂ ಸಿಕ್ಕದೇ ತಪ್ಪಿಸಿಕೊಳ್ಳುತ್ತಾರೆ ಇಂಥವರು ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕೊಡಕೂಡದು. ಆದ್ದರಿಂದ ಆಡಿಟ್ ಮಾಡುವುದನ್ನು ಸ್ಟೇಟ್ ಅಕೌಂಟ್ಸ್ ಇಲಾಖೆಗೆ ವರ್ಗಾ ಮಾಡುವುದು ಒಳ್ಳೆಯದು. ಕೋ-ಆಪರೇಟಿವ್ Movement ನಿಂದ ದೇಶಕ್ಕೆ ಒಳ್ಳೆಯದಾಗುತ್ತದೆಂದು ಹೇಳಿ ನೀವು ಭಾವಿಸಿದ್ದರೆ ಇಂಥ ದೇಶದ್ರೋಹ ಮಾಡುವ ಜನರಿಂದ ಅನ್ಯಾಯವಾಗುತ್ತಿದೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಆದ್ದರಿಂದ ಸರ್ಕಾರದವರು ಈ ಬಗ್ಗೆ ನಿಗಾ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮತ್ತು ಸರ್ಕಾರದವರು ನಡೆಸತಕ್ಕ ಸೊಸೈಟಿಗಳ ವಿಷಯದಲ್ಲಿ ಮೇಲ್ವಿಚಾರಣೆ ಉನ್ನತ ಮಟ್ಟದ್ದಾಗಿರಬೇಕು ಹಾಗೂ ಮಾರ್ಗದರ್ಶಕವಾಗಿರಬೇಕೆಂದು ಹೇಳುತ್ತೇನೆ.

ಆಮೇಲೆ ಬೇಸಿಕ್ ಎಜುಕೇಷನ್ ಮತ್ತು ಮಲ್ಟಿ ಪರ್ಪಸಸ್ ಹೈಸ್ಕೂಲುಗಳ ವಿಷಯ ಹೇಳಿದ್ದಾರೆ. ನನಗೆ ಗೊತ್ತಿರುವ ಒಂದು ನಿದರ್ಶನ ಹೇಳುವುದಾದರೆ ಚಿಕ್ಕಮಗಳೂರಿನಲ್ಲಿದ್ದ ಹೈಸ್ಕೂಲನ್ನು ಮಲ್ಟಿ ಪರ್ಪಸ್ ಹೈಸ್ಕೂಲಾಗಿ ಪರಿವರ್ತನೆ ಮಾಡಿ ಅಲ್ಲಿಗೆ 6 ಲಕ್ಷ ರೂಪಾಯಿಗಳ ಮೆಷಿನ್‌ಗಳನ್ನೂ, ಸಾಮಾನುಗಳನ್ನೂ ತಂದುಹಾಕಿದ್ದಾರೆ. ಆದರೆ ಅವುಗಳನ್ನು ಇದುವರೆಗೂ ಉಪಯೋಗಿಸಿರುವುದನ್ನು ನಾನು ಕಂಡಿಲ್ಲ. ಹೀಗಾದರೆ ಮಲ್ಟಿಪರ್ಪಸ್ ಸ್ಕೂಲಿನ ಉದ್ದೇಶವೇನಾಯಿತು ? ದೇಶದ ದುಡ್ಡನ್ನು ಹಾಳುಮಾಡಿದಂತಲ್ಲವೆ ? ಆ ಮೆಷಿನ್‌ಗಳು ಕೆಲಸಮಾಡುವುದನ್ನು ತೋರಿಸಿಕೊಡುವವರೇ ಇಲ್ಲ ? ಹೀಗಾಗಿ ಈ ಸ್ಕೀಮು ಯಶಸ್ವಿಯಾಗುತ್ತದೆಂದು ನಂಬಿಕೆಯೇ ಇಲ್ಲದಂತಾಗಿದೆ. ಆದ್ದರಿಂದ ಈ ವಿಷಯವನ್ನು ಪುನರಾಲೋಚನೆ ಮಾಡುವುದು ಅವಶ್ಯಕವೆಂದು ಹೇಳುತ್ತೇನೆ.

ಆಮೇಲೆ, ಕೆಲವು ಅನಾವಶ್ಯಕವಾಗಿರುವ ಹುದ್ದೆಗಳನ್ನಿಟ್ಟುಕೊಂಡಿರುವ ವಿಷಯದಲ್ಲಿ ಮತ್ತು ಸರ್ಕಾರಕ್ಕೆ ಬರತಕ್ಕ ಉತ್ಪತ್ತಿ ಕಡಿಮೆಯಾಗಿರುವ ವಿಷಯದಲ್ಲಿ ಪಾನ ನಿರೋಧವನ್ನು ಹೇಳಬೇಕು. ಎಲ್ಲ ಸದಸ್ಯರೂ ಈ ವಿಚಾರದಲ್ಲಿ ಹೇಳಿದ್ದಾರೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಇದನ್ನು ಹೇಳುತ್ತಿದ್ದೆವು. ಪಾನ ನಿರೋಧವನ್ನು ಜಾರಿಗೆ ತರದೆ ಇದ್ದರೆ ದೇಶದ ಜನರು ಉದ್ಧಾರವಾಗುವುದಿಲ್ಲವೆಂದು ಹೇಳುತ್ತಿದ್ದೆವು. ಆದರೆ ಈಗಲೋ ಪರಿಸ್ಥಿತಿ ಮತ್ತೊಂದು ರೀತಿಯಲ್ಲಿ ಭೀಕರವಾಗಿದೆ. ಪಾನ ನಿರೋಧದಿಂದ ದೇಶ ಉದ್ಧಾರವಾಗುತ್ತಿಲ್ಲ. ಆದ್ದರಿಂದ ಈಗ ಆದರಿಂದ, ಯಾರಿಗಾದರೂ ಅನ್ಯಾಯವಾಗುವ ಪ್ರಶ್ನೆ ಬಂದಿರುವಾಗ, ಅದನ್ನು ಪುನರಾಲೋಚನೆ ಮಾಡುವುದರಿಂದ ತೊಂದರೆಯಿಲ್ಲ. ಈ ದೇಶದಲ್ಲಿ ಯಾರೂ ಏನೂ ಬೃಹಸ್ಪತಿಗಳಲ್ಲ. ಕೆಟ್ಟದಾದಾಗ ಪುನರ್ವಿಮರ್ಶೆ ಮಾಡುವುದು ಅಗತ್ಯ. ಪಾನ ನಿರೋಧ ಬರುವುದಕ್ಕೆ ಮುಂಚೆ ಹೆಚ್ಚಿಗೆ ದುಡ್ಡು ಬರುತ್ತಿತ್ತು. ಈಗ ಅದೂ ಹೋಯಿತು, ಅನ್ಯಾಯವೂ ಆಯಿತು.

ಇನಾಂ ರದ್ದಿಯಾತಿ ಇಲಾಖೆಯ ವಿಷಯ ಟೆನೆನ್ಸಿ ಕಾನೂನು ಆಗುವುದಕ್ಕೆ ಮುಂಚೆ ಈಗ ಕೆಲವು ಕ್ಲಾಜುಗಳನ್ನು ಇಲ್ಲಿ ಮಾಡಿದ್ದಾರೆ. ಇದರಿಂದ ರೈತರಿಗೆ ಯಾವ ರೀತಿಯಲ್ಲೂ ಸುಖವಾಗುವುದಿಲ್ಲ. ಇನಾಂದಾರರಿಗೂ, ರೈತರಿಗೂ, ಟೆನೆನ್ಸಿಯವರಿಗೂ ಮತ್ತು ಜಮೀನ್‌ದಾರರಿಗೂ ಕೊನೆಯ ತೀರ್ಮಾನದವರಿಗೂ ಗಲಾಟೆಯಾಗುತ್ತಲೇ ಇರುತ್ತದೆ. ಈ ಕಾನೂನುಗಳನ್ನು ಅರ್ಧಂಬರ್ಧವಾಗಿ ಮಾಡುವುದರಿಂದ ದೇಶದಲ್ಲಿ ಜನಗಳ ಪರಿಸ್ಥಿತಿ ಈ ಕಾನೂನುಗಳ ರಚನೆಯ ಬಗ್ಗೆ ಸರ್ಕಾರದವರಲ್ಲಿ ತುಂಬಾ ಬೇಜಾರು ಆಗಿದೆ. ಈ ಸರ್ಕಾರದಿಂದ ನಮಗೆ ಏನೂ ಉಪಯೋಗವಾಗುತ್ತಿಲ್ಲವೆಂಬುದಾಗಿ ಜನಗಳು ಹೆಚ್ಚಿಗೆ ಬೇಜಾರು ಪಡುವ ಪರಿಸ್ಥಿತಿ ಬಂದಿದೆ.

ಇನ್ನು ಮೀನು ಸಾಗಾಣಿಕೆ ಮತ್ತು ಪಶುಪಾಲನೆ ಈ ಎರಡು ಇಲಾಖೆಗಳನ್ನು ಒಂದು ಮಾಡಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ೩೦೦ ಮೈಲಿಗಳವರೆಗೆ ಕರಾವಳಿ ಪ್ರದೇಶವಿರತಕ್ಕ ಕಡೆಗಳಲ್ಲಿ ಈ ವ್ಯವಸಾಯವನ್ನು ಹೆಚ್ಚು ಮಾಡುವ ಅವಶ್ಯಕತೆ ಇತ್ತೀಚೆಗೆ ಹೆಚ್ಚಾಗಿರುವುದರಿಂದ ಈ ಇಲಾಖೆಗಳನ್ನು ಪ್ರತ್ಯೇಕವಾಗಿ ಬೇರೆ ಬೇರೆಯಾಗಿರುವುದು ಬಹಳ ಒಳ್ಳೆಯದು ಎಂಬುದಾಗಿ ನಾನು ಸಲಹೆ ಮಾಡುತ್ತೇನೆ. ಮೀನು ಸಾಗಾಣಿಕೆಯ ಬಗ್ಗೆ ಮತ್ತು ಫಿಷರೀಸ್ ಇಲಾಖೆಯ ಅಭಿವೃದ್ಧಿಯ ಬಗ್ಗೆ ನನ್ನ ಮಾನ್ಯ ಸ್ನೇಹಿತರು ಅನೇಕ ಸಲಹೆಗಳನ್ನು ಈಗಾಗಲೇ ಕೊಟ್ಟಿದ್ದಾರೆ. ನಾನು ಸಹ ಸುಮಾರು ಐದಾರು ಕಮಿಟಿಗಳಲ್ಲಿ ಸದಸ್ಯಳಾಗಿ ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದೇನೆ. ಆದರೂ ಇದುವರೆಗೂ ಸಾಕಷ್ಟು ಮೀನಿನ ಕೈಗಾರಿಕೆಯ ಬಗ್ಗೆ ಪ್ರಯೋಜನವಾಗುತ್ತಿಲ್ಲ. ಇಂತಹ ದೊಡ್ಡ ಕರಾವಳಿ ಇರತಕ್ಕ ಪ್ರದೇಶಗಳನ್ನು ನಾವು ಹೆಚ್ಚಿಗೆ ಉಪಯೋಗ ಮಾಡುತ್ತಿಲ್ಲ. ಒಟ್ಟಿನಲ್ಲಿ ಮೀನುಗಳ ಕೈಗಾರಿಕೆಯ ಅಭಿವೃದ್ಧಿ ಬಗ್ಗೆ ಹೆಚ್ಚಿಗೆ ನಾವು ನಿಗಾ ಕೊಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ವಿಷಯದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಬಹಳ ಒಳ್ಳೆಯದು. ಅದು ಒಂದು ರಾಷ್ಟ್ರದ ಸಂಸ್ಥೆ ಎಂದು ಭಾವಿಸಬೇಕು. ವಿದ್ಯಾ ಮಂತ್ರಿಗಳು ಆರೀತಿಯಾಗಿ ಅದನ್ನು ನೋಡಬೇಕೆಂದು ಸಮಿತಿಯವರು ಸಲಹೆ ಮಾಡಿದ್ದಾರೆ. ಅದು ಬಹಳ ಪ್ರಾಮುಖ್ಯವಾದ ಅಂಶ. ಈ ವಿಶ್ವ ವಿದ್ಯಾನಿಲಯ ಒಂದು ರಾಷ್ಟ್ರದ ಸ್ವತ್ತು ಹೊರ್ತು ಎಂದಿಗೂ ಒಬ್ಬಬ್ಬರ ಸ್ವತ್ತು ಆಗುವುದಿಲ್ಲ. ಇಂಡಿಯಾ ದೇಶದ ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯ ವಿದ್ಯಾಭ್ಯಾಸ ಬಂದರೆ ಬಹಳ ಅನುಕೂಲ. ಒಂದೇ ರೀತಿಯ ಆಡಳಿತವಿದ್ದರೂ ಇನ್ನು ಹೆಚ್ಚು ಅನುಕೂಲ.

ಇನ್ನೂ ಅಗ್ರಿಕಲ್‌ಚರಲ್ ಇಲಾಖೆಯಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್ ಇರಬೇಕೆಂದು ಕಮಿಟಿಯವರು ಹೇಳಿರುವುದು ಉತ್ತಮ ಸಲಹೆಯೆಂದು ನಾನು ಹೇಳುತ್ತೇನೆ. ಈ ವ್ಯವಸಾಯ ಇಲಾಖೆ ದೇಶದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿರತಕ್ಕದ್ದು. ಸರ್ಕಾರ ವ್ಯವಸಾಯೋತ್ಪನ್ನಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕಾದುದು ಪ್ರಥಮ ಕರ್ತವ್ಯವಾಗಿದೆ. ಈ ಅಗ್ರಿಕಲ್‌ಚರಲ್ ವಿಷಯದಲ್ಲಿ ಅವರು ಹೇಳಿರುವ ಸಲಹೆಗಳನ್ನೆಲ್ಲಾ ನಾನು ಅನುಮೋದಿಸುತ್ತೇನೆ. ಈ ಇಲಾಖೆಯಲ್ಲಿ ಅಗ್ರಿಕಲ್‌ಚರಲ್ ಎಕ್ಸ್‌ಟೆನ್ಷನ್ ಆಫೀಸರ್ ಹುದ್ದೆಗಳನ್ನು ತೆಗೆದು ಹಾಕಿ ಡೆಪ್ಯುಟಿ ಡೈರೆಕ್ಟರ್‌ಗಳನ್ನು ನಾಲ್ಕರಿಂದ ಎರಡು ಹುದ್ದೆಗಳನ್ನು ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಇದರಿಂದ ಕೆಲಸ ಸರಿಯಾಗಿ ಆಗುತ್ತಿಲ್ಲವೆಂದು ಬೇರೆ ಹೇಳುತ್ತಾರೆ. ನಾನು ಹೇಳುವುದಿಷ್ಟೆ ಇದು ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ. ಎಷ್ಟೋ ಬುಲ್‌ಡೋಜರ್ಸ್ ಟ್ರಾಕ್ಟರ್ಸ್ ಮುರಿದು ಬಿದ್ದುಹೋಗಿವೆ. ಅವನ್ನು ಸರಿಯಾಗಿ ರಿಪೇರಿ ಮಾಡುವ ಬಗ್ಗೆ ಸರ್ಕಾರ ಹೆಚ್ಚಿಗೆ ನಿಗಾ ಕೊಡಬೇಕು. ಅವನ್ನು ಉಪಯೋಗಿಸುವವರು ಇವತ್ತಿನವರೆಗೂ ಸರ್ಕಾರಕ್ಕೆ ದುಡ್ಡು ಕೊಡುತ್ತಿಲ್ಲ. ಸರ್ಕಾರದವರೂ ಸಹ ಆ ದುಡ್ಡನ್ನು ಸರಿಯಾಗಿ ವಸೂಲು ಮಾಡುತ್ತಿಲ್ಲ. ಈ ಯೋಜನೆಯನ್ನು ಸರ್ಕಾರದವರು ಸರಿಯಾಗಿ ನೋಡುತ್ತಿಲ್ಲ. ಇನ್ನು ವ್ಯವಸಾಯ ಇಲಾಖೆಯಲ್ಲಿ ೧೫೮೪ ಜನ ಜವಾನರು ಇದ್ದಾರೆ. ಇವತ್ತು ಅವರು ಬಹಳ ಹೆಚ್ಚಾಗಿದ್ದಾರೆ ಕಡಿಮೆ ಮಾಡಬೇಕೆಂದು ಕಮಿಟಿಯವರು ಸಲಹೆ ಮಾಡಿದ್ದಾರೆ. ಇವತ್ತು ಆ ಸಂಖ್ಯೆಯನ್ನು ೧೫೦೦ಕ್ಕೆ ಇಳಿಸಿದರೆ ಎಷ್ಟರಮಟ್ಟಿಗೆ ಅನುಕೂಲವಾಗು

ತ್ತದೇ ಅಥವಾ ಅನಾನುಕೂಲವಾಗುತ್ತದೇ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಒಟ್ಟಿನಲ್ಲಿ ಈ ಕಮಿಟಿಯವರು ಬಹಳ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನೊಂದು ಸಲಹೆಯನ್ನು ಕೊಟ್ಟಿದ್ದಾರೆ. ಜಿಲ್ಲೆಗಳನ್ನು ಕಡಮೆ ಮಾಡಬೇಕೆಂದು ಬೇರೆ ಹೇಳಿದ್ದಾರೆ. ಚಿಕ್ಕಮಗಳೂರು ಜಿಲ್ಲೆಗೆ ಶರಾವತಿಯ ದೃಷ್ಟಿಯಿಂದ ಕೊಡಗು, ಮತ್ತು ಬಿಧರೆ ಚಿಕ್ಕ ಜಿಲ್ಲೆಗಳನ್ನು ಸೇರಿಸಿದರೆ ಬಹಳ ಅನುಕೂಲವಾಗುತ್ತದೆಂಬುದನ್ನು ಸರ್ಕಾರ ಮನಗಾಣಬೇಕು ಚಿಕ್ಕಮಗಳೂರು ಜಿಲ್ಲೆ ಹಾಸನ ಜಿಲ್ಲೆಗಿಂತಲೂ ೨೦೦ ಚದರಮೈಲಿ ವಿಸ್ತೀರ್ಣದಲ್ಲಿ ದೊಡ್ಡದು. ಅಲ್ಲಿ ಸಾವಿರಾರು ಎಕರೆಗಳಷ್ಟು ಅತ್ಯುತ್ತಮವಾಗಿ ಬೆಲೆಯಾಗುವಂಥ ಜಮೀನು ಇದೆ. ಸರ್ಕಾರ ಇದನ್ನು ಗಮನಿಸದೆಯೇ ಹಾಗೆಯೇ ಆ ಜಮೀನುಗಳೆಲ್ಲಾ ಪಾಳುಬಿದ್ದಿದೆ ಆ ಜಮೀನುಗಳನ್ನೆಲ್ಲಾ ಸಾಗುವಳಿಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ. ಮೈಸೂರು ದೇಶದಲ್ಲಿ ಆದಾಯವನ್ನು ಹೆಚ್ಚು ಕೊಡತಕ್ಕ ಜಿಲ್ಲೆಯೆಂದರೆ ಚಿಕ್ಕಮಗಳೂರು ಜಿಲ್ಲೆ ಮೊದಲನೆಯದು ಎಂಬುದಾಗಿ ಸರ್ಕಾರ ತಿಳಿಯಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಿಮ್ಮ ಜಿಲ್ಲೆಗೆ ಇನ್ನೂ ಕೆಲವು ಪ್ರಾಂತಗಳನ್ನು ಸೇರಿಸಿದರೆ......

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಾಗೆ ಸೇರಿಸಿದರೆ ಇನ್ನೂ ಒಳ್ಳೆಯದು.

ಇನ್ನು ಈಗಾಗಲೇ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಡೂರು, ಚನ್ನರಾಯಪಟ್ಟಣ, ಮೂಡ್ಲಗಿರಿ, ಸಕಲೇಶಪುರ-ಇವೆಲ್ಲಕ್ಕೂ ಅನುಕೂಲವಾಗುವಂತೆ ಒಂದು ರೈಲ್ವೆ ಮಾರ್ಗವನ್ನು ಹಾಕಲು ಸರ್ವೆಯಾಗಿ ಅದಕ್ಕೆ ೪ ಕೋಟಿ ೭೫ ಲಕ್ಷ ರೂಪಾಯಿಗಳ ಒಂದು ಅಂದಾಜು ಕೂಡ ರಾಜ್ಯಸರ್ಕಾರದವರು ಮಾಡಿದ್ದಾರೆಂದು ನನಗೆ ತಿಳಿದುಬಂತು. ಅದು ಬಹಳ ಪ್ರಾಮುಖ್ಯವಾದುದು ಕಬ್ಬಿಣ ಮತ್ತು ಮ್ಯಾಂಗನೀಸ್ ಲೋಹಗಳನ್ನು ತರಿಸುವುದಕ್ಕೆ ತುಂಬಾ ಇದರಿಂದ ಅನುಕೂಲವಾಗುತ್ತದೆ. ಆಕಡೆ ಸರ್ಕಾರ ಲಕ್ಷ್ಯ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಬಹಳ ಒಳ್ಳೆಯ ಮರಗಳು ಬೆಳೆಯುತ್ತವೆ. ಅವು ಬಹಳ ಬೆಲೆವುಳ್ಳವು. ಸರ್ಕಾರ ಇತ್ತಕಡೆಗೆ ಗಮನ ಕೊಟ್ಟರೆ ದೇಶಕ್ಕೂ ಉಪಯೋಗವಾಗುತ್ತದೆ, ಸರ್ಕಾರಕ್ಕೂ ಹೆಚ್ಚಿನ ಆದಾಯ ಸಿಗುತ್ತದೆ. ಕೇವಲ ಚಿಕ್ಕಮಗಳೂರು ಜಿಲ್ಲೆಯವರಿಗೆ ಮಾತ್ರ ಅನುಕೂಲವಾಗುವುದಲ್ಲದೆ, ಇತರ ಪಕ್ಕದ ಜಿಲ್ಲೆಯವರೆಗೂ ತುಂಬಾ ಪ್ರಯೋಜನ ವುಂಟಾಗುತ್ತದೆ. ಇದೂ ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಬತ್ತದ ಬೆಳೆಯೂ ಹೆಚ್ಚು ಸುಮಾರು ೪೦ ಸಾವಿರ ಎಕರೆಗಳಷ್ಟು ಜಮೀನು ಅದರಲ್ಲೂ ತರೀ ವ್ಯವಸಾಯಕ್ಕೆ ಅನುಕೂಲವಾಗುವ, ಮತ್ತು ಯೋಗ್ಯವಾಗಿರತಕ್ಕದ್ದಾಗಿವೆ. ಇವೆಲ್ಲವೂ ಪಾಳುಬಿದ್ದಿದೆ. ಆ ಕಡೆಗೆ ಸರ್ಕಾರದ ದೃಷ್ಟಿ ಹೋಗಬೇಕು. ಚಿಕ್ಕಮಗಳೂರು ಜಿಲ್ಲೆ ಈಗಿರುವುದಕ್ಕಿಂತಲೂ ಇನ್ನೂ ಅಭಿವೃದ್ಧಿಯಾಗತಕ್ಕ ಜಿಲ್ಲೆಯಾಗಿದೆ. ಸರ್ಕಾರದವರು ಈ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚು ಗಮನಕೊಟ್ಟರೆ, ದೇಶದ ಉತ್ಪತ್ತಿ ಬಹಳವಾಗಿ ಹೆಚ್ಚುತ್ತದೆಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† Sri V. S. PATIL (Belgaum–I).—Mr. Speaker, we are glad the Government has given us an opportunity to express our views on this most important document, *i.e.*, Report of the Resources and Economy Committee. One thing that strikes me from the very beginning is, this report as well as the remarks of the hon'ble members relate to all the departments of the Government. But, hardly one or two ministers representing the Government remain present here. Is it possible for the Minister for Finance to answer all the criticisms and points raised by various members on all the departments of the Government ? It is physically impossible. So I should like to suggest that when such important matters are discussed on the floor of this House all the ministers must be present. Otherwise it would only be a cry in the wilderness. What is the use of wasting our energy by studying these documents and expressing our views before those empty chairs ?

Sri B. D. JATTI.—This is not a budget discussion. The hon'ble members are discussing about the recommendations of the Committee and the speeches are recorded here. After reading all the valuable suggestions made by the hon'ble members the Government will have an opportunity to take a decision.

ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಈ ಭಾಷಣಗಳನ್ನೆಲ್ಲಾ ಮಂತ್ರಿಗಳು ನಿಜವಾಗಿ ಓದುತ್ತಾರೆಯೆ ?

Sri V. S. PATIL.—I challenge whether the Government would read even 5 per cent of the speeches that have been recorded in this House. It is a physical impossibility.

Sri B. D. JATTI.—For the information of the hon'ble member I may say that whatever speeches that are made here, copies of those speeches are sent to us and everything is gone through thoroughly. Only after going through them that replies are given. If the hon'ble member gives a challenge, I do not know what to reply.

Sri V. S. PATIL.—I say that because the records would go to hundreds of pages. It is a physical impossibility to go through all the speeches and then reply.

Sri B. D. JATTI.—If the hon. member wants to examine he can do it and see whether I will reply to his points or not.

Sri V. S. PATIL.—That is why, I suggest in order to maintain the dignity and prestige of this House, the concerned Ministers should be here.

There may be one difficulty to do that because the Council meetings are also going on and some Ministers might be there. For that I should like to suggest that the meetings of the Council should be held in the morning or the meetings of the Assembly should be held in the morning so that it might facilitate the Ministers to attend to both the Houses punctually and regularly.

5-00 P.M.

I should like to offer a few remarks regarding this most valuable document that has been produced by the Committee members. But before that, I should like to ask the Hon'ble Finance Minister as to what is the actual expenditure that has been incurred for bringing out this voluminous work.

Sri B. D. JATTI.—Yes, Sir. For the Hon'ble Member's information, I may say it is Rs. 82,000.

Sri V. S. PATIL.—Good. So this is worth Rs 82,000. I should like to draw the attention of the Hon'ble Ministers and the Government to the following pages of the report, because, there is no time to quote all they have stated. I should like to refer to pages 1-3, 16, 17, 25, 27, 32, 34, 38, 45, 48, 60, 62, 63, 66, 85, 98.

* * *

108, 127, 136, 139, 140, 141, 151, 154, 160, 207, 210, 225,-257, 260, 261, 264, 266, 272, 424, 426, 427, 528, 529 and 531. All these pages contain very good remarks and suggestions made by the Hon'ble Members of this Committee in order to improve the present conditions. On a broad line, the report is based on the present conditions or the defects of the present administration.

